ಬೆಲೆ: ಎರಡು ಆಣೆ

ಕರ್ಮವೀರ

ವರ್ಗಣಿ ದರ
(ಅಂಚೆವೆಚ್ಚ ಸೇರಿ)
ವರ್ಷಕ್ಕೆ ರೂ. ೬-೪-೦
೬ ತಿಂಗಳಿಗೆ ,, ೩-೪-೦
೩ ತಿಂಗಳಿಗೆ ,, ೧-೧೨-೦
ವ್ಹಿ. ಪಿ. ಮೂಲಕ
ತರಿಸಿಕೊಂಡಲ್ಲಿ ೫ ಆಣೆ
ಹೆಚ್ಚಿಗೆ ಬೀಳುವದು.

KARMAVEER
WEEKLY
HUBLI
MAR. 18
1946

ಸಂಪಾದಕರು :
ಬ. ರಾ. ಪುರೋಹಿತ, ಎಂ. ಎ.

ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

Editor : B. R. Purohit, M. A.

ಸಂಪುಟ ೧೭] 卐 ಹುಬ್ಬಳ್ಳಿ, ಸೋಮವಾರ ತಾರೀಖು ೧೮ — ೩ — ೧೯೪೬ 卐 [ಸಂಚಿಕೆ ೪೭

ಪ್ರಜಾತಂತ್ರಕ್ಕೆ ಸಂಧಿಕಾಲವೊದಗಿ ಬಂದಿದೆ

ಸರ್ವಾಧಿಕಾರಿಗಳ ಯುಗದಲ್ಲಿ ಪ್ರಜಾತಂತ್ರದ ಸರಕಾರಗಳ ವಿಲಂಬಕ, ಆಲಸ್ಯಶೀಲ ಧೋರಣೆ ಸಾಲದು: ಸರಕಾರಗಳನ್ನೆದುರಿಸಿರುವ ಹೊಸ ಸಮಸ್ಯೆಗಳು

.... ಉಯಿ ಫಿಶರರಿಂದ ....

ಮೂರನೆ ಮಹಾಯುದ್ಧದ ಮಾತುಗಳು ಕೇಳಬರತೊಡಗಿವೆ. ಅವನ್ನು ಪರಾಜಿತ ಅಚ್ಚಿನ ರಾಷ್ಟ್ರಗಳು ಹೂಡಲಾರವು. ಅವು ಕುಸಿದುಬಿದ್ದಿವೆ, ಅವುಗಳನ್ನು ಆಕ್ರಮಿಸಲಾಗಿದೆ. ಈ ಚಿಂತೆ ಉದ್ರಿಕ್ತವಾಗಿರುವದು ವಿಜಯಿಗಳ ನಡುವಣ ಸಂಬಂಧ ಕೆಟ್ಟಿರುವದರಿಂದ. ಇದೀಗ ಜನರನ್ನು ಚಿಂತೆಗೀಡು ಮಾಡಿರುವದು.

ಹಳೆಯ ಕತೆ

ಹಿಂದೆ ಯುದ್ಧಗಳಲ್ಲಿ ಪರಿಣಮಿಸಿದ ಪರಿಸ್ಥಿತಿಗಳಿಗೂ ಇಂದಿನದಕ್ಕೂ ಇರುವ ಸಾಮ್ಯವನ್ನು ನೋಡಿದರೆ ಗಾಬರಿಯಾಗಲು ಕಾರಣವಿದೆ. ಇವೆಲ್ಲ ಹಿಂದೆ ನೋಡಿದ್ದೇ: ಚಿಕ್ಕ ರಾಷ್ಟ್ರಗಳನ್ನು ದೊಡ್ಡವುಗಳು ಆಕ್ರಮಿಸಿದ್ದು; ಜಗತ್ತನ್ನು ತಮ್ಮೊಳಗೆ ಹೇಗೆ ಹಂಚಿಕೊಳ್ಳಬೇಕೆಂದು ದೊಡ್ಡ ರಾಷ್ಟ್ರಗಳಲ್ಲಿ ಐಕಮತ್ಯವಿಲ್ಲದಿರುವದು; ಅಂತಾರಾಷ್ಟ್ರೀಯತೆಯ ಮುಸುಕಿನಲ್ಲಿ ಉಗ್ರ ರಾಷ್ಟ್ರೀಯತೆ; ಆರ್ಥಿಕ ಯುದ್ಧ, ಹಣಕಾಸಿನ ಯುದ್ಧ; ಬಂಡುಗಾರ ಮತ್ತು ಪ್ರಜೆಗಳಗುಂಡ ಯುದ್ಧ; ಯುದ್ಧದ ಯಾತನೆಗಳನ್ನು ಅನುಭವಿಸಿದ ಕೋಟ್ಯಂತರ ಜನರಿಗೆ ಪ್ರತಿಸಂಸ್ಥೆಬುದ್ಧಿಯ ಶಾಂತಿಕರಾರಿನ ಯಾತನೆ; ನ್ಯಾಯ ಮತ್ತು ಜನಹಿತಕ್ಕೆ ವಿಘಾತಕವಾದ ಅಧಿಕಾರ ಲಾಲಸೆಯ ಸ್ಪರ್ಧೆ; ಸರಕಾರಗಳ ನಿಸ್ಸಹಾಯತೆ; ಸರಕಾರಗಳ ಮುಂದಿನ ಸಾಮಾನ್ಯರ ನಿಸ್ಸಹಾಯತೆ; ತಮ್ಮ ಮುಂದಾಳ್ತನ ಎಲ್ಲಿ ತಪ್ಪಿ ಹೋಗುವದೋ ಎಂಬ ಭಯದಿಂದ ಮುಂದಾಳುಗಳು ಸತ್ಯವನ್ನು ಮುಚ್ಚಿಡುವದು; ಅಧಿಕಾರಿವರ್ಗದ ಜಾಡ್ಯಯುಕ್ತ ಆಶಾವಾದ; ಸಮಸ್ಯೆಗಳನ್ನು ಇಚ್ಛಾಪೂರ್ವಕ ಬಿಡಿಸಬಹುದೆಂಬದರಲ್ಲಿ ವಿಶ್ವಾಸದ ಅಭಾವ; ಸುದೈವದ ವಿಶ್ವಾಸದಲ್ಲಿ ಇವೆ ಎರಡನೆ ಮಹಾಯುದ್ಧಕ್ಕೆ ಕಾರಣವಾದ ಪರಿಸ್ಥಿತಿಗಳು. ನಾವು ಆ ಯುದ್ಧವನ್ನು ಹೋರಾಡಿದ ರೀತಿಯಿಂದಾಗಲಿ, ನಾವು ಮಾಡಿಕೊಂಡ ಶಾಂತಿಯ ರೀತಿಯಿಂದಾಗಲಿ ನಾಶವಾದವೆಂದು ಯಾವ ಪ್ರಾಮಾಣಿಕ ಮನುಷ್ಯನೂ ಹೇಳಲಾರ. ನಿಜ— ಹಿಟ್ಲರ್, ಮುಸಲೋನಿ ಮತ್ತು ಜಪಾನಿ ಯುದ್ಧಪ್ರಿಯರು ನಿರ್ನಾಮವಾಗಿದ್ದಾರೆ. ಜರ್ಮನ್ ಇಟಾಲಿಯನ್, ಜಪಾನಿ,ಸರಕಾರಗಳು ಮಣ್ಣು ಮುಕ್ಕಿವೆ. ಇಷ್ಟೆಲ್ಲ ಜನರು ತಮ್ಮ ಕಣ್ಣು ಕೈಕಾಲುಗಳನ್ನು, ಆಯುರಾರೋಗ್ಯಗಳನ್ನು, ನೆತ್ತರು ಕಣ್ಣೀರುಗಳನ್ನು ಕೊಟ್ಟು ಸಾಧಿಸಿದ ಮಹಾಕೃತಿಗಳು ಇದಕ್ಕಿಂತ ಉತ್ತಮ ಜಗತ್ತಿನ ತಳಹದಿಗಳಾದರೆ ಮಾತ್ರ ಶಾಂತಿಸಮಾಧಾನ ಬರಬಲ್ಲವು ಆದರೆ ಅವು ರಾಷ್ಟ್ರೀಯ ಸ್ವಾರ್ಥ, ಸ್ವೇಚ್ಛಾಚಾರ, ಒಪ್ಪಂದಭಂಗಗಳಿಗೆ ಇನ್ನಷ್ಟು ಅವಕಾಶ ಒದಗಿಸಿಕೊಟ್ಟವೆ.

ನಾಗರಿಕತೆಯ ಸಂಧಿಕಾಲ

ಇದು ಕೇವಲ ರಾಜಕೀಯ ಬಿಕ್ಕಟ್ಟಲ್ಲ. ಇದು ನಾಗರಿಕತೆಯನ್ನೇ ಎದುರಿಸಿದ ಬಿಕ್ಕಟ್ಟು. ಅಂತರಾಷ್ಟ್ರೀಯ ಸಂಬಂಧದಲ್ಲಿ, ಐಕ್ಯವುಂಟು ಮಾಡುವ ನೈತಿಕ ತತ್ವವಿಲ್ಲ; ಸಾಮಾನ್ಯ ಕ್ರಿಯಾಕಾರ್ಯಕ್ರಮವಿಲ್ಲ; ಸಾಮಾನ್ಯ ಗುರಿ, ಅಥವಾ ಸ್ಪಷ್ಟ ಉದ್ದೇಶವಿಲ್ಲ.

ಯುದ್ಧ ಐದು ವರ್ಷಕ್ಕೂ ಹೆಚ್ಚುಕಾಲ ನಡೆಯಿತು. ಆದರೂ ಯುದ್ಧದಿಂದ ಆದ ಹಾನಿ, ಭಗ್ನಾವಶೇಷಗಳ ನಡುವೆ ವಾಸಿಸುತ್ತಿರುವವರ ಪಾಲಿಗೆ ಸಹಿತ, ಅದೊಂದು ಬರಿ ಸಸ್ಮಿತ ಮಾತ್ರ ವಾಗಿದೆ. ಏಕೆಂದರೆ ಅದರ ನಂತರ ಬಂದುದಕ್ಕೂ ಅದರ ಹಿಂದೆ ಇದ್ದುದಕ್ಕೂ ಬಹಳ ಹೋಲಿಕೆಯುಂಟು.

ಮಾನವ್ಯ ಎತ್ತ ಸಾಗಿದೆ? ಅಧಿಕಾರ ಸಂಪನ್ನರಾದ ರಾವರೂ ಇದನ್ನು ಅರಿತಿರುವರೆ? ಅದು ಎತ್ತ ಸಾಗಿದೆಯೋ ಅದಕ್ಕೆ ಯಾರಾದರೂ ಹೊಣೆಗಾರರಿರುವರೆ? ಗ್ರಹಗಳ ಗತಿಗೆ ಒಂದು ನಿಯಮವುಂಟು. ಅದರಿಂದಲೇ ಪರಸ್ಪರ ಸಂಘಟನೆಯಾಗದೆ ಅವು ಚಲಿಸುತ್ತವೆ. ರಾಷ್ಟ್ರಗಳ ಮಾತು ಹಾಗಲ್ಲ. ಅವು ಕಾಲಕಾಲಕ್ಕೆ ಒಂದರಕ್ಕೊಂದು ತಾಕಲಾಡುತ್ತವೆ. ಇಂಥ ಸಂಘಟ್ಟನೆಗಳನ್ನು ತಡೆಯಲು ಯುದ್ಧೋತ್ತರ ಅಂತರ್‌ರಾಷ್ಟ್ರೀಯ ರಾಜಕಾರಣ ಏನಾದರೊಂದು ನಿಯತಿಯನ್ನು ಕಂಡ ಹಿಡಿದಿದೆಯೆ? ಇಲ್ಲ. ಪರಮಾಣು ಬಾಂಬಿನ ಭಯಾನಕತೆಯಿಂದ ನಾವೇನೂ ಪಾಠ ಕಲಿತಂತಿಲ್ಲ.

ಅಧಿಕಾರ ದೇವತೆ

ಮೊದಲನೆ ಮಹಾಯುದ್ಧ ಲಕ್ಷಾಂತರ ಜನರನ್ನು ಶಾಂತಿವಾದಿಗಳನ್ನಾಗಿ ಮಾಡಿತು. ಎರಡನೆ ಮಹಾಯುದ್ಧ ಲಕ್ಷಾಂತರ ಜನರನ್ನು ಯುದ್ಧಪ್ರಿಯ ಶಾಂತಿನಾಶಕರನ್ನಾಗಿ ಮಾಡಿತು. ಅವರು ಶಾಂತಿವಾದಿಗಳೂ ಹೌದು, ವಕ್ರಬುದ್ಧಿಗಳೂ ಹೌದು, ಯುದ್ಧವಾದಿಗಳೂ ಹೌದು. ಯುದ್ಧವೆಂದರೆ ದುಂದುವೆಚ್ಚವೆಂದು ಅವರೇ ಹೇಳುತ್ತಾರೆ, ಯುದ್ಧ ಅನಿವಾರ್ಯವೆಂದೂ ಅವರೇ ಹೇಳುತ್ತಾರೆ, ಯುದ್ಧಕ್ಕೆ ಸಿದ್ಧತೆಯನ್ನೂ ಅವರೇ ಮಾಡುತ್ತಾರೆ. ಈಯುದ್ಧದಕಾಲದಲ್ಲಿ ಉಳಿದ ದೇವರೊಬ್ಬನೆ: ಅಧಿಕಾರ ದೊಡ್ಡ ಸಂಸ್ಥಾಪಕಗಳು ವಿಚಾರಗಳನ್ನೂ ತತ್ವಗಳನ್ನೂ ಸೋಲಿಸುತ್ತವೆ. ಗೆದ್ದವನೇ ಅರಸ— ಅವನು ಶುದ್ಧ ಪಾತಕಿಯಿದ್ದರೂ ಚಿಂತೆಯಿಲ್ಲ. ಗೆದ್ದವನನ್ನೇ ಬೆಂಬತ್ತಿ ಹೋಗಿರಿ— ಅವನು ನಿಮ್ಮನ್ನು ತನ್ನ ಸೆರೆಮನೆಯಲ್ಲಿ ಕೂಡಿದರೆ ಕೂಡ. ಮುಳ್ಳುಗಳು, ವ್ಯಕ್ತಿತ್ವದ ಹತ್ಯೆ ನ್ಯಾಯಗೆಟ್ಟ ಕೃತಿಗಳು— ಇವೆಲ್ಲದರಿಂದ ಹಾನಿಯೇನು? ಧ್ಯೇಯವೊಂದೆ. ಅಧಿಕಾರ. ಕಮ್ಯುನಿಸ್ಟರೂ ಫ್ಯಾಸಿಸ್ಟರೂ ಈ ಅಭಿಪ್ರಾಯದ ಮುಖ್ಯ ಪುರಸ್ಕರ್ತರು. “ ನಮಗೆ ಅಧಿಕಾರ ದೊರೆತಾಗ ನಮಗೆ ಆಗಲು ಮಾಡಿದ ಅನ್ಯಾಯಗಳನ್ನೆಲ್ಲ ತಿರುಗಿ ಉಣಿಸುತ್ತೇವೆ ” ಎಂಬುವೇ ಅವರ ರಾಮಬಾಣದೋಪಾಯ. ಅಧಿಕಾರ ದೇವತೆಯ ಆರಾಧಕರು ಹೇಳುತ್ತಾರೆ: ‘ ನೈತಿಕತೆಯೆಂಬುದು ಹಳೆಯ ಶಬ್ದ. ಧ್ಯೇಯವಾದ? ಈ ಪರಮಾಣು ಯುಗದಲ್ಲಿ? ನಿನಗೆ ಹುಚ್ಚು ಗಿಚ್ಚು ಹಿಡಿದಿಲ್ಲವಷ್ಟೆ? ” “ಗಾಂಧಿ ಬರಿ ಕನಸುಗಾರ” ಎನ್ನುತ್ತಾರೆ ಈ ವಕ್ರಬುದ್ಧಿ “ವಾಸ್ತವವಾದಿ”ಗಳು “ನೆಹರೂ ಈ ಜಗತ್ತಿನವರಲ್ಲ. ಅವರಿಗೆ ವಂಚಿಗೊತ್ತಿಲ್ಲ. ಅವರು ತಮ್ಮ ಬಗ್ಗೆ ಕೂಡ ಸತ್ಯ ಮಾಡುದನ್ನೇ ಹೇಳುತ್ತಾರೆ. ಅವರಿಗೆ ವ್ಯಕ್ತಿಯಲ್ಲಿ ವಿಶ್ವಾಸವಿದೆ. ”

ಯಂತ್ರದ ಆರಾಧನೆ

ಸರ್ವಾಧಿಕಾರಿಗಳು ಯಂತ್ರಕ್ಕಾಗಿ ಕೆಲಸಮಾಡುತ್ತಾರೆ, ಅದನ್ನೇ ಆರಾಧಿಸುತ್ತಾರೆ. ಅಧಿಕಾರವ ಯಂತ್ರ. ಮನುಷ್ಯನನ್ನು ದಾಸನಾಗಿ ಮಾಡಿಕೊಳ್ಳುವ ಅವನನ್ನು ಹಾಳುಗೆಡಹುವ ಅಧಿಕಾರ ಫ್ಯಾಸಿಸ್ಟ್ ಇಟಲಿಯ ವಿದೇಶಮಂತ್ರಿ ಸಿಯಾನೊನ ಪ್ರಕಟಿತವಾದ ದಿನಚರಿಯಿಂದ ಮುಸೋಲಿನಿಗೆ ಮಾನವಪ್ರಾಣಗಳೆಂದರೆ ಎಷ್ಟು ದುರ್ಲಕ್ಷವಿತ್ತೆಂಬುದು ಸ್ಪಷ್ಟವಾಗುತ್ತದೆ. ಇಟಲಿಯಲ್ಲಿ ನಿರಾಶಾಜನಕವಾದ ಆಹಾರ, ಕಚ್ಚಾ ಸಾಮಗ್ರಿ, ಹಣಗಳ ಕೊರತೆಯಿದ್ದಾಗ ತನ್ನ ಅಸಜ್ಜಿತ ಸೈನಿಕರನ್ನು ಅರಿಯಾದ ರಂಗದಲ್ಲಿ ಸಾಯುವ ಸಲುವಾಗಿ ಹಿಟ್ಲರನು ಹೆಚ್ಚು ಹೆಚ್ಚು ತೆಗೆದುಕೊಳ್ಳಬೇಕೆಂದು ಮಾತ್ರ ಆತುರಪಡುತಿದ್ದನು. ಅವನಿಗೆ ಬೇಕಾಗಿತ್ತು ಅವರ ‘ಕೀರ್ತಿ’ಯಲ್ಲಿ ಪಾಲು. ‘ಇಟಲಿ’ ‘ರಾಷ್ಟ್ರ’ ಎಂಬುದು ಅವನ ಪಾಲಿಗೆ ಸಜೀವ ಜನತೆಗಿಂತ ತೀರ ಭಿನ್ನವಾದ ಏನೋ ಒಂದಾಗಿತ್ತು. ತನ್ನ ದೇಶ ಕುಸಿದು ಬೀಳಲು ಸಿದ್ಧವಾಗಿದ್ದಾಗಲೂ ಮುಸೋಲಿನಿಗೆ ಇನ್ನೊಂದು ತುಣುಕು ಭೂಮಿಯನ್ನು ನುಂಗುವ ಚಿಂತೆ ಹಿಡಿದಿತ್ತು. ಅವನಿಗ ಬೇಕಾಗಿತ್ತು ಬಲಿಷ್ಠ ಇಟಲಿ— ಮಾತ್ರ ದುರ್ಬಲು ಕಾರ್ಮಿಕರಂಥ ಜನತೆಯಿಂದ ತುಂಬಿದ್ದು. ಅಧಿಕಾರ ಯಂತ್ರವನ್ನು ಇನ್ನಷ್ಟು ಬಲಗೊಳಿಸುವ ಸಲುವಾಗಿಯೆ ಸರ್ವಾಧಿಕಾರಿಗಳಿಗೆ ಹೆಚ್ಚಿನ ಅಧಿಕಾರದ ಲಾಲಸೆಯಿದೆ.

ಸರ್ವಾಧಿಕಾರಿ ಯುಗ

ನಾವು ಸರ್ವಾಧಿಕಾರಿ ಯುಗದಲ್ಲಿ ಜೀವಿಸುತ್ತಿದ್ದೇವೆ ಅದು ೧೯೩೯ ರಲ್ಲಿ ಪ್ರಾರಂಭವಾಯಿತು. ಯುದ್ಧ ಅದನ್ನು ಮುಗಿಸಲಿಲ್ಲ. ಸರ್ವಾಧಿಕಾರಿ ರಾಷ್ಟ್ರಗಳಲ್ಲಿ ಏಕಮಾತ್ರ ನಿರ್ಣಾಯಕವಾದ ಸ್ವೇಚ್ಛಾಶಕ್ತಿ ಪ್ರಯೋಗವೇ ಜಗತ್ತಿನಲ್ಲೆಲ್ಲ ನಿರ್ಣಾಯಕವಾಗಬಾರದೆಂದು ಯುದ್ಧವನ್ನು ಹೂಡಲಾಯಿತು. ಪ್ರಬಲ ಸರ್ವಾಧಿಕಾರಿ ರಾಷ್ಟ್ರಗಳನ್ನು ಯುದ್ಧ ನಿರ್ನಾಮ ಮಾಡಿತು. ಆದರೂ ಈಗ ಜಾಗತಿಕ ವ್ಯವಹಾರದಲ್ಲಿ ಶಕ್ತಿಯೇ ಏಕಮಾತ್ರ ನಿರ್ಣಾಯಕವಾಗಿದೆ. ನ್ಯಾಯಕ್ಕೆ ಬೆಂಬಲವೀಯಲು ಶಕ್ತಿ ಬೇಕೇ ಬೇಕು. ಆದರೆ ನ್ಯಾಯ ಬಿಟ್ಟ ಶಕ್ತಿ ಸರ್ವಾಧಿಕಾರ. ಬುದ್ಧಿಯಿಲ್ಲದ ಶಕ್ತಿಪ್ರಯೋಗಶೂನ್ಯವಾದ ಶಕ್ತಿಗಾಗಿಯೇ ಶಕ್ತಿ ಪ್ರಯೋಗವೇ ಫ್ಯಾಸಿಝಂ. ಶಕ್ತಿಯ ರಾಜ್ಯ ಜನಶಕ್ತಿಗೆ ಅತ್ಯಂತ ಅಪಾಯಕಾರಿಯಾಗಿದೆ.

೧೯೩೬, ೧೯೩೭ ಅಥವಾ ಕೊನೆಯ ಪಕ್ಷಕ್ಕೆ ೧೯೩೮ರಲ್ಲಾದರೂ ಪ್ರಜಾಸತ್ತೆಗಳು ಯುದ್ಧದ ಅಪಾಯದತ್ತ ಎಚ್ಚತ್ತಿದ್ದರೆ ಯುದ್ಧವನ್ನು ತಡೆಯಬಹುದಾಗಿತ್ತು. ಬದಲಿಗೆ ಅವು “ಮಿತ್ರ” ಪಕ್ಷಗಳ ಜೋಗಪಿಳದಿಂದ ಜೋಂಪೇರದವು ಏನಿಲ್ಲವಿದ್ದರೂ ಮಂಚೂರಿಯಾ,ಇತಿಯೋಪಿಯಾ, ಸ್ಪೇನಗಳಲ್ಲಿ “ತಟಸ್ಥ”ನಾಗಿರುವದರಿಂದ ತಮ್ಮ ಹುಟ್ಟಿಗೆ ಶಾಂತಿ ಸುರಕ್ಷಿತವೆಂದು ಅವುಗಳಿಗೆ ಹೇಳಲಾಯಿತು ಅಗ ಬಂತು ಯುದ್ಧ.

ತಮ್ಮ ಅಸ್ತಿತ್ವಕ್ಕೇ ಬಂದ ಗಂಡಾಂತರದತ್ತ ಪ್ರಜಾತಂತ್ರಗಳಲ್ಲಿ ಈ ಆಲಸ್ಯವೇಕೆ? ಅವುಗಳಲ್ಲಿ ಪ್ರತ್ಯೇಕತಾವಾದ, ದುಷ್ಟರನ್ನು ಸಂತುಷ್ಟಿಗೊಳಿಸುವ ಹವ್ಯಾಸ, ನಿಷ್ಕ್ರಿಯತೆಯೇಕೆ?

ಪ್ರಜಾಸತ್ತೆಯ ದೌರ್ಬಲ್ಯ

ಆಧುನಿಕ ಪ್ರಜಾಸತ್ತಾವಾದ ಯಾವ ಉದ್ದೇಶಸಾಧನೆಗೂ ಮೀಸಲಾಗಿಲ್ಲ. ಅದೊಂದು ಜೀವನ ಪದ್ಧತಿ ಅಷ್ಟೆ. ಪ್ರಜಾಸತ್ತೆಯೆಂದರೆ ಒಂದು ಬಗೆಯ ವಿಶ್ರಾಂತಿ. ಅದರಲ್ಲಿರುವ ಉತ್ತೇಜಕ ಜೀವನಕ್ಕೋ, ಹಣಕ್ಕೊ ಅಥವಾ ಇತರ ಯಶಸ್ಸುಗಳಿಗೆಂದೋ ಆಗುವ ವೈಯಕ್ತಿಕ ಹೋರಾಟಗಳಿಂದ ಉದ್ಭೂತವಾಗುತ್ತದೆ.

ಸರ್ವಾಧಿಕಾರಗಳು ಶಾಶ್ವತ ಸಾರ್ವಜನಿಕ ಕ್ರಿಯೆಯ ಮೂಲಕ ಸಾಗುತ್ತವೆ. ಸರ್ವಾಧಿಕಾರಿ ಸರಕಾರಗಳು ತಮ್ಮ ಪ್ರಜೆಗಳನ್ನು ಯಾವಾಗಲೂ ಕ್ರಿಯಾತತ್ಪರರಾಗಿಟ್ಟಿರುತ್ತವೆ. ಆದರೆ ಪ್ರಜಾತಂತ್ರದ ಸಾಮಾನ್ಯ ಸ್ಥಿತಿ ಸಾಮೂಹಿಕ ನಿಷ್ಕ್ರಿಯೆ. ಆಧುನಿಕ ನಾಗರಿಕತೆಯಲ್ಲಿ ಅನ್ಯಾಯದ ವಿರುದ್ಧ ಹೋರಾಡುವ ಪ್ರವೃತ್ತಿ ಕಡಿಮೆಯಾಗಿ ಬಿಟ್ಟಿದೆ— ಸರ್ವವ್ಯಾಪಿ ಅನ್ಯಾಯಗಳ ಅನುಭವದಿಂದಲೋ ಏನೊ. ಧರ್ಮವು ಲೋಕಕ್ಕೆ ವಿಶ್ವಾಸ ಹುಟ್ಟಿಸಿ ಇಂದಿನ ಮನಸ್ಸಿಗೆ ನಾಳೆಯ ಮುಲಾಮು ಹಚ್ಚಿ ಕೆರಳಿಸಲ್ಲುವ ಸ್ವಭಾವಕ್ಕೆ ತಣ್ಣೀರು ಎರಚುತ್ತದೆ. ವೈಯಕ್ತಿಕವಾದ ವ್ಯಯಕ್ತಿಕ ತರದ ಮೋಕ್ಷವನ್ನೇ ಹೇಳುತ್ತದೆ ಹೀಗೆ ಪ್ರಜಾತಂತ್ರಾತ್ಮಕ ಜನತೆ ಎಚ್ಚರಬೇಕಾದರೆ ಒಂದು ಪರ್ಲ ಹಾರ್ಬರದಂತಹ ಅಂಕುಶ ಚುಚ್ಚಬೇಕು. ಪ್ರಜಾತಂತ್ರಗಳಲ್ಲಿ ನಿಜವಾದ ರಾಷ್ಟ್ರೀಯಕ್ರಿಯೆ ಅಪರೂಪವಾಗಿಯೇ ಆಗುತ್ತದೆ. ರಾಷ್ಟ್ರದ ಯಾವುದೊಂದು ಅಲ್ಪಸಂಖ್ಯಾಕ ವರ್ಗ— ಅದು ಕೂಲಿಕಾರರಿರಲಿ ಉದ್ದಿಮೆಗಾರರಿರಲಿ— ಕ್ರಿಯೆ ಬೇಕೆನ್ನುತ್ತದೆ. ಆದರೆ ಅದು ತನ್ನ ಉದ್ದೇಶ ಸಾಧಿಸಬೇಕಾದರೆ ಬಹುಸಂಖ್ಯಾಕರ ವಿರೋಧವನ್ನು ಅಥವಾ ಆಲಸ್ಯವನ್ನು ಸೋಲಿಸಬೇಕು.

ಜನಾಭಿಪ್ರಾಯದಲ್ಲಿರುವ ಭಿನ್ನತೆಯ ನೆವದಿಂದ ಪ್ರಜಾತಂತ್ರ ಸರಕಾರಗಳಿಗೆ ನಿಷ್ಕ್ರಿಯವಾಗಿರಲು ಸುಲಭವಾಗುತ್ತದೆ. ಕೆಲವೇಳೆ ಈ ಭಿನ್ನಾಭಿಪ್ರಾಯಗಳು ಅವುಗಳ ಕೈಕಟ್ಟಿರುತ್ತವೆ. ಪ್ರಜಾತಂತ್ರದ ಧ್ಯೇಯವೆಂದರೆ ಬಹುಸಂಖ್ಯಾಕರಿಂದ ಅಲ್ಪಸಂಖ್ಯಾಕರನ್ನೂ ಅಲ್ಪಸಂಖ್ಯಾಕರಿಂದ ಬಹುಸಂಖ್ಯಾಕರನ್ನೂ ಒಂದು ಅಲ್ಪಸಂಖ್ಯಾಕರಿಂದ ಇನ್ನೊಂದನ್ನೂ ರಕ್ಷಿಸುವದು. ಇದರಿಂದಲೇ ಪ್ರಜಾತಂತ್ರದ ಜಡತೆ.

(೬ ನೇ ಪುಟ ನೋಡಿರಿ)

ಭಾರತದಲ್ಲಿಯ ಶಿಕ್ಷಣ

ಮೂಲ ಲೇಖಕರು
ಶ್ರೀ. ಶಾಮಪ್ರಸಾದ ಮುಕರ್ಜಿ

ಕನ್ನಡಿಸಿದವರು
ನೆಗಳೂರು ರಂಗನಾಥ

ಈಗ ಪ್ರಚಲಿತವಿದ್ದ ಶಿಕ್ಷಣ ಪದ್ಧತಿಯು ೧೯ನೆಯ ಶತಕದ ಮೊದಲು ಭಾಗದಲ್ಲಿ ಬಳಕೆಯಲ್ಲಿ ಬಂದಿತ್ತು ಆಗ ಭಾರತೀಯವಾದ ಇದರಿಂದ ಬೇರೆಯಾದ ಒಂದು ಪದ್ಧತಿ ರೂಢಿಯಲ್ಲಿತ್ತು ಪ್ರಾಥಮಿಕ ಮತ್ತು ಉಚ್ಚ ಶಿಕ್ಷಣಕ್ಕೂ ಅನುಕೂಲವಿತ್ತು. ದೇಶೀಯ ವಿದ್ಯಾಸಂಸ್ಥೆಗಳು ಆ ಕಾಲದ ಪರದೇಶೀಯ ಪಾಶ್ಚಾತ್ಯ—ಸಂಸ್ಥೆಗಳಕಿಂತ ಒಳ್ಳೆಯವೂ ಇರಲಿಲ್ಲ. ಕೆಟ್ಟವೂ ಇರಲಿಲ್ಲ. ಕಳೆದ ಶತಕದ ನಾಲ್ಕನೆಯ ದಶಕದಲ್ಲಿ ಅವುಗಳ ಬಗ್ಗೆ ಒಬ್ಬ ಪರದೇಶೀಯ ನಿರೀಕ್ಷಕನು ಹೀಗೆ ಅಂದಿದ್ದಾನೆ.: ‹‹ಬಂಗಾಲದಲ್ಲಿಯ ಸಾಮಾನ್ಯ ಹಳ್ಳಿಗಳ। ಶಾಲೆಗಳನ್ನು ನೋಡಿ ಸ್ಕಾಟಲಂಡದ ಹಳ್ಳಿಯ ಶಾಲೆಗಳ ನೆನಹು ತಂದುಕೊಂಡು ಅಲ್ಲಿ ಬಂಗಾಲದಲ್ಲಿಯಕಿಂತ ಹೆಚ್ಚಾಗಿ ಶಿಕ್ಷಣವು ದೈನಂದಿನ ಜೀವನಕ್ಕೆ ಸಂಬದ್ಧವಾದುದು ಎಂಬ ಅಭಿಪ್ರಾಯ ಕೊಡಲಾರೆ.”

ಎಲ್ಲೆಡೆಯಲ್ಲಿಯೂ ಹಬ್ಬಿದ್ದ ದೇಶೀಯ ಪದ್ಧತಿಯು ಹಾಳಾಗತೊಡಗಿತ್ತು. ಅದಕ್ಕೆ ಕಾರಣಗಳು ಅನೇಕ. ಆರ್ಥಿಕ ಕಾರಣಗಳು ರಾಜಕೀಯ ಕಾರಣಗಳು ಮುಖ್ಯ ಬೆಳೆಯುತ್ತಿರುವ ಜನತೆಯ ಬಡತನವೊಂದು; ಬದಲಾದ ಸರಕಾರದ ಆಶ್ರಯ ತಪ್ಪಿದುದು ಇನ್ನೊಂದು. ನಿಯಂತ್ರಿಸಲಸಾಧ್ಯವಾದ ಬಾಂಧವ್ಯ ಶಕ್ತಿಗಳಿಗೆ ಪ್ರತಿಕಾರವೆಂದೂ ದೇಶೀಯ ಪದ್ಧತಿಯು ಮುರುಟಿಕೊಂಡು ತನ್ನ ಅಸ್ತಿತ್ವ ಕಾಯ್ದುಕೊಳ್ಳುವ ನೆವದಿಂದ ಸುಧಾರಣೆಗಳನ್ನು ಒಪ್ಪಲಿಲ್ಲ. ಅದರಿಂದ ಹೊಸ ಶಕ್ತಿ ಬರದಂತಾಗಿ, ನಿಂತನೀರಾಗಿ ಕೊಳೆಯತೊಡಗಿತು. ಪ್ರಗತಿಯನ್ನು ಕಳೆದುಕೊಂಡಿತು. ಬೆಳೆಯಲಾರದುದು ಬಾಳೀತೆ?

ಎರಡರಲ್ಲೊಂದು

ಜನತೆಯ ಶಿಕ್ಷಣಕ್ಕಾಗಿ ಅಧಿಕೃತವಾಗಿ ಹೊಣೆಗಾರರಾದವರಿಗೆ ಆ ಕಾಲದಲ್ಲಿ ಎರಡೆ ದಾರಿಗಳಿದ್ದುವು. ಪ್ರಚಲಿತವಿದ್ದ ದೇಶೀಯ ಪದ್ಧತಿಯನ್ನೆ ಕುದುರಿಸಿ ಹೊಸ ಜೀವ ತುಂಬಿ ಹೊಸ ವಿಚಾರ-ಆದರ್ಶಗಳಿಗೆ ಅನುಕೂಲವಾಗುವಂತೆ ಮಾರ್ಪಾಟ ಮಾಡುವದು; ಅಥವಾ ದೇಶೀಯ ಪದ್ಧತಿಗೆ ಸಂಬಂಧವಿಲ್ಲದ ಹೊಸದೊಂದು ಪದ್ಧತಿಯನ್ನೆ ಯೋಜಿಸಿ ಈ ದೇಶದ ಜನತೆಯ ಶಿಕ್ಷಣಕ್ಕಾಗಿ ಉಪಯೋಗಿಸುವದು. ದೈವವಶಾತ್ ಎರಡನೆಯ ಮಾರ್ಗವನ್ನೆ ಅಂಗೀಕರಿಸಿದರು. ದೇಶದ ಸಾಂಸ್ಕೃತಿಕ ಶೈಕ್ಷಣಿಕ ಸಂಪ್ರದಾಯಗಳಿಗೆ ಹೊಂದದ ಪದ್ಧತಿಯು ವಿಕಾಸಹೊಂದಿತು. ಹೊಸ ವಿಚಾರಗಳಿಂದ ಭಾರತದ ಜನತೆಯನ್ನು ಪುನರುಜ್ಜೀವಿಸಬಹುದೆಂದು ಆಶಿಸಿ ಅದಕ್ಕೊಂದು ಪರಭಾಷೆಯನ್ನೆ ಮಾಧ್ಯಮ ಮಾಡಲಾಯಿತು.

ಆ ಕಾಲದ ಶಿಕ್ಷಣಾಧಿಕಾರಿಗಳು ಮೊದಲನೆಯ ಮಾರ್ಗವನ್ನು ಹಿಡಿದಿದ್ದರೆ ಭಾರತೀಯ ಶಿಕ್ಷಣವು ಯಾವ ರೂಪ ತಾಳುತಿತ್ತೆಂದು ಗಣಿತ ಹಾಕುವುದು ಇಂದೇನು ಪ್ರಯೋಜನ? ಆದರೆ ಎರಡನೆಯ ಮಾರ್ಗವನ್ನು ಹಿಡಿವಾಗ ತಮ್ಮ ಮೇಲೆ ಬರಬಹುದಾದ ಹೊಣೆಯ ಘನತೆಯ ಅರಿವು ಅವರಿಗಾಗಿದ್ದಿಲ್ಲವೆಂಬುದನ್ನು ಅಲ್ಲಗಳೆಯಲಾಗದು. ಮತ್ತು ನಿಜವಾಗಿಯೂ ರಾಷ್ಟ್ರೀಯ ಶಿಕ್ಷಣ ಪದ್ಧತಿಯಾಗಬಹುದಾಗಿದ್ದುದನ್ನು ಕಟ್ಟುವ-ನಿಯೋಜನೆಯ ಅಪೂರ್ವ ಸಂಧಿಯನ್ನು ಕಳೆದುಕೊಂಡರೆಂದೂ ಹೇಳಬಹುದು. ಆ ಪದ್ಧತಿಯು ತಳಹದಿಯಿಂದಲೂ ಪ್ರಜಾಸತ್ತಾತ್ಮಕವಿದ್ದು ದೇಶದ ಜನರ ಭಾಷೆ ಸಂಸ್ಕೃತಿಗಳನ್ನು ಅವಲಂಬಿಸಿದುದು ಆಗುತ್ತಿತ್ತು. ಭಾರತದಲ್ಲಿ ಸುಮಾರು ೭೦೦,೦೦೦ ಹಳ್ಳಿಗಳಿವೆ. ಬ್ರಿಟಿಶರಾಳಿಕೆಯ ಮೊದಲ ದಿನಗಳಲ್ಲಿ ಅನೇಕ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳಿದ್ದುವೆಂಬುದನ್ನು ಈ ಮೊದಲೆ ಹೇಳಿದೆ. ಅವುಗಳನ್ನು ಅಲಕ್ಷ್ಯ ಮಾಡಿ ಹಾಳಾಗಲು ಬಿಟ್ಟು ಶಿಕ್ಷಣದ ಹೊಸ ಪದ್ಧತಿಯನ್ನೆ ವಿತರಣ ಮಾಡಿ ಶತಮಾನ ಕಳೆದರೂ ಪೂರ್ಣವಾಗದಂತಹ ಮಹತ್ತಮವಾದ ಕಾರ್ಯವನ್ನು ಸರಕಾರವು ಇಟ್ಟುಕೊಂಡಿತು. ಕೆಲ ಕಾಲದ ನಂತರ ಅವುಗಳ ಉಪಯೋಗ ಮಾಡಬೇಕೆಂದು ಮಾಡಿದಾಗ ತೀರ ತಡವಾಗಿತ್ತು; ಅವು ಬದುಕುವ ಆಸೆ ಉಳಿದಿದ್ದಿಲ್ಲ.

ಹೊಸ ಪದ್ಧತಿಯನ್ನು ಪ್ರಚಾರದಲ್ಲಿ ತರಲು ಸರಕಾರದ ಧೋರಣೆಯು ಪುಷ್ಟಿ ಕೊಟ್ಟಿರುವದು ಸರ್ವಶ್ರುತವಿದೆ. ಕೆಳಮಟ್ಟದಲ್ಲಿ ದುಡಿಯಲು ಭಾರತೀಯರು ಬೇಕಾಗಿದ್ದರು ಸರಕಾರಕ್ಕೆ. ಅವರ ಸಹಾಯದಿಂದ ಆಡಳಿತೆ ನಡೆಸಬೇಕೆಂದೂ ಆಡಳಿತದ ವೆಚ್ಚವನ್ನು ಕಡಿಮೆ ಮಾಡಬೇಕೆಂದೂ ಸರಕಾರದ ವಿಚಾರವಿದ್ದುದರಿಂದ ಅಂಥ ನೌಕರಿಗಾಗಿ ಭಾರತೀಯರನ್ನು ಸಿದ್ಧ ಮಾಡಲು ಈ ಹೊಸ ಪದ್ಧತಿಯನ್ನು ಪ್ರಚಾರದಲ್ಲಿ ತಂದರು. ಈ ಪದ್ಧತಿಯನ್ನು ಪ್ರಚಾರದಲ್ಲಿ ತರಲು ಆರ್ಥಿಕ ರಾಜಕೀಯ ಕಾರಣಗಳು ಇದ್ದವು; ಸಾಂಸ್ಕೃತಿಕ ಬೆಲೆ ಇದ್ದಿಲ್ಲ ಅದಕ್ಕೆ.

ಮೇಲಿನ ವರ್ಗದವರಿಗಷ್ಟೇ ಶಿಕ್ಷಣ

ಈ ನಿರ್ಣಯಕ್ಕೆ ಬರಲು ಸಹಾಯವಾದ ಒಂದೆರಡು ತತ್ವಗಳನ್ನು ತಿಳಿಯುವದರಿಂದ ಭಾರತೀಯರು ಶಿಕ್ಷಣ ಸಮಸ್ಯೆಗಳನ್ನು ಅರಿಯಲು ಹೆಚ್ಚು ಅನುಕೂಲವಾಗುವದು. ವರ್ಗೀಯ ಶಿಕ್ಷಣದ ಕಲ್ಪನೆಯೆ ಆ ನಿರ್ಣಯದ ಅಡಿಗಲ್ಲು. ಹೊಸ ವಿದ್ಯೆಯು ಮೇಲಿನ ವರ್ಗದವರಿಗೆ ಮರ್ಯಾದಿತವಾಗಿದ್ದು ಕಾಲ ಗತಿಸಿದಂತೆ ಅದು ಸೂಸಿ ಕೆಳಗಿಳಿಯಬೇಕೆಂದಿತ್ತು. ಇದೆ ಸುಪ್ರಸಿದ್ಧವಾದ ‹‹ ಸೋಸು ಸಿದ್ಧಾಂತ” (Filtration theory) ಅದರ ಮೇಲೆಯೆ ಇಂದಿನ ಪದ್ಧತಿ ನಿಂತಿದೆ. ಹೀಗಾಗಿ ಸಾಮಾನ್ಯ ಜನತೆಯ ಶಿಕ್ಷಣವು ಅಲಕ್ಷ ಮಾಡಲ್ಪಟ್ಟಿತು. ಸರಕಾರದ ಮನಸ್ಸೆಲ್ಲವೂ ಭಾರತೀಯ ಸಮಾಜದಲ್ಲಿಯ ಮೇಲಿನ ವರ್ಗದ ಅಲ್ಪಸಂಖ್ಯಾಕರ ಶಿಕ್ಷಣದಲ್ಲಿಯೆ ಆಸಕ್ತಿ ಪಡೆಯಿತು. ಮುಖ್ಯ ಮುಖ್ಯ ಪಟ್ಟಣ ಜಿಲ್ಲಾ ಸ್ಥಳಗಳಲ್ಲಿ ಶಾಲೆ ಕಾಲೇಜುಗಳು ಪ್ರಾರಂಭಿಸಲ್ಪಟ್ಟವು.

ಕಲಕತ್ತಾ, ಮುಂಬಯಿ, ಮದರಾಸ, ಈ ಮೂರೂ ಪ್ರಾಂತೀಯ ರಾಜಧಾನಿ ಸ್ಥಳಗಳಲ್ಲಿ ವಿದ್ಯಾಪೀಠಗಳನ್ನು ಸ್ಥಾಪಿಸಬೇಕೆಂದು ೧೮೫೪ರಲ್ಲಿ ನಿರ್ಣಯವಾಯಿತು. ಹೊಸ ಮಾದರಿಯ ಮೊದಲನೆಯ ವಿದ್ಯಾಪೀಠವು ಕಲಕತ್ತೆಯಲ್ಲಿ ೧೮೫೭ ರಲ್ಲಿ ಸ್ಥಾಪನೆಯಾಯಿತು. ಅದೇ ವರುಷವೆ ಮುಂಬಯಿ ಮದರಾಸುಗಳಲ್ಲಿಯೂ ವಿದ್ಯಾಪೀಠಗಳು ಅಸ್ತಿತ್ವದಲ್ಲಿ ಬಂದವು. ಕಾಲು ಶತಕ ಗತಿಸುವದರೊಳಗೆಯೆ ಈ ಮೂರು ವಿದ್ಯಾಪೀಠಗಳು ಬೆಳೆಯುತ್ತಿರುವ ಮಾಧ್ಯಮಿಕ ಶಿಕ್ಷಣದ ಬೇಡಿಕೆಗಳನ್ನು ಪೂರೈಸಲಾರದ್ದರಿಂದ ಪಂಜಾಬ ಮತ್ತು ಅಲ್ಹಾಬಾದ ವಿದ್ಯಾಪೀಠಗಳು ರಚಿಸಲ್ಪಟ್ಟವು. ದಟ್ಟ ಜನವಸತಿ ಕೇಂದ್ರಗಳಲ್ಲಿ—ಪಟ್ಟಣಗಳಲ್ಲಿ ಕಲಾ ಕಾಲೇಜುಗಳು (Arts collge) ಹುಟ್ಟಿದವು. ಕೆಲವು ಶಾಸ್ತ್ರೀಯ ಶಿಕ್ಷಣಾಲಯಗಳು-ವೈದ್ಯಕ, ಸ್ಥಾಪತ್ಯ, ಕಾಯದೆಯ ಶಿಕ್ಷಣಾಲಯಗಳು ಉದಯವಾಗಿ ಪದವೀಧರರನ್ನು ಸಿದ್ಧಮಾಡತೊಡಗಿದವು. ಅತಿರಭಸದ ಪ್ರಗತಿ ಕಂಡುಬಂದುದು ಮಾಧ್ಯಮಿಕ ಶಿಕ್ಷಣದಲ್ಲಿ; ಅಲ್ಲಿ ಶಿಕ್ಷಣದ ಮಾಧ್ಯಮವು ಇಂಗ್ಲೀಶೇ ಉಳಿಯಿತು. ಇಂಗ್ಲೀಶ ಮಾಧ್ಯಮದ ಶಿಕ್ಷಣಕ್ಕೆ ಕೇವಲ ಆರ್ಥಿಕ (ನೌಕರಿ) ಆದರ್ಶವಿತ್ತೆಂದು ಮೇಲೆ ಸೂಚಿಸಲಾಗಿದೆ. ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯು ಶಿಕ್ಷಣದಲ್ಲಿಯ ಒಂದು ಮಟ್ಟ. ಅದನ್ನು ದಾಟಿದವರು ಕಾಲೇಜ ಸೇರಬಹುದಾಗಿತ್ತು. ಮಹತ್ವಾಕಾಂಕ್ಷಿಗಳಲ್ಲದವರು ನೌಕರಿಯಲ್ಲಿ ಸೇರುತ್ತಿದ್ದರು. ನೌಕರಿಯು ಅಂತಹ ಆಕರ್ಷಕವಾಗಿರದಿದ್ದರೂ ಸುರಕ್ಷಿತತೆಯನ್ನು ತಂದುಕೊಡುತ್ತಿತ್ತು. ಮುಂದೆ ಬರಬೇಕೆಂಬ ಹಂಬಲವಿದ್ದವರು ಹೆಚ್ಚಿನ ಪರೀಕ್ಷೆಗಳನ್ನು ಕಟ್ಟಿ ಮೇಲಿನ ನೌಕರಿ ಸ್ಥಳಗಳನ್ನು ಪಡೆಯುತ್ತಿದ್ದರು. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಪ್ರಮಾಣಪತ್ರ ತೋರಿಸುವದೇ ಮುಖ್ಯ ಮಾತಾಗಿತ್ತು. ಇಂಗ್ಲೀಶದಲ್ಲಿಯ ಪ್ರವೀಣತೆಯೇ ನೌಕರಿಗೆ ಬೇಕಾದ ಕೈಗೋಲು. ಈ ಪದ್ಧತಿಯನ್ನು ಟೀಕಿಸುತ್ತ ಲಾರ್ಡ ಕರ್ಜನ ಹೀಗೆ ಅಂದಿದ್ದಾನೆ: ‹‹ಐದರಲ್ಲಿಯ ನಾಲ್ಕು ಹಳ್ಳಿಗಳಿಗೆ ಶಾಲೆಯಿಲ್ಲ; ನಾಲ್ಕರಲ್ಲಿಯ ಮೂರು ಗಂಡುಮಕ್ಕಳು ಶಿಕ್ಷಣವಿಲ್ಲದೆ ಬೆಳೆಯುವರು. ನಾಲ್ವತ್ತರಲ್ಲಿ ಒಂದು ಹುಡಿಗೆ ಆವುದೊ ಒಂದು ಶಾಲೆ ಸೇರುತ್ತಾಳೆ” ಅಲ್ಲದೆ, ಉಚ್ಚ ಶಿಕ್ಷಣವು ನೌಕರಿಯನ್ನು ಆದರ್ಶವನ್ನಾಗಿಟ್ಟುಕೊಂಡಿದೆಯೆಂದು, ಪರೀಕ್ಷೆಗೆ ಅತಿ ಪ್ರಾಧಾನ್ಯ ಬಂದಿದೆಯೆಂದು, ಅಭ್ಯಾಸಕ್ರಮವು ಹೆಚ್ಚು ಸಾಹಿತ್ಯಕವಾಗಿದೆಯೆಂದು, ಅದರಿಂದ ವಿದ್ಯಾರ್ಥಿಗಳ ಜೀವನವನ್ನು ಸತ್ವಯುತ ಮಾಡಲಾಗಿಲ್ಲವೆಂದು, ಅಭಿಪ್ರಾಯಪಟ್ಟಿದ್ದನು. ಇಂಗ್ಲೀಶ ವಿದ್ಯೆಯನ್ನು ಪಡೆವ ಹುಚ್ಚು ಹಂಬಲದಲ್ಲಿ ಮಾತೃಭಾಷೆಯ ಅಭ್ಯಾಸವು ತೀರ ಅಲಕ್ಷ ಮಾಡಲ್ಪಟ್ಟಿದೆಯೆಂದೂ ಉಸುರಿದನು.

ಲಾರ್ಡ ಕರ್ಜನನ ಅಭಿಪ್ರಾಯದಂತೆ ಇವು ಕೆಲವು ಸದ್ಯದ ಶಿಕ್ಷಣಕ್ರಮದ ಕುಂದುಕೊರತೆಗಳು. ಭಾರತದಲ್ಲಿಯ ಶಿಕ್ಷಣ ವಿಸ್ತಾರವು ಅದರ ಸುಧಾರಣೆಯು ಹೆಚ್ಚಿನ ವೆಚ್ಚದ ವಿಷಯವೆಂದು ಅವನು ಅರಿತಿದ್ದನು. ಪ್ರಾಥಮಿಕ ಶಿಕ್ಷಣವು ಮಾತ್ರ ಸಾಕಷ್ಟು ಸರಕಾರದ ಲಕ್ಷ ಪಡೆದಿಲ್ಲವೆಂದೂ ಸಾರ್ವಜನಿಕ ಹಣದ ಯೋಗ್ಯ ಪಾಲು ಅದಕ್ಕೆ ದೊರೆತಿಲ್ಲವೆಂದೂ ಸರಳ ಒಪ್ಪಿಕೊಂಡನು. ಕೊನರುತ್ತಿದ್ದ ರಾಜಕೀಯ ಅಸಮಾಧಾನದ ಫಲವಾಗಿ ದೇಶದ ತರುಣರ ಮೇಲೆ ಆಗುತಿದ್ದ ಅಧಿಕಾರೇತರ ಜನರ ಪ್ರಭಾವವನ್ನು ಸರಕಾರವು ಸಹಾನುಭೂತಿಯಿಂದ ನೋಡಲಿಲ್ಲ. ಶಿಕ್ಷಣದಲ್ಲಿಯ ಅಧಿಕಾರಿ ವರ್ಚಸ್ವವನ್ನು ಪ್ರಯತ್ನಪೂರ್ವಕವಾಗಿ ಬೆಳೆಸುತ್ತಿದ್ದುದರ ಸಮರ್ಥನೆಯನ್ನು ಮೇಲಿನ ಕಾರಣದಿಂದ ಮಾಡುತ್ತಿದ್ದರು. ಮೊನ್ನೆಮೊನ್ನಿನ ತನಕ ಉಚ್ಚ ಶಿಕ್ಷಣಾಧಿಕಾರಿಗಳೆಲ್ಲ। ಇಂಗ್ಲಂಡದಲ್ಲಿ ಭರತಿ ಆದ ಅಧಿಕಾರಿವರ್ಗದವರೆ ಆಗಿರುತ್ತಿದ್ದರು. ಅವರಲ್ಲಿ ಹೆಚ್ಚಾಗಿ ಬ್ರಿಟಿಶರೆ ಇರುತ್ತಿದ್ದರು. ಸರಕಾರಿ ಶಿಕ್ಷಣಾಲಯದ ಪ್ರಾಧ್ಯಾಪಕರಂತೆ, ಶಿಕ್ಷಣಾಧಿಕಾರಿಗಳೆಲ್ಲರೂ ಯುರೋಪಿಯರೆ ಇರುತ್ತಿದ್ದರು. ಸರಕಾರದ ಶೈಕ್ಷಣಿಕ ಧೋರಣೆಯ ಮಾರ್ಗದರ್ಶಿಗಳಾದ ಈ ಪರಕೀಯರ ಅಸ್ತಿತ್ವದಿಂದಲೆ ಈ ಪದ್ಧತಿಯಲ್ಲಿ ಅನೇಕ ಕುಂದುಕೊರತೆಗಳು ಉಳಿದವು. ಅವರು ಸಹಜವಾಗಿಯೆ ಜನತೆಯ ಶಿಕ್ಷಣದ ಕಡೆಗೆ ಲಕ್ಷ್ಯ ಪೂರೈಸಲಿಲ್ಲ. ಜನತೆಯ ಭಾಷೆಯಲ್ಲಿ ಶಿಕ್ಷಣ ಕೊಡಬೇಕೆಂಬುದರಲ್ಲಿಯೂ ಯಾವ ಉತ್ಸುಕತೆ ತೋರಲಿಲ್ಲ. ಇಂಗ್ಲಿಶದಲ್ಲಿಯ ಕಲಿಸುವುದು ಅವರಿಗೆ ಸುಲಭವಾಗಿತ್ತು. ಆರ್ಥಿಕ ಕಾರಣದ ಮೂಲಕ ಜನತೆಯಲ್ಲಿ ಇಂಗ್ಲಿಶ್ ಕಲಿಯುವರ ಕಡೆಗೆ ಹೆಚ್ಚು ಒಲವು ಕಂಡುಬಂದುದರಿಂದ ಶಿಕ್ಷಣದ ಮಾಧ್ಯಮವನ್ನು ಬದಲುಮಾಡಬೇಕೆಂಬ ಸಂದರ್ಭವೆ ಒದಗಿಬರಲಿಲ್ಲ.

ಆ ರೀತಿಯಲ್ಲಿ ನೇಮಕ ಹೊಂದಿದ ಅಧಿಕಾರಿಗಳಿರುವ ತನಕ ಹೆಚ್ಚು ವೆಚ್ಚವು ಅನಿವಾರ್ಯ ಮತ್ತು ಭರತಿ ಮಾಡುವ ಪದ್ಧತಿಯು ಬದಲಾದ ಹೊರತು ಉಚ್ಚಶಿಕ್ಷಣದ ವೆಚ್ಚವನ್ನು ಕಡಿಮೆ ಮಾಡುವದು ಸಾಧ್ಯವೆ ಇದ್ದಿಲ್ಲ.

ಶಿಕ್ಷಣಪದ್ಧತಿಯು ಕುಂದುಳ್ಳದುದಾದರೂ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಚಳವಳಿ ಹೂಡಿದವರು ಪಾಶ್ಚಾತ್ಯ ಸಮಾಜಸತ್ತೆಯ ಸ್ವಾತಂತ್ರ್ಯದ ತತ್ವಗಳನ್ನು ಮಂಡಿಸುವ ಬ್ರಿಟಿಶ್- ಭಾರತೀಯ ಪದ್ಧತಿಯ ಶಿಕ್ಷಣ ಪಡೆ ಭಾರತೀಯರ ಗುಂಪು ಎಂಬ ಮಾತನ್ನು ಒಪ್ಪಿಕೊಳ್ಳಲೇಬೇಕು. ಭಾರತವು ರಾಜಕೀಯದಲ್ಲಿ ಎಚ್ಚತ್ತಿತ್ತು ಮತ್ತು ಅದರ ಮೊದಲ ಚಿನ್ಹವೆ ರಾಷ್ಟ್ರೀಯ ಶಿಕ್ಷಣದ ಬೇಡಿಕೆ ಮಂಡಿಸಿದುದು. ಜನತೆಯ ಸಂಸ್ಕೃತಿಯನ್ನು ಅಡಿಗಲ್ಲಾಗಿ ಮಾಡಿಕೊಂಡು ಜನತೆಯ ಭಾಷೆಯ ಮುಖಾಂತರ ಶಿಕ್ಷಣ ಕೊಡುವುದೆ ‘ರಾಷ್ಟ್ರೀಯ ಶಿಕ್ಷಣದ’ ಸೂಚನೆಯಾಗಿತ್ತು. ತಂತ್ರ ಶಿಕ್ಷಣದ Technelogic l Ean) ಯೋಜನೆಯೂ ಅದರ ಅಂಗವಾಗುವದು. ಅದರಿಂದ ರಾಷ್ಟ್ರೀಯ ಔದ್ಯೋಗಿಕ ಬೆಳವಣಿಗೆಯ ಗುರಿಯ ಕಡೆಗೆ ಸಾಗಿದಂತಾಗುತ್ತಿತ್ತು. ಮತ್ತು ಯಾವುದೆ ರಾಷ್ಟ್ರೀಯ ಶಿಕ್ಷಣ ಪದ್ಧತಿಯ ಮೊದಲ ಮೆಟ್ಟಿಂದರೆ ಜನತೆಗೆ ಪುಕ್ಕಟೆಯಾದ- ಒತ್ತಾಯದ ಶಿಕ್ಷಣ ಕೊಡುವುದು. ಕೆಲವು ನಿರ್ದಿಷ್ಟ ಕರಾರುಗಳನ್ನು ಒಪ್ಪಿ, ಸಾರ್ವತ್ರಿಕ ಒತ್ತಾಯದ ಶಿಕ್ಷಣ ಕೊಡಬೇಕೆಂಬ ಮಸೂದೆಯನ್ನು ಮಂಡಿಸಬೇಕೆಂದು ಭಾರತದ ಮಹಾಮುಂದಾಳು ಆದ ದಿ. ಗೋಪಾಲ ಕೃಷ್ಣ ಗೋಖಲೆಯವರು ೧೯೧೧ ರಲ್ಲಿಯೆ ಪ್ರಯತ್ನಿಸಿದರು. ಅದು ಕೇವಲ ಪರವಾನಗಿ-ಅನುಮತಿ ಕೇಳುವ ಹೆಜ್ಜೆಯಾಗಿದ್ದರೂ ಸರಕಾರದವರು ತೀವ್ರ ವಿರೋಧ ಮಾಡಲು ಗೋಖಲೆಯವರ ಪ್ರಯತ್ನಗಳೆಲ್ಲ ವ್ಯರ್ಥವಾದವು.

೧೯೨೧ ರ ವರೆಗೂ ಅಂತಹ ಕಟ್ಟಳೆಯಾಗಲಿಲ್ಲ ಹೊಸ ಸುಧಾರಣೆಗಳಿಂದ ಕೆಲಮಟ್ಟಿಗೆ ಸ್ವಾಯತ್ತತೆಯನ್ನು ಪಡೆದ ಪ್ರಾಂತಿಕ ಕಾಯಿದೆ ಮಂಡಲಗಳು ೧೯೨೧ರಲ್ಲಿ ಸೇರಿದವು. ಮೊದಲನೆಯ ಕಾರ್ಯವೆಂದು ಅವರು ಒತ್ತಾಯದ ಪ್ರಾಥಮಿಕ ಶಿಕ್ಷಣದ ಕಟ್ಟಳೆಯನ್ನು ಮಾಡಿದರು. ಅದರ ಪ್ರಕಾರ ಒತ್ತಾಯದ ಶಿಕ್ಷಣವು ಮೊದಲು ಪಟ್ಟಣಗಳಲ್ಲಿ ಪ್ರಾರಂಭವಾಗಬೇಕೆಂದೂ ನಂತರ ಹಳ್ಳಿಗಳಲ್ಲಿಯೂ ನಡೆಯಬೇಕೆಂದೂ ಗೊತ್ತಾಯಿತು. ಈ ಕಾಯಿದೆ ಮಂಡಲಗಳು ಕಟ್ಟಳೆಗಳನ್ನು ಮಾಡಲು ಅಧಿಕಾರ ಪಡೆದಂತೆ ಬೊಕ್ಕಸದ ಅಧಿಕಾರ ಪಡೆಯದ್ದರಿಂದ ಜನತೆಯ ಶಿಕ್ಷಣದ ಪ್ರಗತಿ ಮಂದವಾಯಿತು. ಕೆಲ ದೇಶಿಯ ಸಂಸ್ಥಾನಗಳಲ್ಲಿ ಈ ಶತಕದ ಮೊದಲ ಭಾಗದಲ್ಲಿಯೆ ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ಪ್ರಾರಂಭಿಸಿದ್ದು ಅದು ಯಶಸ್ವಿಯೂ ಆಗಿತ್ತೆಂಬ ಸಂಗತಿಯನ್ನು ಇಲ್ಲಿ ಹೇಳಿದರೆ ಅಪ್ರಸ್ತುತವೆನ್ನಿಸಲಿಕ್ಕಿಲ್ಲ ಆದರೆ ಬ್ರಿಟಿಶ್ ಭಾರತದಲ್ಲಿ ಆ ಬಗೆಯ ಪ್ರಯೋಗವನ್ನು ಮಾಡಲು ಕೂಡ ಪರವಾನಗಿ ಕೊಡಬೇಕೆಂಬ ವಿಚಾರವನ್ನು ಸರಕಾರವು ಮಾಡಲಿಲ್ಲ.

— [ಮುಂದರಿಯುವದು]

ಸಂಪಾದಕೀಯ

ಟೀಕೆ-ಟಿಪ್ಪಣೆಗಳು

ಮುಂಬಯಿ ಚುನಾವಣೆ

ಮುಂಬಯಿ ಶಾಸನ ಸಭೆಯ ಸಾಮಾನ್ಯ ಮತದಾರ ಸಂಘದ ಚುನಾವಣೆ ಮೊನ್ನೆ ಹನ್ನೊಂದನೆ ತಾರೀಕಿನ ದಿವಸ ಎಲ್ಲೆಡೆ ಶಾಂತ ರೀತಿಯಿಂದ ನಡೆಯಿತು. ಶಾಸನ ಸಭೆಯಲ್ಲಿರುವ ಒಟ್ಟು ೧೭೫ ಸ್ಥಳಗಳಲ್ಲಿ ೨೯ ಸ್ಥಳಗಳ ಆಯ್ಕೆ ಅವಿರೋಧವಾಗಿದೆ ಅವುಗಳಲ್ಲಿ ೧೪ ಸ್ಥಳಗಳನ್ನು ಕಾಂಗ್ರೆಸ್ಸಿಗರು ಪಡೆದಿರುವರು. ಸಾಮಾನ್ಯ ಸ್ಥಳಗಳಿಗೆಲ್ಲ ಕಾಂಗ್ರೆಸು ತನ್ನ ಹುರಿಯಾಳುಗಳನ್ನು ನಿಲ್ಲಿಸಿದೆ ಕಾಂಗ್ರೆಸ್ಸನ್ನು ರ್‍ಯಾಡಿಕಲ ಡೆಮಾಕ್ರೆಟರು, ಕೂಲಿಕಾರ ಫೆಡರೇಶನ್ನಿನವರು, ಹಿಂದೂ ಮಹಾಸಭೆಯವರು, ಸ್ವತಂತ್ರರು ಸ್ಪರ್ಧಿಸಿರುವರು. ನಿಜವಾಗಿ ವಿಚಾರ ಮಾಡಿದರೆ ಈಗ ಕಾಂಗ್ರೆಸ್ಸಿನ ಹೊರತು ಬೇರೆ ಯಾವ ಪಕ್ಷಗಳಿಗೂ ಶಾಸನ ಸಭೆಗಳಲ್ಲಿ ಸ್ಥಾನವಿಲ್ಲ, ಇರಕೂಡದು; ಏಕೆಂದರೆ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಸಂಸ್ಥೆಯೆಂದರೆ ಕಾಂಗ್ರೆಸ್ಸೊಂದೇ ಆಗಿದೆ. ಕಾಂಗ್ರೆಸ್ಸು ಇಡೀ ರಾಷ್ಟ್ರದ, (ಯಾವದೊಂದು ಪಕ್ಷದ್ದಲ್ಲ,) ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದೆ. ಕಾಂಗ್ರೆಸ್ಸಿನ ಸ್ವರಾಜ್ಯ ಯಾವದೊಂದು ಪಕ್ಷದ ಸ್ವರಾಜ್ಯವಾಗದೆ ರಾಷ್ಟ್ರದಲ್ಲಿಯ ಪ್ರತಿಯೊಬ್ಬರ ಸ್ವರಾಜ್ಯವಾಗುವದು. ಅಂತೆಯೇ ಮತದಾರರು ಕಾಂಗ್ರೆಸ್ಸಿಗೆ ಪ್ರಚಂಡ ಬೆಂಬಲ ಕೊಡುತ್ತಿರುವರು. ಮುಂಬಯಿ ಪ್ರಾಂತದ ಆಯ್ಕೆಯಲ್ಲಿ ಈ ವರೆಗೆ ಬಂದ ವರದಿಗಳನ್ನು ನೋಡಿದರೆ ಕಾಂಗ್ರೆಸ್ಸು ಎಲ್ಲೆಡೆ ವಿಜಯಿಯಾಗುವದೆಂದು ಹೇಳಬಹುದಾಗಿದೆ. ನಮ್ಮ ಕರ್ನಾಟಕದಲ್ಲಿಯೂ ಕಾಂಗ್ರೆಸು ಪ್ರಚಂಡ ವಿಜಯವನ್ನು ಪಡೆಯುವದಾಗಿ ನಂಬಲಾಗಿದೆ. ಬರುವ ೧೯—೨೦ ನೇ ತಾರೀಕು ಮತಗಣನೆ ನಡೆಯುವದು. ಈ ಆಯ್ಕೆಯಲ್ಲಿ ಹೆಣ್ಣುಮಕ್ಕಳು, ಹಳ್ಳಿಗರು ವಿಶೇಷ ಉತ್ಸಾಹದಿಂದ ಭಾಗವಹಿಸಿ ಕಾಂಗ್ರೆಸ್ಸಿಗೆ ಮತ ಹಾಕಿದರು. ಮತದಾರರ ಸಂಖ್ಯೆಯನ್ನು ನೋಡಿದರೆ ಮತಪ್ರದಾನ ಸಾಕಷ್ಟಾಗಲಿಲ್ಲೆಂದು ಹೇಳಬಹುದು. ೧೯೪೧ ರಲ್ಲಿ ಪ್ರಸಿದ್ಧವಾದ ಮತದಾರ ಯಾದಿ ಸದೋಷವಾಗಿದ್ದು ಅದರಲ್ಲಿದ್ದ ಅನೇಕ ಮತದಾರರು ಇರುವದಿಲ್ಲ. ಅದಲ್ಲದೆ ಕಾಂಗ್ರೆಸ್ಸು ಹೇಗಾದರೂ ಆರಿಸಿ ಬರುವದೆಂದೂ ಮತದಾರರ ಗ್ರಹಿಕೆ. ತತ್ಪರಿಣಾಮವಾಗಿ ನಗರದಲ್ಲಿ ಮತಪ್ರದಾನ ಹೆಚ್ಚಾಗಿ ಆಗಲಿಲ್ಲ. ಈ ಬಗೆಯ ಅನಾಸ್ಥೆ ತಕ್ಕದ್ದಲ್ಲ. ಅದೇನೇ ಇದ್ದರೂ ಕಾಂಗ್ರೆಸ್ಸಿಗೇ ಮತದಾರರು ಹೆಚ್ಚು ಮತಹಾಕಿ ತಮ್ಮ ಸ್ವಾತಂತ್ರ್ಯ ಪ್ರೇಮವನ್ನು ವ್ಯಕ್ತಪಡಿಸಿದ್ದಕ್ಕಾಗಿ ಅಭಿನಂದನೀಯರಾಗಿರುವರು.

ಮುಸಲ್ಮಾನ ಸ್ಥಳಗಳು

ಮುಸಲ್ಮಾನ ಸ್ಥಳಗಳ ಚುನಾವಣೆ ಇದೇ ೨೫ಕ್ಕೆ ಆಗಲಿದೆ. ಪ್ರಾಂತದಲ್ಲಿ ಒಟ್ಟಿಗಿರುವ ೨೯ ಮುಸಲ್ಮಾನ ಸ್ಥಳಗಳಿಗೆ ೧೨ ಕಾಂಗ್ರೆಸ ಹಾಗು ರಾಷ್ಟ್ರೀಯ ಮುಸಲ್ಮಾನರು ನಿಂತಿರುವರು. ಮುಸ್ಲಿಂ ಲೀಗು ಮತ್ತು ಸ್ವತಂತ್ರರು ಈ ಚುನಾವಣೆಗಳಲ್ಲಿ ಅವರನ್ನು ಸ್ಪರ್ಧಿಸಿರುವರು. ಮುಸ್ಲಿಂ ಲೀಗಿನವರು ಅವ್ಯವಹಾರ್ಯವಾದ ಪಾಕಿಸ್ತಾನದ ಮಾಯಾಜಾಲವನ್ನು ಮುಸಲ್ಮಾನರ ಮುಂದಿಟ್ಟು ಜನತೆಯ ಧಾರ್ಮಿಕ ಭಾವನೆಗಳನ್ನುದ್ರೇಕಿಸಿ ಮತಗಳನ್ನು ಯಾಚಿಸುತ್ತಿರುವರು. ಅಖಂಡ ರಾಷ್ಟ್ರವಾದ ಹಿಂದುಸ್ತಾನವನ್ನು ತುಂಡರಿಸಿ ಅದರ ಶಕ್ತಿಸಾಮರ್ಥ್ಯಗಳನ್ನು ಮತ್ತಷ್ಟು ಕುಂದಿಸಲು ಲೀಗು ಪ್ರಯತ್ನಿಸುತ್ತಿದೆ. ಇದು ಅತ್ಯಂತ ಶೋಚನೀಯ ಸಂಗತಿ. ಇಡೀ ರಾಷ್ಟ್ರವು ಅಖಂಡವಾಗಿದ್ದು ಸ್ವಾತಂತ್ರ್ಯವನ್ನು ಪಡೆದಲ್ಲಿ ಆದರೆ ಜಗತ್ತಿನ ರಾಷ್ಟ್ರಗಳಲ್ಲಿ ಹಿಂದುಸ್ತಾನ ಪ್ರಮುಖ ಸ್ಥಾನವಹಿಸುತ್ತದೆ. ಆದರೆ ತುಂಡಾದ ಹಿಂದುಸ್ತಾನದ ಸಾಮರ್ಥ್ಯ ಕುಗ್ಗಿ ಅದು ಹಿಂದಿನಂತೆ ಪರದಾಸ್ಯದಲ್ಲಿ ಕೊಳೆವ ಪ್ರಸಂಗ ಬರುವದು. ಇಡೀ ದೇಶದಲ್ಲಿರುವ ಮುಸಲ್ಮಾನರು ಅದೆಂತು ಪಾಕಿಸ್ತಾನ ಪಡೆಯುವರೊ ತಿಳಿಯದು. ಮುಂಬಯಿ ಪ್ರಾಂತದಲ್ಲಿರುವ ಮುಸಲ್ಮಾನರು ಪಾಕಿಸ್ತಾನ ಪಡೆಯುವದು ಹೇಗೆ? ಇವರೆಲ್ಲ ಪಾಕಿಸ್ತಾನ ಪ್ರದೇಶಕ್ಕೆ ಹೊರಟಿರುವರೆ? ಅದು ಶಕ್ಯವಿಲ್ಲ. ಇಷ್ಟಿನ ... ಉಳಿಯತಕ್ಕವರು.

ಹರ್ಬರ್ಟ ಹೂವರರು ತಿಳಿಸಿ... ನಕ್ಕೆ ಆಹಾರ ವಸ್ತುಗಳನ್ನು ತ್ವರೆಯಾಗಿ ... ಕೆಂದು ಅವರಿಗೆ ಕೇಳಿಕೊಳ್ಳಲಾಗಿದೆ. ಯುರೋಪ ಏಶಿಯಾಗಳ ಆಹಾರ ಕೊರತೆ ಪ್ರದೇಶಗಳಿಗೆ ಈಗಾಗಲೇ ಕಳಿಸಲು ನಿರ್ಣಯಿಸಿರುವ ೧೧೫ ಲಕ್ಷ ಟನ್ ಆಹಾರ ಧಾನ್ಯಗಳಲ್ಲದೆ ಇನ್ನೂ ೭೦ ... ಪಾಲಿಗೆ ಸಹಿತ...

ನ್ನರಿತು ಮುಂಬಯಿ ಪ್ರಾಂತದಲ್ಲಿಯ ಮುಸಲ್ಮಾನರು ಪಾಕಿಸ್ತಾನದ ಮಬ್ಬಿಗೊಳಗಾಗದೆ ಪ್ರಾಂತದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಕಾಂಗ್ರೆಸ್ಸಿಗರೊಡನೆ ಸಹಕರಿಸುವದು ಅತ್ಯವಶ್ಯವಾಗಿದೆ. ಮುಂಬಯಿ ಪ್ರಾಂತದಲ್ಲಿ ಕಾಂಗ್ರೆಸ ಸರಕಾರವಿದ್ದಾಗ ಮುಸಲ್ಮಾನರಿಗೆ ಯಾವ ಬಗೆಯ ತೊಂದರೆಯೂ ಆಗಲಿಲ್ಲ. ಅವರ ಹಕ್ಕು ಬಾಧ್ಯತೆಗಳೆಲ್ಲ ರಕ್ಷಿಸಲ್ಪಟ್ಟವು ತನ್ನಿಂದ ಏನಾದರೂ ಮುಸಲ್ಮಾನರಿಗೆ ಅನ್ಯಾಯವಾಗಿದ್ದರೆ, ತಾವು ಉದಾಸೀನತೆ ತೋರಿದ್ದರೆ ತೋರಿಸಿಕೊಡಿರೆಂದು ಮುಂಬೈ ಕಾಂಗ್ರೆಸ ಮಂತ್ರಿಮಂಡಳವು ಆಹ್ವಾನ ಮಾಡಿದಾಗ ಮುಸ್ಲಿಂ ಲೀಗು ನಿರುತ್ತರವಾಯಿತು. ಇದರಿಂದ ಪ್ರಾಂತದಲ್ಲಿಯ ಮುಸಲ್ಮಾನರ ಹಕ್ಕುಬಾಧ್ಯತೆಗಳಿಗೆ ಮುಸಲ್ಮಾನೇತರರಿಂದ ಯಾವ ಬಗೆಯ ಆಘಾತವಿಲ್ಲೆಂಬುದು ಸ್ಪಷ್ಟವಾಗುವದು. ಅದುದರಿಂದ ಪ್ರಾಂತದಲ್ಲಿಯ ಮುಸಲ್ಮಾನರು ಕಾಂಗ್ರೆಸ ಹಾಗು ರಾಷ್ಟ್ರೀಯ ಮುಸಲ್ಮಾನರನ್ನೆಲ್ಲ ಆರಿಸಿತಂದು ದೇಶದ ಸ್ವಾತಂತ್ರ್ಯಕ್ಕೆ ತಾವೂ ಬೆಂಬಲ ಕೊಡುವರೆಂಬುದನ್ನು ಸಿದ್ಧಮಾಡಿಕೊಡಬೇಕು. ಸಾಮಾನ್ಯ ಸ್ಥಳಗಳ ಚುನಾವಣೆಯಂತೆ ಈ ಚುನಾವಣೆಯೂ ಶಾಂತ ರೀತಿಯಿಂದ ಸಾಗುವದೆಂದು ಆಶಿಸುತ್ತೇವೆ.

ಪಾಕಿಸ್ತಾನ---ಸ್ವಯಂನಿರ್ಣಯ

ಜಿನ್ನಾರವರು ಬೇಡುತ್ತಿರುವ ಪಾಕಿಸ್ತಾನವು ಎಷ್ಟೊಂದು ಅವ್ಯವಹಾರ್ಯ ಮತ್ತು ಸ್ವಯಂ ನಿರ್ಣಯ ತತ್ವಕ್ಕೆ ವಿರೋಧಕವಾಗಿದೆಂಬುದು ಸುಸ್ಪಷ್ಟವಾಗಿದೆ ಜಿನ್ನಾರವರು ಪಾಕಿಸ್ತಾನ ಪ್ರದೇಶವೆಂದು ಹೇಳುತ್ತಿರುವ ಸಿಂಧ, ಸರಹದ್ದ, ಪಂಜಾಬ ಮತ್ತು ಬಂಗಾಲಗಳಲ್ಲಿಯ ಎಲ್ಲ ಜನರ ಮತಗಳನ್ನು ತೆಗೆದುಕೊಂಡು ಈ ಪಾಕಿಸ್ತಾನ ಪ್ರಶ್ನೆಯನ್ನು ನಿರ್ಧರಿಸುವದಾದರೆ ಅದಕ್ಕೆ ಯಾರ ಆಕ್ಷೇಪವೂ ಇರಲಾರದು, ಕಾಂಗ್ರೆಸ್ಸಿನ ಆಕ್ಷೇಪವೂ ಇರುವದಿಲ್ಲ. ಈ ಮಾತನ್ನು ಕಾಂಗ್ರೆಸ ವರಿಷ್ಠರು ಈ ಮೊದಲು ಸ್ಪಷ್ಟಪಡಿಸಿದ್ದಾರೆ. ಆದರೆ ಮುಸ್ಲಿಂ ಲೀಗಿನವರು ಇದಕ್ಕೆ ಒಪ್ಪುವದಿಲ್ಲ. ಆಯಾ ಭಾಗಗಳಲ್ಲಿರುವ ಮುಸಲ್ಮಾನರ ಮತಗಳನ್ನಷ್ಟೇ ತೆಗೆದುಕೊಂಡು ಆ ನಿರ್ಣಯದಂತೆ ನಡೆಯಬೇಕೆಂದು ಹೇಳುತ್ತಿರುವರು. ಹೀಗೆ ಮಾಡಿದ್ದಾದರೆ ಆಯಾ ಪ್ರದೇಶಗಳಲ್ಲಿರುವ ಮುಸಲ್ಮಾನೇತರರ ಭವಿತವ್ಯವೇನು ಎಂಬುದನ್ನು ಮುಸ್ಲಿಂ ಲೀಗಿನವರು ವಿಚಾರಿಸುವದಿಲ್ಲ. ಕಾಂಗ್ರೆಸ ಮುಖಂಡರಾದ ಪಂಡಿತ ಜವಾಹರಲಾಲ ನೆಹರುರವರು ಈ ಪ್ರಶ್ನೆಯ ಸ್ಪಷ್ಟೀಕರಣವನ್ನು ಮಾಡುತ್ತ ಕೆಲ ಮಾತುಗಳನ್ನು ಹೇಳಿರುವರು, ಹಿಂದುಸ್ತಾನದ ಸಂಯುಕ್ತ ರಾಜ್ಯದಲ್ಲಿ ಸಮ್ಮತಿಸುವ ಪ್ರಾಂತಗಳು ಮಾತ್ರ ಬರಬೇಕೆಂದು ಕಾಂಗ್ರೆಸ್ಸಿನ ಇಚ್ಛೆ. ಹೀಗೆ ಬಂದ ಪ್ರಾಂತಗಳು ಕನಿಷ್ಠ ಸಂರಕ್ಷಣೆ ಮತ್ತು ವಿದೇಶ ವ್ಯವಹಾರವನ್ನು ಸಂಯುಕ್ತ ರಾಜ್ಯಕ್ಕೆ ಬಿಟ್ಟುಕೊಡಬೇಕು. ಇನ್ನುಳಿದ ವಿಷಯಗಳಲ್ಲಿ ಪ್ರಾಂತಗಳಿಗೆ ಪೂರ್ಣ ಸ್ವಾತಂತ್ರ್ಯ ಕೊಡಲಾಗುವದು. ಇದರಿಂದ ನೂರರಲ್ಲಿ ೯೫ ರಷ್ಟು ಸ್ವಯಂ ನಿರ್ಣಯಾಧಿಕಾರ ಕೊಟ್ಟಂತಾಗುವದು. ಯಾರ ಮೇಲೆಯೂ ಕಾಂಗ್ರೆಸ್ಸು ಒತ್ತಾಯ ಮಾಡುವದಿಲ್ಲ. ಮುಸ್ಲಿಂ ಲೀಗೂ ಬೇರೆಯವರ ಮೇಲೆ ಒತ್ತಾಯ ಮಾಡಬಾರದು. ಆದರೆ ಜಿನ್ನಾರವರು ಒಪ್ಪಿಗೆಯಿಲ್ಲದ ಜನರನ್ನು ಪಾಕಿಸ್ತಾನದಲ್ಲಿ ಒತ್ತಾಯದಿಂದ ಸೇರಿಸಿಕೊಳ್ಳಬೇಕೆನ್ನುವರು. ಇದು ನ್ಯಾಯ್ಯವಲ್ಲೆಂದು ಮುಂತಾಗಿ ಜವಾಹರಲಾಲರು ಹೇಳಿದ್ದು ಯಥೋಚಿತವಾಗಿದೆ. ಡಾ. ಜಿನ್ನಾರವರು ಮತ್ತು ಮುಸ್ಲಿಂ ಲೀಗು ಸರ್ವಮಾನ್ಯವಾದ ಈ ಸ್ವಯಂ ನಿರ್ಣಯ ತತ್ವಕ್ಕೊಪ್ಪಿ ನಡೆದದ್ದಾದರೆ ಹಿಂದುಸ್ತಾನದಲ್ಲಿಯ ಅನೇಕ ಪ್ರಶ್ನೆಗಳು ಬಗೆಹರಿದು ಸ್ವಾತಂತ್ರ್ಯ ದೊರೆಯುವದು, ಪರಕೀಯರ ಸುಲಿಗೆಯೂ ನಿಲ್ಲುವದು. ತದ್ವಿರುದ್ಧ ಜಿನ್ನಾರವರು ತಮ್ಮ ಹಟವನ್ನೇ ಸಾಧಿಸಲು ಪ್ರಯತ್ನಿಸಿದ್ದಾರೆ ಹಿಂದುಸ್ತಾನದಲ್ಲಿ ಹೀಗೆಯೇ ಯಾದವೀ ನಡೆ ... ಡಿದ ... ಸ್ವಾ ... ನಿದ ... ದು ಅದರ ಲಾಭವನ್ನು ಪರಕೀಯರು ಪಡೆಯುವರೆಂಬಲ್ಲಿ ಸಂದೇಹವಿಲ್ಲ.

ಪಂಜಾಬ ಮಂತ್ರಿಮಂಡಳ

ಪಂಜಾಬದಲ್ಲಿ ಯಾವ ಮಂತ್ರಿಮಂಡಳ ಸ್ಥಾಪಿತವಾಗಬಹುದೆಂದು ಬಗೆಬಗೆಯ ತರ್ಕವಿತರ್ಕಗಳು ನಡೆದು ಕೊನೆಗೆ ಕಾಂಗ್ರೆಸ್ ಸಮ್ಮಿಶ್ರಮಂತ್ರಿಮಂಡಳ ಸ್ಥಾಪಿತವಾಗಿದೆ. ಯುನಿಯನಿಸ್ಟ ಪಕ್ಷ ಧುರೀಣರಾದ ಮಲಿಕಹಿಜರ ಹಯಾತಖಾನರು ಮುಖ್ಯಮಂತ್ರಿಗಳಾಗಿದ್ದು ಅಕಾಲಿಪಂಥದ ಶ್ರೀ ಬಲದೇವಸಿಂಗ, ಕಾಂಗ್ರೆಸ್ಸಿನ ಲಾಲಾ ಭೀಮಸೇನ ಸಾಚಾರ ಮತ್ತು ಯುನಿಯನಿಸ್ಟ ನವಾಬ ಸರ್ ಮುಜಫರ ಅಲ್ಲೀಖಾನ ಇವರು ಉಳಿದ ಮಂತ್ರಿಗಳಾಗಿರುವರು. ಪಂಜಾಬದಂಥ ಮುಸ್ಲಿಂ ಬಹುಸಂಖ್ಯಾಕ ಪ್ರಾಂತದಲ್ಲಿ ಸಮ್ಮಿಶ್ರಮಂತ್ರಿಮಂಡಳ ಸ್ಥಾಪಿಸಬೇಕಾದುದು ಹಿತಕರವಾದುದು. ಅಂತೆಯೇ ಕಾಂಗ್ರೆಸ್ ವರಿಷ್ಠರು ಮುಸ್ಲಿಂಲೀಗದ ಸಹಕಾರವನ್ನು ಪಡೆದು ಮಂತ್ರಿಮಂಡಳ ರಚಿಸಬೇಕೆಂದು ಪ್ರಯತ್ನಿಸಿದರು. ಆದರೆ ಲೀಗಿನ ಹಟಮಾರಿತನದಿಂದ ಅದು ಸಾಧ್ಯವಾಗಲಿಲ್ಲ. ಮುಸಲ್ಮಾನರ ಏಕಮೇವ ಪ್ರತಿನಿಧಿಗಳು ತಾವೇ ಎಂಬ ಹಟವನ್ನು ಮುಸ್ಲಿಂ ಲೀಗು ಇನ್ನೂ ಬಿಡುವದಿಲ್ಲ. ತತ್ಪರಿಣಾಮವಾಗಿ ಸಮ್ಮಿಶ್ರ ಸರಕಾರ ಸ್ಥಾಪನೆಗೆ ತಡೆಯುಂಟಾಗುತ್ತದೆ. ಇದೀಗ ಮುಸ್ಲಿಂಲೀಗಿನ ಸಹಕಾರವಿಲ್ಲದೆ ಸ್ಥಾಪಿತವಾದ ಮಂತ್ರಿಮಂಡಳಕ್ಕೆ ಗವರ್ನರರು ಒಪ್ಪಿಗೆ ಕೊಟ್ಟದ್ದರಿಂದ ಮುಸ್ಲಿಂಲೀಗ ಪ್ರಭೃತಿಗಳು ರೊಚ್ಚಿಗೆದ್ದಿರುವರು. ಈ ಮಂತ್ರಿಮಂಡಳದ ವಿರುದ್ಧವಾಗಿ ಪ್ರಚಾರ ನಡೆಸಿರುವರಲ್ಲದೆ ಯಾದವಿಯ ಬೆದರಿಕೆಯನ್ನೂ ಹಾಕಿರುವರು. ಲಾಹೋರದಲ್ಲಿ ಹೊಸಮಂತ್ರಿಮಂಡಳದ ಅಣಕಸ್ಮಶಾನಯಾತ್ರೆಯನ್ನು ಹೊರಡಿಸಿ ಹಿಂದುಮುಸಲ್ಮಾನ ವಿದ್ಯಾರ್ಥಿಗಳಲ್ಲಿ ಗೊಂದಲಕ್ಕೆ ಅವಕಾಶವುಂಟುಮಾಡಿದರು. ಕಾಂಗ್ರೆಸ್ ಸಮ್ಮಿಶ್ರ ಪಕ್ಷಕ್ಕೆ ಪಂಜಾಬದಲ್ಲಿ ಬಹುಮತವಿದೆ. ಅಂದಬಳಿಕ ಆ ಪಕ್ಷದವರಿಗೆ ಮಂತ್ರಿಮಂಡಳ ರಚಿಸಲು ಆಮಂತ್ರಣ ಕೊಡುವದರಲ್ಲಿ ಗವರ್ನರರ ತಪ್ಪೇನು ? ಒಂದು ವೇಳೆ ಬಹುಮತವಿಲ್ಲದಿದ್ದರೆ ಮಂತ್ರಿಮಂಡಳದ ವಿರುದ್ಧ ಅವಿಶ್ವಾಸ ಗೊತ್ತುವಳಿಯನ್ನು ಪಾಸಮಾಡಿಕೊಳ್ಳುವುದು ನ್ಯಾಯ್ಯ ಮಾರ್ಗ. ಪಂಜಾಬದಲ್ಲಿ ಅನ್ಯಾಯವಾಯಿತೆಂದು ಕೂಗುತ್ತಿರುವ ಲೀಗಿನವರು ಸಿಂಧದಲ್ಲಿ ತಮ್ಮ ಬಹುಮತವಿಲ್ಲದಿದ್ದರೂ ಮಂತ್ರಿಮಂಡಳ ಸ್ಥಾಪಿಸಿಕೊಂಡಿರುವರು. ಸಿಂಧ ಮಂತ್ರಿಮಂಡಳ ಎತ್ತಿಹಿಡಿಯುವ ಲೀಗಿನವರು ಪಂಜಾಬ ಮಂತ್ರಿಮಂಡಳದ ಬಗ್ಗೆ ಮಾತ್ರ ಒಳ್ಳೆ ಕೂಗೆಬ್ಬಿಸಿರುವರು. ಇದಾವ ಬಗೆಯ ನ್ಯಾಯವೊ?

ವಿಜಯೋತ್ಸವವಂತೆ !

ಬ್ರಿಟಿಶ ಸರಕಾರದವರು ಹೂಡಿದ ಯುದ್ಧದಲ್ಲಿ ವಿಜಯ ದೊರಕಿತೆಂದು ಕಳೆದವಾರ ದಿಲ್ಲಿಯಲ್ಲಿ ವಿಜಯೋತ್ಸವ ಸಪ್ತಾಹವನ್ನಾಚರಿಸಲಾಯಿತು. ಈ ಯುದ್ಧ ಭಾರತೀಯರದಲ್ಲ ಈ ವಿಜಯವೂ ಅವರದಲ್ಲ ಎಂಬುದಾಗಿ ಭಾರತೀಯರು ಒಂದೇ ಸವನೆ ಹೇಳುತ್ತ ಬಂದುದುಂಟು. ಅದನ್ನು ಹಾಗೆ ಬಿಟ್ಟರೂ ಹಿಂದುಸ್ತಾನದ ಸದ್ಯದ ಕಂಗಾಲ ಪರಿಸ್ಥಿತಿಯನ್ನನುಲಕ್ಷಿಸಿಯಾದರೂ ಈ ವಿಜಯೋತ್ಸವವನ್ನು ಮಾಡಬೇಡಿರಿ, ಲಕ್ಷಗಟ್ಟಲೆ ರೂಪಾಯಿಗಳನ್ನು ಹಾಳುಮಾಡಬೇಡಿರಿ ಎಂದು ಹಿಂದುಸ್ತಾನದ ಪ್ರಮುಖ ಪಕ್ಷಗಳು ಹೇಳಿದವು. ಕಾಂಗ್ರೆಸ್ ಲೀಗ ಪಕ್ಷಗಳು ಒಮ್ಮತದಿಂದ ಈ ಉತ್ಸವವನ್ನು ವಿರೋಧಿಸಿದವು. 'ಅದರ ಮೊದಲೆ ಇದೆಲ್ಲ ಏರ್ಪಾಟು ಮಾಡಲಾಗಿದೆ. ಹೆಚ್ಚಿನ ವೆಚ್ಚ ಮುಂತಾದ್ದೇನು ಆಗುವುದಿಲ್ಲೆಂದು' ಮುಂತಾಗಿ ಹೇಳಿ ಸಮಾಧಾನ ಪಡಿಸಲು ಪ್ರಯತ್ನಿಸಿದರು. ಉತ್ಸವವೂ ನಡೆಯಿತು. ಕಾಂಗ್ರೆಸ್ ಮತ್ತು ಲೀಗಿನವರು ಈ ಉತ್ಸವವನ್ನು ಬಹಿಷ್ಕರಿಸಿದರು ಆದರೂ ಹರತಾಳ ಮುಂತಾದ್ದೇನೂ ಮಾಡಬಾರದೆಂದು ಪ್ರಕಟಿಸಲಾಗಿತ್ತು. ಆದರೆ ದಿಲ್ಲಿಯಲ್ಲಿಯ ಅಂಗಡಿಕಾರರು ಸ್ವಯಂ ಹರತಾಳವನ್ನಾಚರಿಸಿದರು. ಉದ್ರೇಕಗೊಂಡ ಜನವನ್ನು ಲಾಠಿಪ್ರಹಾರ ಅಶ್ರುವಾಯು ಪ್ರಯೋಗ ಗೋಳೀಬಾರು ಮೊದಲಾದವುಗಳಿಂದ ಮತ್ತಷ್ಟು ಪ್ರಕ್ಷುಬ್ಧಗೊಳಿಸಿದರು. ತತ್ಪರಿಣಾಮವಾಗಿ ೬ ಜನ ಸತ್ತರಲ್ಲದೆ ಅನೇಕರು ಗಾಯಗೊಂಡರು. ನಗರಭವನ ಮೊದಲಾದವುಗಳು ಸುಡಲ್ಪಟ್ಟವು. ಕೆಂಪುಕೋಟೆಯ ಬಳಿ ನಿಂತಿದ್ದ ಇಬ್ಬರು ತರುಣರ ಮೇಲೆ ಗುಂಡು ಹಾಕಿದ್ದರಿಂದ ಅವರು ಮರಣ ಹೊಂದಿದರು. ಆ ಸ್ಮಶಾನಯಾತ್ರೆಯ ಮೇಲೆ ಪೋಲೀಸರು ಲಾಠೀ ಪ್ರಹಾರ ಮಾಡಿದರೆಂದು ಆರೋಪ. ಈ ರೀತಿ ಗೋಳೀಬಾರು ಮತ್ತು ಲಾಠೀ ಪ್ರಹಾರ ಮಾಡುವದು ಅದಾವ ಬಗೆಯ ನ್ಯಾಯವೋ? ಈ ಬಗ್ಗೆ ಕೇಂದ್ರ ಶಾಸನ ಸಭೆಯಲ್ಲಿ ನಿಲುವಳಿ ಸೂಚನೆಯೂ ಸ್ವೀಕೃತವಾಯಿತು. ಆಗ ಗೃಹಮಂತ್ರಿಗಳು ಚರ್ಚೆಗೆ ಉತ್ತರ ಕೊಡುತ್ತ ಇದೀಗ ಪ್ರಾಂತಿಕ ಹಾಗೂ ಕೇಂದ್ರ ಸರಕಾರದವರು ಇಂಥ ಸಂದರ್ಭಗಳಲ್ಲಿ ಒಳ್ಳೆ ಸಂಯಮದಿಂದ ವರ್ತಿಸುವರೆಂದು ಹೇಳಿದರು. ಸಂಯಮಿ ಧೋರಣವನ್ನು ತಳೆದಿರುವಾಗಲೆ ದೇಶದಲ್ಲಿ ಇಷ್ಟೊಂದು ಹತ್ಯಾಕಾಂಡ ನಡೆದಿರುವದು. ಸರಕಾರದಲ್ಲಿ ಈ ಸಂಯಮವಿಲ್ಲದಿದ್ದರೆ ದೇಶವೆಲ್ಲ ಅದೆಷ್ಟು ಹುರಿದೇಳುತ್ತಿದ್ದಿತೊ ತಿಳಿಯದು. ನಿಜವಾಗಿ ಸರಕಾರದ ಹೃದಯ ಪರಿವರ್ತನೆಯಾಗಿದ್ದರೆ ಅವರು ಕೂಡಲೆ ದೇಶಕ್ಕೆ ಸ್ವಾತಂತ್ರ್ಯ ಕೊಟ್ಟು ಭಾರತೀಯರು ಕೇಳಿಕೊಂಡಂತೆ ಗಂಟುಮೂಟೆ ಕಟ್ಟಿಕೊಂಡು ಹೋಗುವುದೇ ಶ್ರೇಯಸ್ಕರ.

ಮಂತ್ರಿಮಂಡಳದ ಶಿಷ್ಟಮಂಡಳ

ಬ್ರಿಟಿಶ್ ಮಂತ್ರಿಮಂಡಳದ ಮೂವರು ಶಿಷ್ಟರು ಭಾರತಕ್ಕೆ ಬರುವದಕ್ಕಾಗಿ ಇದೇ ೧೯ ನೇ ತಾರೀಕು ಲಂಡನದಿಂದ ಹೊರಡುವರಷ್ಟೆ ಹಿಂದುಸ್ತಾನದ ಸಮಸ್ಯೆಯನ್ನು ಬಿಡಿಸುವ ಬಗ್ಗೆ ಭಾರತೀಯರೊಡನೆ ವಿಚಾರವಿನಿಮಯ ಮಾಡುವದಕ್ಕಾಗಿ ಅವರು ಇಲ್ಲಿಗೆ ಬರುವರು. ಈ ಮೊದಲು ಪಾರ್ಲಮೆಂಟು ಶಿಷ್ಟಮಂಡಳದವರು ಬಂದು ವಿಚಾರ ವಿನಿಮಯ ಮಾಡಿ ಹೋಗಿ ವರದಿಯನ್ನೊಪ್ಪಿಸಿದ ನಂತರ ಮಂತ್ರಿಮಂಡಳದ ಶಿಷ್ಟಮಂಡಳವು ಬರಲು ಅಣಿಯಾಗಿದೆ. ಈ ಮಂತ್ರಿಮಂಡಳದ ಶಿಷ್ಟಮಂಡಳಗಳ ಸದುದ್ದೇಶಗಳ ಬಗ್ಗೆ ಮೊದಲು ಸಂಶಯ ತೆಗೆದುಕೊಳ್ಳಬಾರದೆಂದು ಮಹಾತ್ಮಾ ಗಾಂಧಿಯವರು ಅಭಿಪ್ರಾಯ ಪಟ್ಟಿರುವರು. ಕಾಂಗ್ರೆಸ್ ಕಾರ್ಯನಿರ್ವಾಹಕ ಸಮಿತಿಯವರೂ ಈ ಪ್ರಶ್ನೆಯ ವಿಚಾರಮಾಡಿ ಒಂದು ಉಪಸಮಿತಿಯನ್ನೂ ನೇಮಿಸಿದ್ದಾರೆ. ಸಿಮಲಾದ ತಂಪು ಹವೆಯಲ್ಲಿ ಕುಳಿತು ಈ ಶಿಷ್ಟರು ಭಾರತೀಯರ ಮುಖಂಡರೊಡನೆ ಚರ್ಚೆ ನಡೆಸುವರು. ಕ್ರಿಪ್ಸ ಕೊಡುಗೆಯಲ್ಲಿ ಬದಲಾವಣೆ ಮಾಡುವದವಶ್ಯವೆನಿಸಿದರೆ ಹಾಗೆ ಮಾಡಲಾಗುವದೆಂದೂ ಲಾರ್ಡರ ಸಭೆಯಲ್ಲಿ ಭಾರತಮಂತ್ರಿಗಳು ಅಪ್ಪಣೆಸಿರುವರು. ಕ್ರಿಪ್ಸ ಕೊಡುಗೆಯನ್ನು ಇಡೀಭಾರತವೇ ನಿರಾಕರಿಸಿದ್ದುಂಟು. ಅದೇ ಬಗೆಯ ಕೊಡುಗೆಯನ್ನು ಕೊಡಬಯಸಿದರೆ ಮತ್ತೆ ಈ ಸಂಧಾನ ಯಶಸ್ವಿಯಾಗುವದು ಭಾರತಕ್ಕೆ ಸ್ವಾತಂತ್ರ್ಯ ಕೊಡಬೇಕೆಂದು ನಿರ್ಧರಿಸಿ ವಿಚಾರ ನಡೆಸಿದ್ದಾದರೆ ಮಾತ್ರ ಈ ಮಂತ್ರಿಮಂಡಳದ ರಾಯಭಾರ ಯಶಸ್ವಿಯಾಗುವದು. ಅವರು ಇತ್ತ ಗಮನಿಸುವರೊ ?

ಸೂಚನೆ

ವಾಡಿಕೆಯಂತೆ ಹೋಳೀಹಬ್ಬದ ನಿಮಿತ್ತ ತಾ॥ ೨೫-೩-೧೯೪೬ನೇ ತಾರೀಕಿನ ಸಂಚಿಕೆ ಹೊರಡುವುದಿಲ್ಲ. ಮುಂದಿನ ಸಂಚಿಕೆ ಎಂದಿನಂತೆ ತಾ॥ ೧-೪-೧೯೪೬ ನೇ ದಿವಸ ಹೊರಡುವದು.

ವ್ಯವಸ್ಥಾಪಕ
ಕರ್ಮವೀರ

ರಾಜಕೀಯ ಸಮಸ್ಯೆಯ ಚರ್ಚೆ

ಕಾಂಗ್ರೆಸ್ ಕಾರ್ಯಕಾರೀ ಮಂಡಳದ ಸಭೆ

ಬ್ರಿ. ಮಂತ್ರಿವರ್ಗ ಕಾಣಲು ಸಮಿತಿಯ ನೇಮಕ

ಕಾಂಗ್ರೆಸ್ ಕಾರ್ಯನಿರ್ವಾಹಕ ಸಮಿತಿಯ ಸಭೆ ೧೨ನೇ ತಾರೀಕು ಮಧ್ಯಾಹ್ನ ಮುಂಬೈಯ ಬಿರ್ಲಾಭವನದಲ್ಲಿ ಅಧ್ಯಕ್ಷ ಮೌಲಾನಾ ಅಬುಲ್ ಕಲಂ ಅಜಾದರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಅಷ್ಟರಲ್ಲಿ ಮುಂಬೈಗೆ ಮುಟ್ಟಿದ ಸದಸ್ಯರು ಸಭೆಗೆ ಬಂದಿದ್ದರು. ವಿಶೇಷ ಆಮಂತ್ರಣದ ಮೇರೆಗೆ ಮಹಾತ್ಮಾ ಗಾಂಧೀಜಿಯವರು ಅದರಲ್ಲಿ ಭಾಗವಹಿಸಿದ್ದರು. ಗಾಂಧೀಜಿಯವರು ಸದ್ಯದ ಪರಿಸ್ಥಿತಿಯನ್ನು ಕುರಿತು ಭಾಷಣ ಮಾಡಿದರೆಂದು ತಿಳಿಯುತ್ತದೆ. ಅನಂತರ ಅಧ್ಯಕ್ಷರು ಕಾರ್ಯಸಮಿತಿಯು ಈಗ ಮೂರು ತಿಂಗಳ ಹಿಂದೆ ಕಲಕತ್ತೆಯಲ್ಲಿ ಕೂಡಿದಂದಿನಿಂದ ಇಂದಿನ ವರೆಗಿನ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಿದರು. ವಾಯಿಸರಾಯರೊಡನೆ ತಾವು ಇತ್ತೀಚೆ ನಡೆಸಿದ ಮಾತುಕತೆಗಳನ್ನು ವಿವರಿಸಿದರು. ಕಾಂಗ್ರೆಸ್ಸಿನ ಒಳಗಿನ ಮತ್ತು ಹೊರಗಿನ ಜನರು ಇತ್ತೀಚೆ ಹಿಂಸಾ ಪ್ರವೃತ್ತಿಯತ್ತ ಎಳೆಸಿದುದರ ಬಗ್ಗೆ ವಿಮರ್ಶನೆಯನ್ನು ವ್ಯಕ್ತಪಡಿಸಿ ಕಾಂಗ್ರೆಸ್ಸು ಅಹಿಂಸೆಗೆ ಸಂಪೂರ್ಣ ಬದ್ಧವಾಗುಳಿಯುವದವಶ್ಯವಾಗಿದೆಂದು ಹೇಳಿದರು. ಚುನಾವಣೆಗಳನ್ನು ಹೋರಾಡುವಾಗ ನಾವು ನಮ್ಮ ಧ್ಯೇಯವಾದ ಸಂಪೂರ್ಣ ಸ್ವಾತಂತ್ರ್ಯದ ತಳಹದಿಯ ಮೇಲೆ ಬ್ರಿಟಿಸ್ ಹಿಂದುಸ್ಥಾನಕ್ಕೆ ಕೂಡಲೆ ಅಧಿಕಾರವನ್ನು ವಹಿಸಿಕೊಡುವ ಧೋರಣ ಇಟ್ಟುಕೊಂಡಿದ್ದೇವೆಂದೂ ಅವರು ಹೇಳಿದರು. ಅಧ್ಯಕ್ಷರು ಈ ಆಶಯದ ಭಾಷಣ ಮಾಡಿದ ನಂತರ ಪರಿಸ್ಥಿತಿಯ ಸಾಮಾನ್ಯ ಚರ್ಚೆನಡೆಯಿತು. ಎಲ್ಲರೂ ಅದರಲ್ಲಿ ಭಾಗವಹಿಸಿದರು.

ಇಂದಿನ ಸಭೆಯಲ್ಲಿ ಆಹಾರ ಪರಿಸ್ಥಿತಿಯ ಚರ್ಚೆಯೂ ನಡೆಯಿತೆಂದು ಮೌಲಾನಾ ಅಜಾದರು ಸುದ್ದಿಗಾರರಿಗೆ ಹೇಳಿದರು. ಸಾಯಂಕಾಲ ೬-೩೦ಕ್ಕೆ ಇಂದಿನ ಸಭೆ ಮುಗಿಯಿತು.

೧೩ ನೇ ತಾರೀಕು ಮುಂಜಾನೆ ಭುಲಾಭಾಯರ ಮನೆಯಲ್ಲಿ ಮತ್ತೆ ಸಭೆ ಸೇರಿತು. ರಾಜಕೀಯ ಹಾಗು ಆಹಾರ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆಯಿತು. ಮಹಾತ್ಮಾ ಗಾಂಧಿಯವರು ಈಗಿನ ಚರ್ಚೆಯಲ್ಲಿ ಭಾಗವಹಿಸಿರಲಿಲ್ಲ. ಪಂಡಿತ ಜವಾಹರಲಾಲರು ನಾಗಪುರ ಮೇಲಿನಿಂದ ಬಂದಿಳಿದ ಕೂಡಲೆ ಶ್ರೀ ಭುಲಾಭಾಯರ ಮನೆಗೆ ಹೋಗಿ ಕಾಂಗ್ರೆಸ್ ಅಧ್ಯಕ್ಷರನ್ನು ಭೆಟ್ಟಿಯಾದರು. ನಂತರ ಇಬ್ಬರೂ ಬಿರ್ಲಾ ಭವನಕ್ಕೆ ತೆರಳಿದರು. ಮಧ್ಯಾಹ್ನದ ಅಧಿವೇಶನ ಸಾಯಂಕಾಲ ೭ ಗಂಟೆಗೆ ಕೊನೆಗಂಡಿತು. ಆದರೆ ರಾಜಕೀಯ ಪರಿಸ್ಥಿತಿಯ ಚರ್ಚೆ ಮುಗಿಯದಿದ್ದುದರಿಂದ ೧೪ ನೆ ತಾರೀಕು ಮುಂಜಾನೆ ಭುಲಾಭಾಯರ ಮನೆಯಲ್ಲಿ ಕೂಡುವದೆಂದು ಅಧ್ಯಕ್ಷರು ಹೇಳಿದರು.

ಮಹತ್ವದ ನಿರ್ಣಯಗಳು

ಕಾಂಗ್ರೆಸ ಕಾರ್ಯನಿರ್ವಾಹಕ ಸಮಿತಿಯು ಕೆಲ ಮಹತ್ವದ ನಿರ್ಣಯಕ್ಕೆ ಬಂದಿದೆಯೆಂದು ತಿಳಿಯುತ್ತದೆ. ಅಧಿಕೃತವಾಗಿ ಯಾವ ಪ್ರಕಟನೆ ಹೊರಟಿರುವದಿಲ್ಲ. ವಾಯಿಸರಾಯ ವೇವೆಲ್ಲರು ಸ್ಥಾಪಿಸಲೆತ್ನಿಸುತಿರುವ ಆಹಾರ ಸಮಿತಿಯಲ್ಲಿ ಕಾಂಗ್ರೆಸ್ಸಿಗರು ಭಾಗ ವಹಿಸಬಾರದೆಂದು ನಿರ್ಣಯಿಸಲಾಯಿತು. ಕಾಂಗ್ರೆಸ್ ಅಧ್ಯಕ್ಷರ ಮೂಲಕ ಆಹಾರ ಸಮಿತಿಯೊಂದನ್ನು ರಚಿಸಲು ತಮಗೆ ಮನಸ್ಸಿಂಟಾಗಿದೆಯೆಂದು ವಾಯಿಸರಾಯರು ಅಭಿವ್ಯಕ್ತ ಮಾಡಿದ್ದರು. ಈ ಸೂಚನೆಯನ್ನು ಕಾರ್ಯಕಾರಿ ಮಂಡಳಿದ ಮುಂದೆ ಇಡಲಾಗಿತ್ತು. ಈ ವಿಷಯದ ಬಗ್ಗೆ ಎರಡು ಗಂಟೆ ಚರ್ಚೆಯಾಗಿ ಕೊನೆಗೆ ಬ್ರಿಟಿಶ್ ಮಂತ್ರಿವರ್ಗದೊಡನೆ ಹಿಂದೀ ರಾಜ್ಯಘಟನೆ ಬಗ್ಗೆ ಶೀಘ್ರದಲ್ಲಿಯೇ ಮಾತುಕತೆ ಪ್ರಾರಂಭವಾಗುವದರಿಂದ ಕೇಂದ್ರದಲ್ಲಿ ಬದಲಾವಣೆ ಆಗುವದು ಸಹಜವಿದೆ. ಈ ಪರಿಸ್ಥಿತಿಯಲ್ಲಿ ಆಹಾರ ಸಮಿತಿಯಲ್ಲಿ ಕಾಂಗ್ರೆಸ್ಸು ಭಾಗವಹಿಸುವದೂ ಪ್ರಯೋಜನವಾಗುವದಿಲ್ಲ. ಒಂದು ವೇಳೆ ಕೇಂದ್ರದಲ್ಲಿ ಬದಲಾವಣೆಯಾಗದಿದ್ದರೆ ಇಂಥ ಸಮಿತಿಯಿಂದ ಆಹಾರ ಸಮಸ್ಯೆಯನ್ನು ಬಿಡಿಸುವದಾಗುವದಿಲ್ಲ. ಈ ಎಲ್ಲ ಕಾರಣಗಳಿಂದ ಕಾಂಗ್ರೆಸ್ಸು ಅದರಲ್ಲಿ ಭಾಗವಹಿಸುವದು ಬೇಡ ಇದರಂತೆ ವಾಯಿಸರಾಯರಿಗೆ ತಿಳಿಸಬೇಕು ಎಂದು ಕಾರ್ಯಸಮಿತಿ ನಿರ್ಧರಿಸಿತು.

ಮಂತ್ರಿಗಳ ಸಂಬಳ ಸಮಸ್ಯೆ

ಮಂತ್ರಿಗಳ ಸಂಬಳವನ್ನು ೫೦೦ ರೂಪಾಯಿಗಳಿಂದ ಇನ್ನೂ ಹೆಚ್ಚಿಸಬೇಕೆಂಬ ಪ್ರಶ್ನೆ ಚರ್ಚಿಸಲಾಯಿತು. ಜೀವನಮಟ್ಟವು ಬಹಳ ಏರಿದ್ದರಿಂದ ಸಂಬಳ ಏರಿಸುವದವಶ್ಯವೆಂದು ಸಮಿತಿಗೆ ಮನವರಿಕೆಯಾಯಿತು. ಎಲ್ಲ ಭತ್ತೆ ಮುಂತಾದ್ದನ್ನು ಕೂಡಿಸಿ ಸಂಬಳವನ್ನು ೧೫೦೦ಕ್ಕೇರಿಸಬೇಕೆಂದು ಎಲ್ಲ ಸದಸ್ಯರ ಮನಸಿನಲ್ಲಿದೆಂದು ತಿಳಿಯುತ್ತದೆ. ಈ ಬಗ್ಗೆ ಯಾವ ನಿರ್ಣಯವನ್ನೂ ಮಾಡಲಿಲ್ಲ ಇದನ್ನು ಬೇಗನೆ ಗೊತ್ತುಪಡಿಸಿ ಈಗ ಕಾಂಗ್ರೆಸ್ ಮಂತ್ರಿಮಂಡಳಗಳಿರುವ ಪ್ರಾಂತಗಳಿಗೆ ಅಧ್ಯಕ್ಷರು ತಿಳಿಸುವರು.

ಹಣಕಾಸಿನ ಮಸೂದೆ

ಈ ವರ್ಷದ ಹಣಕಾಸಿನ ಮಸೂದೆಯನ್ನು ವಿರೋಧಿಸಬಾರದೆಂದು ವಾಯಿಸರಾಯರು ಸ್ವತಃ ಬಿನ್ನವಿಸಿರುವಾಗ ಕಾಂಗ್ರೆಸ್ಸು ಯಾವ ಧೋರಣ ವಹಿಸಬೇಕೆಂಬ ಬಗ್ಗೆ ಚರ್ಚೆಯಾಯಿತು. ಕೊನೆಗೆ ಈ ಹಣಕಾಸಿನ ಮಸೂದೆಯನ್ನು ಎಂದಿನಂತೆ ನಿರಾಕರಿಸಲು ಕೇಂದ್ರ ಶಾಸನ ಸಭೆಯ ಕಾಂಗ್ರೆಸ ಪಕ್ಷದ ಧುರೀಣರಿಗೆ ಅಧ್ಯಕ್ಷರು ತಿಳಿಸಬೇಕೆಂದು ಗೊತ್ತಾಯಿತು.

ಕಾಂಗ್ರೆಸದಲ್ಲಿರುವ ಸೋಶಾಲಿಸ್ಟ ಮತ್ತು ಮುಂದೋಗಾಮಿ ಪಕ್ಷಗಳ ಜನರನ್ನು ಕಾಂಗ್ರೆಸ್ದಿಂದ ಹೊರತಳ್ಳಲು ಕಾಂಗ್ರೆಸ್ ಮಂಡಳರು ನಿರ್ಧರಿಸಿರುವರೆಂದು ಪತ್ರಿಕೆಗಳಲ್ಲಿ ಪ್ರಕಟವಾದ ವರದಿಗಳ ಬಗ್ಗೆ ಕೆಲಸಮಯ ಚರ್ಚೆ ನಡೆಯಿತು. ಉಗ್ರಗಾಮಿಗಳು ಇತ್ತೀಚೆ ಕೈಕೊಂಡ ಕೆಲ ಚಟುವಟಿಕೆಗಳ ಬಗ್ಗೆ ಕಾಂಗ್ರೆಸ ಅಧ್ಯಕ್ಷರು ತಮ್ಮ ಅಸಮ್ಮತಿ ಸೂಚಿಸಿದರು. ಆದರೆ ಅಂಥವರನ್ನು ಯಾವದೇ ಸಂದರ್ಭದಲ್ಲಿ ಕಾಂಗ್ರೆಸ್ಸಿನಿಂದ ಹೊರದೂಡಲಾಗುವದಿಲ್ಲೆಂದು ಅವರು ಸ್ಪಷ್ಟಪಡಿಸಿದರು. ಈ ಸಂಬಂಧದಲ್ಲಿ ಎಲ್ಲ ಕಾಂಗ್ರೆಸ ಸಂಸ್ಥೆಗಳಿಗೆ ಆಜ್ಞಾಪತ್ರಗಳನ್ನು ಕಳಿಸಬೇಕೆಂದು ಸಮಿತಿ ನಿರ್ಣಯಿಸಿತು.

ಮಂತ್ರಿಮಂಡಳ ಕಾಣುವದು

ಭಾರತಕ್ಕೆ ಬರಲಿರುವ ಬ್ರಿಟಿಶ ಮಂತ್ರಿಗಳ ಶಿಷ್ಟಮಂಡಳದೊಡನೆ ಮಾತುಕತೆ ನಡೆಸಲು ಮೌಲಾನಾ ಅಜಾದ, ಸರದಾರ ವಲ್ಲಭಭಾಯಿ ಮತ್ತು ಪಂಡಿತ ಜವಾಹರಲಾಲರ ಸಮಿತಿಯೊಂದನ್ನು ನಿಯಮಿಸಲಾಯಿತು. ಆರೋಗ್ಯ ಸರಿಯಾಗಿದ್ದರೆ ಬಾಬು ರಾಜೇಂದ್ರ ಪ್ರಸಾದರೂ ಈ ಸಮಿತಿಯಲ್ಲಿ ಸೇರುವರು. ಹೊಸದಿಲ್ಲಿಯಲ್ಲಿ ಇಲ್ಲವೆ ಸಿಮಲಾದಲ್ಲಿ ಶಿಷ್ಟಮಂಡಳವನ್ನು ೨೫ನೇ ತಾರೀಕು ಕಾಣಲು ಸಿದ್ಧರಿರಬೇಕೆಂದು ಈ ಸಮಿತಿಯವರಿಗೆ ತಿಳಿಸಲಾಗುವದು. ಅವಶ್ಯವೆನಿಸಿದಾಗ ಮಹಾತ್ಮಾ ಗಾಂಧಿಯವರ ಸಲಹೆಯನ್ನೂ ಈ ಸಮಿತಿಯು ಪಡೆಯುವದು.

ಡಾ. ಸಯ್ಯದ ಮಹಮ್ಮೂದರ ಆಯ್ಕೆ

ಕಾಂಗ್ರೆಸ ವರ್ಕಿಂಗ ಕಮಿಟಿಯ ಹಿಂದಿನ ಸದಸ್ಯರಾದ ಡಾ. ಸಯ್ಯದ ಮಹಮ್ಮೂದರು ೧೩೭೦ ಮತಗಳನ್ನು ಪಡೆದು ಬಿಹಾರ ಶಾಸನ ಸಭೆಗೆ ಆರಿಸಿ ಬಂದರು. ಪ್ರತಿಸ್ಪರ್ಧಿ ಲೀಗ ಉಮೇದ್ವಾರರಾದ ಮಹಮ್ಮದ ಝುಬೀರಖಾನರಿಗೆ ಕೇವಲ ೧೬೬ ಮತಗಳು ಬಿದ್ದವು.

ದಕ್ಷಿಣ ಆಫ್ರಿಕೆಯ ವಿರುದ್ಧ ಭಾರತ ಸರಕಾರದ ಪ್ರತೀಕಾರ

ವ್ಯಾಪಾರ ಸಂಬಂಧ ಕಡಿದುಕೊಳ್ಳಲಾಯಿತು

ದಕ್ಷಿಣ ಆಫ್ರಿಕೆಯ ಸರಕಾರದವರು ಅಲ್ಲಿನ ಹಿಂದೀಯರ ವಿರುದ್ಧ ಕೈಕೊಂಡಿರುವ ವರ್ಣದ್ವೇಷ ಮಸೂದೆಗೆ ಪ್ರತಿಕಾರವೆಂದು ಹಿಂದುಸ್ಥಾನ ಸರಕಾರ ಆ ದೇಶದೊಡನೆ ಮಾಡಿಕೊಂಡ ವ್ಯಾಪಾರ ಒಪ್ಪಂದವನ್ನು ಮುಕ್ತಾಯಗೊಳಿಸಿ ವ್ಯಾಪಾರ ಸಂಬಂಧವನ್ನು ಕಡಿದುಕೊಳ್ಳುವದೆಂದು ವಸಾಹತು ಮಂತ್ರಿ ಡಾ. ಎನ್. ಬಿ. ಖರೆಯವರು ಕೇಂದ್ರ ವಿಧಿಮಂಡಲದಲ್ಲಿ ತಾ ೧೨ಕ್ಕೆ ಪ್ರಕಟಗೊಳಿಸಿದರು. ಅಂಥವೇ ಹೇಳಿಕೆಯೊಂದನ್ನು ಶಾಸನ ಸಭೆಯಲ್ಲಿಯೂ ಕೊಡಲಾಗಿದೆ.

ಪೆಗಿಂಗ್ ಕಾಯಿದೆಯನು (ಅದರ ಅವಧಿ ಈಗ ಮುಗಿಯುತ್ತ ಬಂದಿದೆ.) ಸ್ಥಿರಗೊಳಿಸುವ ಸಲುವಾಗಿ ಜನರಲ್ ಸ್ಮಟ್ಸ ಸರಕಾರ ಹೊಸ ಭೂಸುಧಾರಣೆಯ ಮಸೂದೆಯೊಂದನ್ನು ಸಿದ್ಧಗೊಳಿಸಿದೆ. ಹಿಂದೀಯರನ್ನು ಕೆಲವೊಂದು ಸ್ಥಳಗಳಿಗೆ ಮಾತ್ರ ನಿರ್ಬಂಧಿಸಿಟ್ಟು ಇತರತ್ರ ಅವರು ವಸತಿ ಮಾಡದಂತೆ ಭೂಮಿಕೊಳ್ಳದಂತೆ ತಡೆಯುವದು ಅದರ ಉದ್ದೇಶ. ಹಿಂದೀಯರಿಗೆ ಈ ವರೆಗೆ ಮತಾಧಿಕಾರವಿದ್ದಿಲ್ಲ. ಈಗ ಅವರಿಗೆ ಅವಮಾನಕರದಂಥ ಮತಾಧಿಕಾರವಿತ್ತು, ಬಹಳ ಪರಿಮಿತ ಮತದಾನದಿಂದ ಶಾಸನ ಸಭೆಗೆ ತಮ್ಮ ಪರವಾಗಿ ೩ಜನ ಯುರೋಪಿಯನ್ ಸದಸ್ಯರನ್ನು ಹಿಂದೀಯರನ್ನಲ್ಲ, ಆರಿಸಿ ತಮ್ಮ ಹಕ್ಕುಗಳನ್ನು ಪ್ರತಿಪಾದಿಸುವಂತೆ ಮಾಡುವ ತಂತ್ರವೂ ಆ ಮಸೂದೆಯಲ್ಲಿ ಅಡಕವಾಗಿದೆ. ಈ ಮಸೂದೆಯಿಂದ ಜನರಲ್ ಸ್ಮಟ್ಸರನ್ನು ಪರಾವೃತ್ತಗೊಳಿಸಲು ಹಿಂದುಸ್ಥಾನ ಸರಕಾರ ಕೈಕೊಂಡ ಸಾಮೋಪಾಯಗಳೆಲ್ಲ ನಿರರ್ಥಕವಾಗಿ ಸರಕಾರ ಇದೀಗ ಈ ಪ್ರತಿಕಾರೋಪಾಯವನ್ನು ಕೈಕೊಂಡಿದೆ.

ಒಪ್ಪಂದ

ಹಿಂದುಸ್ಥಾನ ದಕ್ಷಿಣ ಆಫ್ರಿಕೆಗಳಲ್ಲಿ ಇರುವ ೧೯೩೮ ರ ತಾತ್ಪೂರ್ತಿಕ ವ್ಯಾಪಾರಿ ಒಪ್ಪಂದದನ್ವಯ ೧) ಪರಸ್ಪರ ದೇಶದ ಆಯಾತ ನಿರ್ಯಾತ ಸರಕುಗಳ ಮೇಲೆ ಭೇದಭಾವ ಬರುವಂಥ ಸುಂಕ ಹೇರಬಾರದು ೨) ಅವುಗಳ ಬಗ್ಗೆ ಲಾಯಸೆನ್ಸ ಪದ್ಧತಿ ತರುವದಾದರೆ ವಿದೇಶಿ ವಸ್ತುಗಳೊಡನೆ ಭೇದಭಾವ ಮಾಡತಕ್ಕದ್ದಲ್ಲ ೩) ಆದಾಗ್ಯೂ ಅವಶ್ಯವೆನಿಸಿದಾಗ ಕೆಲ ವಸ್ತುಗಳ ಆಯಾತಕ್ಕೆ ಪೂರ್ಣ ಅಥವಾ ಅಂಶತಃ ನಿರ್ಬಂಧ ಹಾಕಬಹುದು. ೪) ಈ ಒಪ್ಪಂದವನ್ನು ೩ ತಿಂಗಳ ನೋಟೀಸು ಕೊಟ್ಟು ರದ್ದುಗೊಳಿಸಬಹುದು.

ಯುದ್ಧ ಪೂರ್ವದಲ್ಲಿ (೧೯೩೮–೩೯)ದ. ಆಫ್ರಿಕೆಯೊಡನೆ ಹಿಂದುಸ್ಥಾನದ ವ್ಯಾಪಾರ ೧೪೯.೨ ಲಕ್ಷ ಇತ್ತು. ೧೯೪೪....೪೫ ರಲ್ಲಿ ಅದು ೧೧೪೭.೮ ಲಕ್ಷಕ್ಕೆ ಏರಿತ್ತು.

ಪರಿಣಾಮ

ಡಾ. ಖರೆಯವರು ಧೈರ್ಯತೋರಿಸಿ ಕೈಕೊಂಡ ಈ ಕ್ರಮದಿಂದ ದಕ್ಷಿಣ ಆಫ್ರಿಕೆಗೆ ತೊಂದರೆ ತುಸು ಆಗಬಹುದಾದರೂ ಅದರ ವ್ಯಾಪಾರದಲ್ಲಿ ಬಿಕ್ಕಟ್ಟು ಉತ್ಪನ್ನವಾಗಲಾರದು ಅದು ಹಿಂದುಸ್ಥಾನದಿಂದ ತರಿಸಿಕೊಳ್ಳುತ್ತಿರುವ ಅತಿ ಮಹತ್ವದ ವಸ್ತುವೆಂದರೆ ಸಣಬಿನ ಸರಕು ಹಿಂದುಸ್ಥಾನಕ್ಕೆ ಅಲ್ಲಿಂದ ಬರುವ ವಸ್ತುಗಳು ಮುಖ್ಯವಾಗಿ ಚರ್ಮ ಹದನಮಾಡುವ ಸಾಮಗ್ರಿಗಳು. ಇದಕ್ಕಾಗಿ ಹಿಂದುಸ್ಥಾನ ಅಮೇರಿಕೆಯ ಕಡೆಗೆ ಕೈ ನೀಡಬಹುದು. ದಕ್ಷಿಣ ಆಫ್ರಿಕೆ ವ್ಯಾಪಾರ ಸಾಮಗ್ರಿಗಳ ಬಗ್ಗೆ ಇಂಗ್ಲಂಡದ ಕಡೆಗೆ ನೋಡಬಾರದು ಒಟ್ಟಿನ ಮೇಲೆ ಇದು ಹಿಂದುಸ್ಥಾನದ ತೀವ್ರನಿಷೇಧವನ್ನು ತೋರಿಸುವ ಒಂದು ಮಾರ್ಗ ಹೊರತು ಬೇರೇನೂ ಅಲ್ಲ, ಈ ಪ್ರತೀಕರಕ್ಕೆ ಸೊಪ್ಪುಹಾಕದೆ ದಕ್ಷಿಣ ಆಫ್ರಿಕೆಯ ವರ್ಣದ್ವೇಷಿ ಬಿಳಿಯರು ತಮ್ಮ ಮಸೂದೆಯನ್ನ ಮುಂದೊತ್ತಿಯೆ ತೀರುವರೆಂದು ತಿಳಿದುಬಂದಿದೆ.

ದ. ಆಫ್ರಿಕಾ ಹಿಂದೀ ಶಿಷ್ಟಮಂಡಲ

ವರ್ಣದ್ವೇಷ ಕಾಯಿದೆಯನ್ನು ಬಿಳಿಯರು ತಂದರೆ ದಕ್ಷಿಣ ಆಫ್ರಿಕೆಯಲ್ಲಿರುವ ಹಿಂದೀಯರಿಗೆ ಆಗುವ ಅಪಾರ ಹಾನಿಯನ್ನು ಹಿಂದುಸ್ಥಾನ ಸರಕಾರಕ್ಕೆ ಮನದಟ್ಟು ಮಾಡಲು ದ. ಆಫ್ರಿಕಾ ಹಿಂದೀ ಕಾಂಗ್ರೆಸ್ಸಿನ ಶಿಷ್ಟ ಮಂಡಲವೊಂದು ಹಿಂದುಸ್ಥಾನಕ್ಕೆ ಬಂದಿದೆ. ಅದು ವಾಯಿಸರಾಯರನ್ನು ಕಂಡಿತು. ಅದರ ಮುಂದಾಳುಗಳಾದ ಸೋರಾಬಜಿ ರುಸ್ತುಮಜಿಯವರು ಈ ಪ್ರತಿಕಾರ ಕ್ರಿಯೆಯನ್ನು ಸ್ವಾಗತಿಸಿದ್ದಲ್ಲದೆ ದ. ಆಫ್ರಿಕೆಯಿಂದ ಹಿಂದೀ ಹಾಯಕಮೀಶನರರನ್ನೂ ಹಿಂದೆ ಕರೆಸಿಕೊಳ್ಳಬೇಕೆಂದು ಅಭಿಪ್ರಾಯಪಟ್ಟಿದ್ದಾರೆ ಹಿಂದುಸ್ಥಾನ ದಕ್ಷಿಣ ಆಫ್ರಿಕೆಯೊಡನೆ ವ್ಯಾಪಾರ ಸಂಬಂಧ ಕಡಿದುಕೊಂಡರೆ ಅಲ್ಲಿರುವ ಹಿಂದೀಯರಿಗೆ ಏನೂ ಹಾನಿಯಾಗುವದಿಲ್ಲೆಂದೂ ಅವರು ಹೇಳಿದ್ದಾರೆ. ಇದೆಲ್ಲಕ್ಕೂ ಹಿಂದೀಯರ ಪರಾಧೀನತೆಯೇ ಕಾರಣವೆಂದೂ ಹಿಂದೊಮ್ಮೆ ಜಪಾನಿ ನೌಕಾಧಿಕಾರಿಗೆ ಪೇಯಗಳನ್ನು ನಿರಾಕರಿಸಿದಾಗ ದ. ಆಫ್ರಿಕಾ ಬಿಳಿಯರಿಗೆ ಗುಂಡು ಹಾಕುವದಾಗಿ ಅವನು ಹೆದರಿಸಿದ್ದರಿಂದ ಬಿಳಿಯರು ದಾರಿಗೆ ಬಂದ ಕಥೆಯನ್ನು ಅವರು ಉದಾಹರಿಸಿದರು. ಹಿಂದುಸ್ಥಾನ ಮುಯ್ಯಕ್ಕೆ ಮುಯ್ಯ ತೀರಿಸಿಕೊಳ್ಳದೆ ಅದರ ಸ್ವಾಭಿಮಾನ ಉಳಿಯದೆಂದು ಅವರ ಅಭಿಪ್ರಾಯವಾಗಿದೆ.

ಸಂಯುಕ್ತಪ್ರಾಂತ—ಬಿಹಾರ ಶಾಸನಸಭೆ

ಬಿಹಾರ ಶಾಸನ ಸಭೆಗೆ ಈ ವರೆಗೆ ಆರಿಸಿಬಂದ ಪ್ರತಿನಿಧಿಗಳ ಸಂಖ್ಯೆಯನ್ನು ನೋಡಿದರೆ ಆಯಾ ಪಕ್ಷಗಳ ಬಲಾಬಲವೆಂತಿದೆಯೆಂದು ಗೊತ್ತಾಗುವದು. ಕಾಂಗ್ರೆಸ್ ೯೨, ಮುಸ್ಲಿಂಲೀಗ ೨೦, ಜಮೇತುಲ್—ಮೊಮಿನ ೫, ಆದಿವಾಸಿ ೩, ಜಮೀನದಾರ ೪, ಸ್ವತಂತ್ರ (ವಿಶಿಷ್ಟ ಸ್ಥಳ) ೭. ಹೀಗೆ ೧೩೧ ಸ್ಥಳಗಳ ಪರಿಣಾಮ ಹೊರಬಿದ್ದಿದೆ. ಒಟ್ಟು ಇರುವ ೧೫೨ ಸ್ಥಳಗಳಲ್ಲಿ ಕಾಂಗ್ರೆಸ್ಸು ಮೇಲೆ ಹೇಳಿದಂತೆ ೯೨ ಸ್ಥಳಗಳನ್ನು ಪಡೆದದ್ದರಿಂದ ಈಗಲೆ ಬಹುಮತವನ್ನು ಪಡೆದಂತಾಗಿದೆ ಛೋಟಾನಾಗಪುರ ಸ್ಥಳದಲ್ಲಿ ಆದಿವಾಸಿ ಹುರಿಯಾಳು ಆರಿಸಿಬಂದಿದ್ದು ಕಾಂಗ್ರೆಸ್ಸು ಮೊದಲನೆ ಸಲ ಪರಾಜಯ ಹೊಂದಿತು. ಅದರೆ ಆದಿವಾಸಿಗಳ ಧುರೀಣನನ್ನು ಕಾಂಗ್ರೆಸ ಹುರಿಯಾಳು ಸೋಲಿಸಿರುವನು. ೪೦ ಮುಸಲ್ಮಾನ ಸ್ಥಳಗಳಲ್ಲಿ ಲೀಗು ೨೦ ಸ್ಥಳಗಳನ್ನು ಪಡೆದಿದೆ. ಮೂರು ಸ್ಥಳಗಳಲ್ಲಿ ಮೊಮಿನ್ ಹುರಿಯಾಳುಗಳು ಲೀಗ ಹುರಿಯಾಳುಗಳನ್ನು ಸೋಲಿಸಿರುವರು.

ಸಂಯುಕ್ತ ಪ್ರಾಂತದಲ್ಲಿ ಒಟ್ಟುಇರುವ ೨೨೮ ಸ್ಥಳಗಳಲ್ಲಿ ಕಾಂಗ್ರೆಸ್ಸು ಈ ವರೆಗೆ ೯೫ ಸಾಮಾನ್ಯ ಸ್ಥಳಗಳನ್ನು ಪಡೆದಿದೆ. ೬೭ ಮುಸಲ್ಮಾನ ಸ್ಥಳಗಳಲ್ಲಿ ಮುಸ್ಲಿಂಲೀಗು ೨೯ ಸ್ಥಳಗಳನ್ನು ಪಡೆದಿದೆ. ಕಾಂಗ್ರೆಸ್ಸು ಒಂದು ಸ್ಥಳವನ್ನ ಪಡೆದಿದೆ ೧೪ ಸ್ಥಳಗಳಲ್ಲಿ ಪರಾಜಯ ದೊರೆತಿದೆ. ರಾಷ್ಟ್ರೀಯ ಮುಸಲ್ಮಾನರು ೩ ಸ್ಥಳಗಳನ್ನು ಪಡೆದಿದ್ದಾರೆ. ೧೨ ಸ್ಥಳಗಳಲ್ಲಿ ಪರಾಜಯ ಹೊಂದಿದ್ದಾರೆ. ಇನ್ನುಳಿದ ಸ್ಥಳಗಳ ಪರಿಣಾಮ ಇನ್ನೂ ಹೊರಬೀಳುವದಿದೆ.

ಇರಾಣದ ಮೇಲೆ ರಶಿಯದ ದಂಡಯಾತ್ರೆ

ರಶಿಯದ ಸಶಸ್ತ್ರ ಸೈನ್ಯಪಡೆಗಳು ಸೋವಿಯೆಟ ಗಡಿಯಿಂದ ದಕ್ಷಿಣಾಭಿಮುಖವಾಗಿ ತೆಹರಾನ ಮತ್ತು ಇರಾಣದ ಪಶ್ಚಿಮ ಗಡಿಯ ಕಡೆಗೆ ಮುನ್ನುಗ್ಗುತಿವೆಂದು ಅಮೇರಿಕೆಯ ವಿದೇಶ ಖಾತೆಯವರು ಪ್ರಸಿದ್ಧಿಸುತ್ತಾರೆ. ಈ ಸುದ್ದಿ ನಿಜವೋ ಸುಳ್ಳೊ ಎನ್ನುವುದು ಸೋವಿಯೆಟ ಸೈನ್ಯದ ಚಲನವಲನಗಳು [illegible]

ಅಂತರ್ ರಾಷ್ಟ್ರೀಯ

ಚರ್ಚಿಲ್ಲರು ಎಬ್ಬಿಸಿದ ಬಿರುಗಾಳಿ

ಅಮೇರಿಕೆಯಲ್ಲಿ ತಾವು ಕಳೆಯುತ್ತಿರುವ ವಿಶ್ರಾಂತಿ ಪ್ರವಾಸವನ್ನು ಚರ್ಚಿಲ್ಲರು ಅಂತರ್ ರಾಷ್ಟ್ರೀಯ ಸಮುದ್ರದಲ್ಲಿ ಬಿರುಗಾಳಿಯೆಬ್ಬಿಸಲು ಬಳಸಿಕೊಂಡಿದ್ದಾರೆ. ಕಳೆದ ವಾರ ಅವರು ಫುಲ್ಟನದ ವೆಸ್ಟಮಿನಿಸ್ಟರ ಕಾಲೇಜದಲ್ಲಿ ಮಾಡಿದ ಆಂಗ್ಲೋ-ಅಮೇರಿಕನ್ ಸಂಯುಕ್ತರಾಜ್ಯದ ಆವಶ್ಯಕತೆಯನ್ನು ಕುರಿತ ಭಾಷಣ ಮತ್ತು ಮರುದಿನ ಅದೇ ಅಭಿಪ್ರಾಯವನ್ನು ತಿರುಗಿ ಒತ್ತಿ ಹೇಳಿದ ಭಾಷಣ ಜಗತ್ತಿನ ವಾದಿಗಳನ್ನು ಕೆರಳಿಸಿದೆ. ಮುಖ್ಯವಾಗಿ ಅವರು "ಸೋವಿಯಟ್ ಸರಕಾರ ಮತ್ತು ಅಂತರ್‌ರಾಷ್ಟ್ರೀಯ ಕಮ್ಯುನಿಸ್ಟ ಪಕ್ಷ ಮುಂದೇನು ಮಾಡುವದೋ ಯಾರಿಗೂ ಗೊತ್ತಿಲ್ಲ" "ಪಶ್ಚಿಮ ಯುರೋಪದಲ್ಲಿ ಕೈಬೆರಳ್ಳೆಣಿಸುವಷ್ಟಿರುವ ಕಮ್ಯುನಿಸ್ಟರಿಗೆ ಅಧಿಕಾರದ ಗದ್ದುಗೆ ದೊರೆತಿದೆ" "ಕಮ್ಯುನಿಝಂ ಎಂಬುದು ಕ್ರಿಶ್ಚನ್ ನಾಗರಿಕತೆಗೆ ಗಂಡಾಂತರ ಪ್ರಾಯವಾಗಿದೆ" ಎಂಬ ಹೆದರಿಕೆಗಳನ್ನು ಹಾಕಿ ಆಂಗ್ಲೋ-ಅಮೇರಿಕನ್ ರಾಜ್ಯಗಳ ಎರಕ ಹೊಯ್ದು ಬ್ರಿಟನದ ಬೇಯದ ಬೇಳೆ ಬೇಯಿಸಿಕೊಳ್ಳಲೆಳಸಿದ್ದಕ್ಕೆ ಸೋವಿಯಟ್ ಪತ್ರಿಕೆಗಳು ಕೆರಳಿನಿಂತಿವೆ. "ಇದು ಸೋವಿಯಟವಿರುದ್ಧ ಜನಮನದಲ್ಲಿ ವಿಷ ಬೆರಸುವ ಯತ್ನ. ಸೋವಿಯಟ್ ವಿರುದ್ಧ ಯುದ್ಧದ ಬೀಜ ಬಿತ್ತುವದು ಎಂದು 'ಪ್ರವಡಾ' ಬರೆದು ಚರ್ಚಿಲ್ಲರು ಘಟನೆಗಳಿಂದ ಪಾಠ ಕಲಿಯದೆ ತಮ್ಮ ಹಳೆಯ ಸೋವಿಯಟ ವೈರಿ ಧೋರಣೆಯನ್ನೇ ಮುಂದುವರಿಸಿದೆಯೆಂದು ಅವರ ಜಾತಕವನ್ನು ಸ್ಫೋಟ ಮಾಡಿದೆ. ಇತರ ಪತ್ರಿಕೆಗಳೂ ಇದೇ ತರದ ಉಗ್ರ ಲೇಖಗಳನ್ನು ಬರೆದು ಎಚ್ಚರವಿತ್ತಿವೆ. ಸ್ವತಃ ಬ್ರಿಟನದಲ್ಲಿ ಚರ್ಚಿಲ್ಲರ ಭಾಷಣದಿಂದ ಆನಂದದ ಬದಲು ಅಕ್ಷೇಪವೇ ಹೆಚ್ಚಿದೆ. ೨೬ ಕೂಲಿಕಾರ ಪಾರ್ಲಮೆಂಟರಿ ಸದಸ್ಯರು ಚರ್ಚಿಲ್ಲರ ಪ್ರಯತ್ನಗಳು "ಆಂಗ್ಲೋ ಸೋವಿಯೆಟ್ ಅಮೇರಿಕನ್ ಸಂಬಂಧವನ್ನು ಕೆಡಿಸುವಂಥವಿವೆ" ಎಂಬ ನಿಷೇಧಾತ್ಮಕ ಗೊತ್ತುವಳಿಯನ್ನು ಪಾರ್ಲಮೆಂಟಿನಲ್ಲಿ ಮಂಡಿಸುವವರಿದ್ದಾರೆ. ಅಮೇರಿಕೆಯೂ ಚರ್ಚಿಲ್ಲರ ಸೂಚನೆಯ ಅಂತರ್‍ಯವನ್ನು ಗ್ರಹಿಸದೆ ಇಲ್ಲ. ಹಿಂದಿನ ಅಮೇರಿಕನ್ ಉಪಾಧ್ಯಕ್ಷರಾದ ಹೆನ್ರಿ ವಾಲೇಸರು ಅಮೇರಿಕನ್ ಸಿನೇಟದ ಮುಂದೆ ಸಾಕ್ಷ್ಯ ಹೇಳುತ್ತ "ಈಗ ಬ್ರಿಟನು ನಮ್ಮಿಂದ ಬೇಡುತ್ತಿರುವ ಸಾಲ ಚರ್ಚಿಲ್ಲರು ಹೇಳುವ ಆಂಗ್ಲೋ-ಅಮೇರಿಕನ್ ಐಕ್ಯದ ಯೋಜನೆಯ ಮೊದಲ ಹೆಜ್ಜೆಯಾಗಿದ್ದರೆ ಈ ಸಾಲಕ್ಕೆ ನನ್ನ ವಿರೋಧವಿದೆ" ಎಂದರು.

ಹಿಂದೀ ಆಹಾರ ಬೇಡಿಕೆ

ಹಿಂದೀ ಆಹಾರ ಬೇಡಿಕೆಗೆ ಮನ್ನಣೆ ದೊರಕಿಸಲು ವಾಶಿಂಗ್‌ಟನ್ನಿಗೆ ಹೋಗಿರುವ ಹಿಂದೀ—ಬ್ರಿಟಿಶ ಶಿಷ್ಟಮಂಡಲಗಳು ಸಾಧಿಸುವದೆಷ್ಟು ನೋಡಬೇಕಾಗಿದ್ದರೂ ಅಡುವೆದನ್ನಷ್ಟು ಬಲು ಪರಿಣಾಮಕಾರಿಯಾಗಿ ಆಡುತ್ತಿವೆ. ಮುಖ್ಯವಾಗಿ ಸರ್ ರಾಮಸ್ವಾಮಿ ಮುದಲಿಯಾರರು ತಮ್ಮ ಶಬ್ದ ಭಂಡಾರವನ್ನೆಲ್ಲ ಬರಿದು ಮಾಡಿ ಹಿಂದುಸ್ತಾನದ ದಾರುಣ ಪರಿಸ್ಥಿತಿಯನ್ನು ಮನದಟ್ಟುಮಾಡಲು ಹೆಣಗುತಿದ್ದಾರೆ. ಅವರೂ ಬ್ರಿಟಿಶ ಆಹಾರ ಮಂತ್ರಿ ಬೆನ್ ಸ್ಮಿಥರೂ ಹಿಂದೀ ಬೇಡಿಕೆಗೆ ಜರ್ಮನ್ ಮತ್ತು ಜಪಾನಿ ಆಹಾರ ಬೇಡಿಕೆಗಳಿಗಿಂತ ಪ್ರಾಧಾನ್ಯ ಕೊಡಬೇಕೆಂದು ವಾದಿಸಿದರು. ಜನರಲ್ ಮೆಕಾರ್ಥರರು ಜಪಾನದ ರಾಜಕೀಯ ಪರಿಸ್ಥಿತಿಯನ್ನು ಹಿಡಿತದಲ್ಲಿಟ್ಟುಕೊಂಡು ಆಡಳಿತ ನಡೆಸಬೇಕಾದರೆ ೧೨½ ಲಕ್ಷ ಟನ್ ಆಹಾರ ಧಾನ್ಯಬೇಕೆಂದು ಸಂಯುಕ್ತ ಆಹಾರ ಮಂಡಲದ ಮುಂದೆ ಬೇಡಿಕೆ ಮುಂದೊತ್ತಿದ್ದಾರೆ. ಆದರೆ ರಾಮಸ್ವಾಮಿ ಮತ್ತು ಸ್ಮಿಥರ ಒತ್ತಾಯದಿಂದ ಜಪಾನಕ್ಕೆ ಕಳಿಸುವ ಆಹಾರದ ಪ್ರಮಾಣವನ್ನು ಕತ್ತರಿಸಲು ನಿರ್ಣಯವಾಗಿದೆಯೆಂದು ಅಮೇರಿಕೆಯ ಬರಗಾಲ ಸಮಿತಿಯ ಅಧ್ಯಕ್ಷ ಹರ್ಬರ್ಟ ಹೂವರರು ತಿಳಿಸಿದರು. ಹಿಂದುಸ್ತಾನಕ್ಕೆ ಆಹಾರ ವಸ್ತುಗಳನ್ನು ತ್ವರೆಯಾಗಿ ಕಳಿಸಬೇಕೆಂದು ಅವರಿಗೆ ಕೇಳಿಕೊಳ್ಳಲಾಗಿದೆ. ಯುರೋಪ ಏಶಿಯಾಗಳ ಆಹಾರ ಕೊರತೆ ಪ್ರದೇಶಗಳಿಗೆ ಈಗಾಗಲೇ ಕಳಿಸಲು ನಿರ್ಣಯಿಸಿರುವ ೧೧೫ ಲಕ್ಷ ಟನ್ ಆಹಾರ ಧಾನ್ಯಗಳಲ್ಲದೆ ಇನ್ನೂ ೭೦

ಪಾಲಿಗೆ ಸಹಿತ.

ಲಕ್ಷ ಟನ್ ಕಳಿಸಲು ಸಾಧ್ಯವಾಗಬಹುದೆಂದು ಅವರು ಆಶಿಸಿದರು. ಸರ್ ರಾಮಸ್ವಾಮಿಯವರು ಅಮೇರಿಕನ್ನರನ್ನು ಪ್ರಾರ್ಥಿಸಿಕೊಂಡಂತೆ ಹೂವರರೂ ಆದಷ್ಟು ಆಹಾರ ಉಳಿಸಿ ಹಸಿದವರಿಗೆ ಕಳಿಸಬೇಕೆಂದು ವಿನಂತಿ ಮಾಡಿಕೊಂಡಿದ್ದಾರೆ.

ಗ್ರೀಸದಲ್ಲಿ ರಾಜಕೀಯ ಬಿಕ್ಕಟ್ಟು

ಗ್ರೀಸದಲ್ಲಿ ಇದೇ ೩೧ ಕ್ಕೆ ಆಗಬೇಕೆಂದಿರುವ ರಾಷ್ಟ್ರೀಯ ಚುನಾವಣೆಗಳ ಮೇಲ್ವಿಚಾರಣೆಗಾಗಿ ೨೪೦ ಸಂದರ್ಶಕರನ್ನು ಆಂಗ್ಲೋ-ಅಮೇರಿಕನ್-ಫ್ರೆಂಚ ಮಿತ್ರರು ತರಬೇತುಗೊಳಿಸಿ ತಮ್ಮ ಮನಸಿನ "ಪ್ರಜಾತಂತ್ರಾತ್ಮಕ" ಚುನಾವಣೆಯಾಗಗೊಡಬೇಕೆಂದು ಯತ್ನ ನಡೆಸಿರುವಾಗಲೇ ಗ್ರೀಕ ಮಂತ್ರಿಮಂಡಲದಲ್ಲಿ ಚುನಾವಣೆಯ ವಿರೋಧಿಗಳು ಬಿಕ್ಕಟ್ಟನ್ನುಂಟುಮಾಡಲು ಸಮರ್ಥರಾಗಿದ್ದಾರೆ. ನಾಲ್ವರು "ಪ್ರಗತಿಪರ" ಮಂತ್ರಿಗಳು, ಉಪಪ್ರಧಾನ ಮಂತ್ರಿ ಜಾರ್ಜ ಕಫಾಂದ್ರಿಯಾಸರ ಮುಂದಾಳುತನದಲ್ಲಿ, ರಾಜೀನಾಮೆ ಕೊಟ್ಟು ಹೊರಬಿದ್ದಿದ್ದಾರೆ. ಚುನಾವಣೆಗಳು ನ್ಯಾಯವಾಗಿ ಆಗಬಹುದಾದ ಪರಿಸ್ಥಿತಿ ಇನ್ನೂ ಉಂಟಾಗಿಲ್ಲವಾಗಿ ಅನವನ್ನು ಮುಂದೆ ಹಾಕಬೇಕೆಂಬ ಅವರ ಬೇಡಿಕೆಯನ್ನು ಮುಖ್ಯ ಮಂತ್ರಿ ಸೊಫೋಲಿಸರು ತಳ್ಳಿಹಾಕಿದ್ದೇ ಇದಕ್ಕೆ ಕಾರಣ. ಈ ಮಂತ್ರಿಗಳೂ ಅವರ ಬೆಂಬಲಿಗರೂ "ಈಮ" ಮೊದಲಾದ ಸಾಮ್ಯವಾದಿ ಪಕ್ಷಗಳೊಡನೆ ಬೆರೆತುಕೊಂಡು ಚುನಾವಣೆಯನ್ನು ಬಹಿಷ್ಕರಿಸಲು ನಿರ್ಧರಿಸಿದ್ದಾರೆ.

ಪಾಲಿಸ್ತಾನ ವಿಚಾರಣೆ

ಪಾಲಿಸ್ತಾನದ ಅರಬ-ಯಹೂದ್ಯ ಪ್ರಶ್ನೆಯನ್ನು ವಿಚಾರಿಸಿ ಒಂದು ಉಪಾಯವನ್ನು ಸೂಚಿಸಲು ನೇಮಕ ಹೊಂದಿದ ಆಂಗ್ಲೋ-ಅಮೇರಿಕನ್ ವಿಚಾರಣಾ ಸಮಿತಿಯವರ ಮುಂದೆ ಯಹೂದ್ಯ ಮತ್ತು ಅರಬ ದೃಷ್ಟಿಕೋನಗಳನ್ನು ರಭಸದಿಂದ ಪ್ರತಿಪಾದಿಸಲಾಗುತ್ತಿದೆ. ಯಹೂದ್ಯ ಪಕ್ಷದವರು ಯುರೋಪಿನಲ್ಲಿ ಹಿಟ್ಲರನು ನಾಶಮಾಡಿದ ೬೦ ಲಕ್ಷ ಯಹೂದ್ಯರ ಕರುಣಾಜನಕ ಕಥೆಯನ್ನು ಬಣ್ಣಿಸಿ ಪಾಲಿಸ್ತಾನವನ್ನು ಅರಬ ರಾಷ್ಟ್ರವಾಗಿ ಮಾರ್ಪಡಿಸಲು ರಾಷ್ಟ್ರಸಂಘದ ನಿರ್ದೇಶದಿಂದ ಬದ್ಧರಾದ ಬ್ರಿಟಿಶರು ಹಾಗೆ ಮಾಡಿಯೇ ತೀರಬೇಕೆಂದೂ ಯಹೂದ್ಯರ ಆಗಮನದ ಆರಂಭದಿಂದಲೆ ಪಾಲಿಸ್ತಾನದ ಆರ್ಥಿಕ ಅಭಿವೃದ್ಧಿ ಪ್ರಾರಂಭವಾಯಿತೆಂದೂ ಪ್ರತಿಪಾದಿಸಲಾಗುತ್ತಿದ್ದರೆ, ಅದರ ವಿರುದ್ಧ ಅರಬರ ಪರವಾಗಿ ಯಹೂದ್ಯರ ಒತ್ತಡದಿಂದಾಗಿ ದೇಶದ ಮೇಲೆ ಅವರ ಹಿಡಿತ ಬೆಳೆಯುತ್ತಿರುವದನ್ನು ಬೊಟ್ಟುಮಾಡಿ ಯಹೂದ್ಯರ ಚಂಚುಪ್ರವೇಶವನ್ನು ಒಡನೆ ತಡೆಯಬೇಕೆಂದು ಬೇಡಲಾಗಿದೆ. ೧೦ ವರ್ಷಗಳ ಹಿಂದೆ ೧೯೩೬ ರಲ್ಲಿ ಬ್ರಿಟಿಶ ವಿರೋಧಿ ದಂಗೆಯನ್ನೆಬ್ಬಿಸಿ ಗಡಿಪಾರು ಮಾಡಲ್ಪಟ್ಟಿದ್ದ ಪ್ರಸಿದ್ಧ ಪಾಲಿಸ್ತಾನ ಅರಬ ಮುಂದಾಳು ಜಮಾಲ ಹುಸೇನರು ಇದೀಗ ಹೊಸದಾಗಿ ತಮ್ಮ ರಾಜ್ಯಕ್ಕೆ ಮರಳಿದವರು ವಿಚಾರಣಾ ಸಮಿತಿಯ ಮುಂದೆ ಸಾಕ್ಷ್ಯ ಹೇಳುತ್ತ ಅರಬ ಬೇಡಿಕೆಯನ್ನು ನಾಲ್ಕು ಸೂತ್ರಗಳ ರೂಪವಾಗಿ ಮುಂದಿಟ್ಟರು: ೧) ಸ್ವದೇಶದಲ್ಲಿ ಅರಬರಿಗೆ ಪೂರ್ಣ ಸ್ವಾತಂತ್ರ್ಯದ ಹಕ್ಕು, ೨) ಯಹೂದ್ಯರ ರಾಜಕೀಯ ಆಕಾಂಕ್ಷೆಗಳ ತ್ಯಾಗ ೩) ಪಾಲಿಸ್ತಾನದ ಆದಿಷ್ಟ ಆಡಳಿತೆಯ ಕೊನೆ, ೪) ಯಹೂದ್ಯರ ಪ್ರವೇಶದನ್ನು ಒಡನೆ ತಡೆಹಿಡಿಯುವದು. ಜಮಾಲ ಹುಸೇನರು ಕೊಟ್ಟ ಅಂಕೆಗಳು ಮನಮುಟ್ಟುವಂತಿದ್ದವು. ಪಾಲಿಸ್ತಾನ ಆದಿಷ್ಟ ಆಡಳಿತೆ ಆರಂಭವಾದಾಗ ೧೦೦ ಕ್ಕೆ ೭ ರಷ್ಟಿದ್ದ ಯಹೂದ್ಯರ ಸಂಖ್ಯೆ ಈಗ ೩೧ ಆಗಿದೆ. ಯಹೂದ್ಯರು ಪಾಲಿಸ್ತಾನದ ವ್ಯವಸಾಯಾರ್ಹ ಭೂಮಿಯಲ್ಲಿ ಮೂರರಲ್ಲೊಂದಂಶವನ್ನು ಈಗಾಗಲೆ ಕೈವಶ ಮಾಡಿಕೊಂಡಿದ್ದಾರೆ—ಇನ್ನು ಸಾಕು! ಎಂದು ಬ್ರಿಟಿಶರ ಪಾಲಿಸ್ತಾನಆಡಳಿತೆ ಶುದ್ಧ ಸರ್ವಾಧಿಕಾರದ್ದೆಂದು ಅವರು ನಿರ್ದಾಕ್ಷಿಣ್ಯವಾಗಿ ಹೇಳಿದರು.

ಇರಾಣಿ ಮಜ್ಲಿಸ್ ವಿಸರ್ಜನೆ

ಇರಾಣದ ಮಜ್ಲಿಸ್ (ಪಾರ್ಲಮೆಂಟ) ಗೌಪ್ಯ ಅಧಿವೇಶನವೊಂದನ್ನು ಕೂಡಿಸಿ ಮುಖ್ಯ ಮಂತ್ರಿ ಸುಲ್ತಾನೆ ತನ್ನ ಮಾಸ್ಕೋ ಪ್ರವಾಸ ಮತ್ತು ಸೋವಿಯಟ್ ಸರಕಾರದೊಡನೆ ಮಾತುಕತೆ ಇವುಗಳ ಬಗೆಗೆ ವರದಿಯನ್ನೊಪ್ಪಿಸಿದ. ಆ ಮೇಲೆ ಸದ್ಯದ ಮಜ್ಲಿಸನ್ನು ವಿಸರ್ಜಿಸುವದಾಯಿತು. ಬೇಗನೆ ಹೊಸ ಚುನಾವಣೆಗಳಾಗಬಹುದು. ವಿದೇಶಿ ಪಡೆಗಳು ಇರಾಣ ಭೂಮಿಯ ಮೇಲಿರುವಷ್ಟು ಕಾಲ ಚುನಾವಣೆ ನಡೆಸಬಾರದೆಂಬ ಮಸೂದೆಯೊಂದು ಮಜ್ಲಿಸದ ಮುಂದಿದ್ದುದನ್ನು ಕಿತ್ತುಹಾಕಲಾಗಿದೆಯೆಂದು ಸೋವಿಯೆಟ್ ಬೆಂಬಲಿಗ ತುದೇ ಪಕ್ಷದ ಪ್ರತಿನಿಧಿಯೊಬ್ಬನು ತನ್ನ ಪಕ್ಷದ ಬೆಂಬಲಿಗರಿಗೆ ತಿಳಿಸಿದನೆಂದು ವರದಿಯಾಗಿರುವದರಿಂದ ಸದ್ಯದ ಮಜ್ಲಿಸದ ವಿಸರ್ಜನೆ ಸೋವಿಯಟ್ ಒತ್ತಾಯದಿಂದಲೇ ಆಯಿತೆಂಬುದನ್ನು ಊಹಿಸಬಹುದು. ಇದು ಹೊರತು ಸುಲ್ತಾನೆಯ ಮಾಸ್ಕೋ ಮಾತುಕತೆಗಳ ಸ್ವರೂಪವೇನು, ಅದರ ಫಲಿತಾಂಶವೇನು ಎಂಬುದರ ನೆರಳು ಕೂಡ ಕಾಣಸಿಕ್ಕಿಲ್ಲ. ಮಾತುಕತೆಗಳು ವಿಫಲವಾದವೆಂದಿಷ್ಟೆ ತರ್ಕಿಸಲಾಗಿದೆ. ಜತೆಗೆ ಸ್ಟಾಲಿನ್ನರು ಅಝುರಬೈಜಾನದ ಸ್ವಾಯತ್ತತೆಗೆ ಮನ್ನಣೆ, ರಶಿಯಾಕ್ಕೆ ಎಣ್ಣೆ ಸವಲತ್ತುಗಳು ಇವನ್ನು ಬೇಡಿದರೆಂದೂ ಭಾವಿಸಲಾಗಿದೆ.

ಸೋವಿಯೆಟ್ಟಿಗೆ ಎಚ್ಚರಿಕೆ

ಇರಾಣದಿಂದ ಸೈನ್ಯವನ್ನು ಒಪ್ಪಂದದಂತೆ ಮಾರ್ಚ ೨ ಕ್ಕೆ ಪೂರ್ಣ ಹಿಂತೆಗೆದುಕೊಳ್ಳದ ಸೋವಿಯೆಟ್ ಕೃತಿಯಿಂದ ಇರಾಣಿಗಾದ ಚಿಂತೆಗಿಂತ ಆಂಗ್ಲೋ-ಅಮೇರಿಕನ್ನರಿಗೆ ಆದುದು ಹೆಚ್ಚೆಂದು ತೋರುತ್ತದೆ. ಸೋವಿಯೆಟ್ ಸೈನ್ಯ "ಪರಿಸ್ಥಿತಿ ತಿಳಿಯಾಗುವ ವರೆಗೆ ವಾಯವ್ಯ ಇರಾಣದಲ್ಲಿ ಉಳಿಯುವದೆಂದು" ಮಾರ್ಚ ೨ ಕ್ಕೆ ಸೋವಿಯೆಟ್ ಸರಕಾರ ಹೇಳಿ ಒಂದು ವಾರದೊಳಗೆ ಇಂಗ್ಲಂಡ ಮತ್ತು ಅಮೇರಿಕೆ ಎರಡೂ ಬೇರೆ ಬೇರೆಯಾಗಿ ಸೋವಿಯೆಟ್ ಸರಕಾರಕ್ಕೆ ನಿಷ್ಠುರವಾದ ಉಪದೇಶ ಪೂರ್ವಕ ರಾಯಸಗಳನ್ನು ಕಳಿಸಿದವು. "ಶಾಂತಿಯನ್ನು ಕಾಪಾಡಿಕೊಳ್ಳು"ವದರಲ್ಲಿ ಪ್ರಬಲ ರಾಷ್ಟ್ರಗಳ ಮೇಲಿರುವ ಹೊಣೆಯನ್ನು ಮರವೆಗುಳಿ ಸೋವಿಯೆಟ್ ಸರಕಾರಕ್ಕೆ ನೆನಪು ಮಾಡಿಕೊಟ್ಟು ಆ ಹೊಣೆಯನ್ನು ಪೂರೈಸುವಲ್ಲಿ ಸೋವಿಯೆಟ್ ಸರಕಾರ "ತನ್ನ ಪಾಲಿನ ಕರ್ತವ್ಯ ಮಾಡಬೇಕು" ಎಂದು ಕೇಳಿಕೊಳ್ಳಲಾಗಿದೆ. ಇರಾಣದಿಂದ ಸೋವಿಯೆಟ್ ಸೈನ್ಯಗಳನ್ನು ಎಂದು ಹಿಂದೆತೆಗೆದುಕೊಳ್ಳಲಾಗುವದೆಂಬ ವಿವರವನ್ನೂ ಆ ರಾಯಸಗಳು ಕೇಳಿವೆ. ಆದರೆ ಸೋವಿಯೆಟ್ ಸರಕಾರ ತನ್ನ ಎಂದಿನ ಮೌನವ್ರತವನ್ನೇ ಧರಿಸಿದೆ. ಈಶಾನ್ಯ ಇರಾಣದ ಇನ್ನಷ್ಟು ಭಾಗಗಳಿಂದ ಅದು ಸೈನ್ಯಗಳನ್ನು ಹಿಂತೆಗದುಕೊಂಡಿರುವುದು ನಿಜ. ಆದರೆ ಅದರ ಬದಲಿಗೆ ಸ್ವಾಯತ್ತ ಅಝುರ ಬೈಜಾನದ "ಪ್ರಧಾನ ಮಂತ್ರಿ" ಪಿಶೆವಾರಿ ಹಿಂದಿನವಾರ ತಾನು ಕೊಟ್ಟ ಎಚ್ಚರಿಕೆಯನ್ನು ಕಾರ್ಯಕಾರಿ ಮಾಡುವ ಪೂರ್ವಭಾವಿಯೋ ಎಂಬಂತೆ ತನ್ನ ಕೈಕಾಲುಗಳನ್ನು ಚಾಚಿ ಈಶಾನ್ಯ ಇರಾಣದ ಇನ್ನಷ್ಟು ಭಾಗಗಳನ್ನು ಆಕ್ರಮಿಸಿಕೊಂಡಿದ್ದಾನೆ.

ಆಶೆ ಆಶಂಕೆ

ಇಷ್ಟರಲ್ಲೇ ಆರಂಭವಾಗಲಿರುವ ಡಚ್-ಇಂಡೋನೇಶಿಯನ್ ಮಾತುಕತೆಗಳು ಆಶೆ ಆಶಂಕೆಗಳ ನಡುವೆ ತೊಳಲಾಡುತ್ತಿವೆ. ಕಳೆದ ವಾರಾಂತ್ಯದಲ್ಲಿ ಏನೊಂದು ಸುಳಿವುಗೊಡದೆ ೧೦೦೦೦ ಡಚ್ ಸೈನಿಕರನ್ನು ಬ್ರಿಟಿಶ ಹಡಗುಗಳಲ್ಲಿ ಬ್ರಿಟಿಶ ವೇಷದಲ್ಲಿ ಜಾವಾ ತೀರದಲ್ಲಿ ತಂದು ಇಳಿಸಲಾಯಿತು. ಈ ಬಗ್ಗೆ ಮುಖ್ಯ ಮಂತ್ರಿ ಸುಲ್ತಾನ ಶರಿಯಾರರ ಬ್ರಿಟಿಶ ಸೇನಾಪತಿಗೆ ಕಳಿಸಿದ ನಿಷೇಧ ಪತ್ರದಲ್ಲಿ ಹೇಳಿದಂತೆ ಡಚ್ಚರ ಈ ಕೃತಿ ನಿಶ್ಚಯವಾಗಿ ದುರುದ್ದೇಶದಿಂದ ಕೂಡಿದಂತೆ ಕಾಣುತ್ತದೆ. ಹೀಗೆ ಸುಸಜ್ಜಿತ ಡಚ್ ಸೇನೆಗಳನ್ನು ತಂದಿಳಿಸುತ್ತ, ಸಂಗಡಲೆ ಹಿಂದೀ ಮತ್ತು ಬ್ರಿಟಿಶ ಸೈನ್ಯಗಳನ್ನು ಬೇಗನೆ ಹಿಂದೆ ತೆಗೆದುಕೊಳ್ಳಲಾಗುವದೆಂದು ಬ್ರಿಟಿಶರು ಸಾರಿದ್ದು ಇಂಡೋನೇಶಿಯನ್‌ರಿಗೆ ಆಶಾದಾಯಕವಾಗುವದಕ್ಕಿಂತ ಶಂಕಾದಾಯಕವಾಗಿದೆ. ಆದುದರಿಂದಲೆ ಈ ಡಚ್ ಆಚರಣೆಯಿಂದ ಮಾತುಕತೆಗಳ ಮೇಲೆ ಕೂಡ ದುಷ್ಪರಿಣಾಮವಾಗಬಹುದು; ಇದು ಇಂಡೋನೇಶಿಯನ್ ಸ್ವಯಂಪ್ರಭುತ್ವಕ್ಕೆ ಅವಮಾನಪ್ರಾಯ ಎಂದು ಶಾರೀಯಾರರು ಸಾರಿದರು. ಆದರೂ ಮಾತುಕತೆಗಳು ಯಶಸ್ವಿಯಾಗುವ ವಾತಾವರಣ ಕಂಡುಬರುತ್ತಿದೆಯೆಂದು ಅವನು ಆಶಿಸಿದರು. ಸುಲ್ತಾನ ಶಾರಿಯಾರರು ಹೊಸ ಮಂತ್ರಿಮಂಡಲದ ರಚನೆಯನ್ನು ಪೂರೈಸಿದ್ದು ಅದರಲ್ಲಿ ಹಳೆಯವರಲ್ಲಿ ೧೧ ಜನರಿದ್ದಾರೆ. ಶಾರಿಯಾರರು ಮುಖ್ಯ ಮಂತ್ರಿಯಲ್ಲದೆ ವಿದೇಶ ಮಂತ್ರಿಯೂ ಆಗುವರು. ಕಮ್ಯುನಿಸ್ಟರನ್ನು ಸೇರಿಸಿಕೊಳ್ಳಲಾಗಿಲ್ಲ.

ಅನ್ನಂಗೆ ಸ್ವರಾಜ್ಯ

ಇಂಡೋಚೀನದ ಉತ್ತರ ಭಾಗದ ಅನ್ನಂ ಜನರು ಫ್ರೆಂಚರಿಗೆ ತೋರಿಸಿದ ಪ್ರತಿಭಟನೆ, ಅದರ ಅರಸ ಬಾ ಡಾಯಿ ಅವನು ರಾಷ್ಟ್ರೀಯತೆಯಿಂದ ಮನತುಂಬಿದವನಾಗಿ ಮಾಡಿದ ಪದತ್ಯಾಗ—ಸ್ವಾರ್ಥತ್ಯಾಗಗಳು ಇದೀಗ ತಕ್ಕಷ್ಟು ಫಲಕೊಟ್ಟವೆಂದು ಒಪ್ಪಬೇಕು. ಅನ್ನಂ ರಾಷ್ಟ್ರೀಯ ಸಂಸ್ಥೆಯಾದ ವೆಯಿಟ್‌ಮಿನ್ ಮತ್ತು ಫ್ರೆಂಚ ಸರಕಾರದ ನಡುವೆ ಮಾತುಕತೆಯಾಗಿ—ಫ್ರೆಂಚ್ ರಾಷ್ಟ್ರಕೂಟದಲ್ಲಿ ಸೇರಿಯೆ ಇರಲೊಲ್ಲದೇಕೆ—ಅನ್ನಂ ದೇಶ ಸ್ವತಂತ್ರ ಪ್ರಜಾರಾಜ್ಯವೆಂದು ಫ್ರೆಂಚರು ಒಪ್ಪಿ ಒಂದು ಒಪ್ಪಂದ ಮಾಡಿಕೊಂಡಿದ್ದಾರೆ. ಸ್ವಾಯತ್ತ ಅನ್ನಂ ದೇಶದ ಆಡಳಿತೆ ಸ್ವಾಭಾವಿಕವಾಗಿ ವೆಯಿಟ್‌ಮಿನ್ ಸಂಸ್ಥೆಯ ಕೈಗೇ ಹೋಗಿದ್ದು ಅದರ ಪ್ರಮುಖ ಹೋ ಚಿ ಮಿನ್ ಇವನನ್ನು ಮಂತ್ರಿಮಂಡಲದ ಪ್ರಮುಖನನ್ನಾಗಿ ಅನ್ನಂ ರಾಷ್ಟ್ರೀಯ ಪ್ರತಿನಿಧಿ ಸಭೆ ಹನೋಯಿಯಲ್ಲಿ ಆರಿಸಿದೆ. ೧೮ ಮಂತ್ರಿಗಳುಳ್ಳ ಮಂತ್ರಿಮಂಡಲವೊಂದು ರಚಿಸಲ್ಪಟ್ಟಿದೆ. ರಾಜ್ಯತ್ಯಾಗ ಮಾಡಿ ಕೀರ್ತಿಶಾಲಿಯಾದ ಅನ್ನಂಚಕ್ರವರ್ತಿ ಬಾ ಡಾಯಿಯನ್ನು ಸರಕಾರದ ಕೌನ್ಸಿಲರನ್ನಾಗಿ ಆರಿಸಲಾಗಿದೆ.

ರಶಿಯನ್ನರು ಹೊರಟರು

ಕೊನೆಗೊಮ್ಮೆ "ಮಂಚೂರಿಯಾದಿಂದ ಚಲೇಜಾವ" ಚಳವಳಿಯನ್ನು ಮಾನ್ಯ ಮಾಡಿ ರಶಿಯನ್ನರು ಹೊರಡುವ ಎತ್ತುಗಡೆ ನಡೆಸಿದಂತಿವೆ. ಮುರ್ಡೆನ್ ನಗರವನ್ನು ಅವರು ಈಗಾಗಲೆ ಪೂರ್ಣ ತೆರವು ಮಾಡಿದ್ದಲ್ಲದೆ ಮಂಚೂರಿಯಾದ ಇತರ ಭಾಗಗಳಿಂದಲೂ ಅವರು ಗುಡಿಚಾಪೆ ಕಟ್ಟುತ್ತಿದ್ದಾರೆ. ಜನೆವರಿಯಲ್ಲಿಯೇ ರಶಿಯನ್ನರು ಮಂಚೂರಿಯಾ ತೆರವು ಮಾಡುವವರಿದ್ದರೆಂದೂ ಆದರೆ ಆ ಭಾಗಗಳ ಆಕ್ರಮಣಕ್ಕೆ ಇನ್ನೂ ಚೀನಿ ಸರಕಾರದ ವ್ಯವಸ್ಥೆ ಪೂರ್ಣವಾಗಿರದಿದ್ದುದರಿಂದ ಅದೇ ರಶಿಯನ್ನರನ್ನು ಕೆಲದಿನ ಉಳಿದುಕೊಳ್ಳಲು ಕೇಳಿತ್ತೆಂತಲೂ ಚೀನಿ ಸರಕಾರ ಒಪ್ಪಿಕೊಂಡಿದೆ. ಆದರೆ ಫೆಬ್ರುವರಿಯಿಂದೀಚೆಗೆ ರಶಿಯನ್ನರು "ತಾಂತ್ರಿಕ ಅಡಚಣೆ"ಗಳನ್ನು ಮುಂದೊಡ್ಡುತ್ತ ಹೊರಟು ಹೋಗುವದನ್ನು ತಡಮಾಡಿದರಂತೆ. ಈಗಲೂ ಆ ತಾಂತ್ರಿಕ ಅಡಚಣೆಗಳು ಪೂರ್ಣ ಹಿಂಗಿಲ್ಲವಂತೆ.

ಸನ್-ಯತ್-ಸೇನ್ ದಿನ

ಚೀನಿ ಪ್ರಜಾರಾಜ್ಯದ ಪಿತಾಮಹನೆನಿಸಿದ ಸನ್-ಯತ್-ಸೇನರ ೨೧ನೇ ಪುಣ್ಯ ದಿನಾಚರಣೆ ತಾ. ೧೨ಕ್ಕೆ ಚುಂಕಿಂಗದಲ್ಲಿ ಸಾಂಗವಾಯಿತು. ಅದರಲ್ಲಿ ಎರಡು ಮಹತ್ವದ ಘಟನೆಗಳಾದವು. ಇಷ್ಟರ ವರೆಗಿನ ಪ್ರದರ್ಶನಗಳಲ್ಲೆಲ್ಲ ದೊಡ್ಡದಾದ, ವಿದ್ಯಾರ್ಥಿಗಳ ರಶಿಯಾವಿರೋಧಿ ಪ್ರದರ್ಶನವೊಂದು; ಚಿಯಾಂಗ ಕೈಶೇಕರು ತಮ್ಮ ಭಾಷಣದಲ್ಲಿ ಚೀನದಲ್ಲಿ ಅಂತರ್‍ಯುದ್ಧಕ್ಕೆ ಅವಕಾಶವೀಯಬಾರದೆಂದು ಸಾರಿದ್ದು ಇನ್ನೊಂದು.

ಜಪಾನದ ಹೊಸ ಘಟನೆ

ಮಾರ್ಚ ೩೧ಕ್ಕೆ ಜಪಾನದಲ್ಲಿ ಹೊಸ ಚುನಾವಣೆಗಳಾಗಬೇಕಾಗಿರುವಾಗ ಚಕ್ರವರ್ತಿ ಹಿರೋಹಿಟೊ

(೧೧ ನೇ ಪುಟ ನೋಡಿರಿ)

ಪ್ರಜಾತಂತ್ರಕ್ಕೆ ಸಂಧಿಕಾಲವೊದಗಿ ಬಂದಿದೆ

[ಮೊದಲನೆ ಪುಟದಿಂದ ಮುಂವರಿದುದು]

ಪ್ರಜಾತಂತ್ರ ಸಮಾಜವನ್ನು ಒಡೆದು ವ್ಯಕ್ತಿಗಳಾಗಿಯೂ ಕುಟುಂಬಗಳಾಗಿಯೂ ವಿಂಗಡಿಸಲ್ಪಡುತ್ತಿದೆ. ಆದರೆ ಹೀಗೆ ವಿಂಗಡವಾಗಿ ಅದು ಆತ್ಮರಕ್ಷಣೆ ಮಾಡಿಕೊಳ್ಳಲಾರದು. ಕೂಲಿಕಾರ ಸಂಘ, ಕಾರಖಾನೆದಾರ ಸಂಘ ಮೊದಲಾದ ಗುಂಪುಗಳು ತಮ್ಮ ಸ್ವಾರ್ಥಸಾಧನೆಗಾಗಿಯೇ ಹೆಣಗುತ್ತಿವೆ.

ತನ್ನ ಸರಕಾರದ ಮುಖಾಂತರವಲ್ಲದೆ ಪ್ರಜಾತಂತ್ರ ಕ್ರಿಯಾಸಕ್ತವಾಗುವದು ಅಪೂರ್ವ. ಆ ಸರಕಾರ ಬೇರೆ ಬೇರೆ ಸಮಬಲ ಗುಂಪುಗಳ ಅತ್ತೊಂದಿತ್ತೊಂದೆಳೆದಾಟದಿಂದ ನಿರ್ಧಾರರಹಿತ, ವಿಲಂಬಶೀಲವಾಗಿರುತ್ತದೆ. [?]

ರಾಜಕಾರಣಕ್ಕೂ ವಿಜ್ಞಾನಕ್ಕೂ ಇರುವ ಮೇಳಗೇಡಿತನದಿರಿಂದ ಸ್ವತಂತ್ರ ಸಮಾಜದ ಉಭಯ ಸಂಕಟ ಸ್ಫುಟವಾಗಿ ಸಿದ್ಧವಾಗುತ್ತದೆ. ಅತ್ಯಂತ ತೀಕ್ಷ್ಣಬುದ್ಧಿಗಳು ಸೇರಿ ಪರಮಾಣು ಬಾಂಬನ್ನು ರೂಪಿಸಿದವು. ಆದರೆ ಶಾಂತಿಕಾಲದಲ್ಲಿ ಈ ಬಾಂಬಿನ ಗತಿಯ ನಿರ್ಣಯ ಆ ಅತ್ಯಂತ ತೀಕ್ಷ್ಣಬುದ್ಧಿಯ ಅಭಿಪ್ರಾಯದಂತಾಗದೆ, ಅನೇಕ ಹಿತಸಂಬಂಧ, ದುರಾಶೆ, ಭಯ, ಒತ್ತಾಯಗಳ ಒಟ್ಟು ಪರಿಣಾಮವಾಗಿ ಆಗುತ್ತದೆ. ವಿಜ್ಞಾನವಾದರೆ ಎಂದೋ ಬಡತನ, ಸಾಮ್ರಾಜ್ಯ, ಹಿಂದುಳಿದ ಪ್ರದೇಶಗಳೇ ಮೊದಲಾದವನ್ನು ಇಲ್ಲವಂತಾಗಿಸುತ್ತಿತ್ತು. ಆದರೆ ರಾಜಕಾರಣ ಈ ಕಾಲಬಾಹಿರ ಅವಶೇಷಗಳನ್ನು ಶಾಶ್ವತಗೊಳಿಸಬೇಕೆನ್ನುತ್ತದೆ. ಸಮಾಜಕ್ಕೆ ತಗಲಿದ ಕರುಳುರೋಗವನ್ನು ಕತ್ತರಿಸಿ ಹಾಕಲು ರಾಜಕಾರಣ ಹೆದರುತ್ತದೆ. ಚಪಲ ಸಮರ್ಥ ಸರಕಾರಗಳೆಂದರೆ ಪ್ರಜಾತಂತ್ರಕ್ಕೆ ನಡುಕ – ಅದು ಸ್ವಾತಂತ್ರ್ಯಕ್ಕೆ ಗಂಡಾಂತರ ಒದಗಿಸಿದರೆ? ಎಂದು.

ಜಗತ್ತು ದೊಡ್ಡ, ಅವಸರದ ಸಮಸ್ಯೆಗಳಿಂದ ತುಂಬಿದೆ. ಓಟದ ಹೆಚ್ಚಳದಿಂದ ಜಗತ್ತು ಚಿಕ್ಕದಾಗಿದೆ. ಯುದ್ಧದಿಂದ ಪ್ರಬಲ ರಾಷ್ಟ್ರಗಳ ಸಂಖ್ಯೆ ಇಳಿದಿದೆ. ಜಗತ್ತಿನ ಯಾವದೇ ಮೂಲೆಯಲ್ಲಿ ಬಿಕ್ಕಟ್ಟೆಂದರೆ ಅನೇಕ ದೇಶಗಳಿಗೆ ಅವುಗಳಿಂದ ಆಘಾತವಾಗುವದು. ಅಂತರ್‌ರಾಷ್ಟ್ರೀಯ ರಾಯಭಾರ ಬರಿ ವಿನಯದ ಆಟವಾಗಿರದೆ ರಾಷ್ಟ್ರಗಳ ಹಣೆಬರಹವನ್ನು ಬರೆಯಬಲ್ಲದು. ವಿಶ್ರಾಂತಿ ವ್ಯರ್ಥ ಆಶಾವಾದ, ವಿಲಂಬ ನೀತಿಗಳು ಮೂರನೇ ಮಹಾಯುದ್ಧದಲ್ಲಿ ಪರಿಣಮಿಸುವದು ನಿಶ್ಚಯ. ಆಂತರಿಕ ಸಮಸ್ಯೆಗಳೂ ಬೆಳೆಯಹತ್ತಿವೆ. ಸ್ತ್ರೀಪುರುಷರು ಉತ್ತಮತರ ಜೀವನ ಬೇಕೆನ್ನುತಿದ್ದಾರೆ. ಉದ್ಯೋಗವೆಂಬುದು ಪ್ರತಿಯೊಬ್ಬನ ಜನ್ಮಸಿದ್ಧ ಹಕ್ಕೆಂಬ ಭಾವನೆ ರೂಢವಾಗತೊಡಗಿದೆ. ಯುದ್ಧ ಕಾಲದಲ್ಲಿ ಪ್ರಜಾತಂತ್ರಗಳಲ್ಲಿ ಎಲ್ಲರಿಗೂ ಉದ್ಯೋಗ ದೊರೆತಿತ್ತು. ಏಕೆಂದರೆ ಅವದಕ್ಕೆಲ್ಲ ಗಿರಾಕಿ—ಕೊಟ್ಟದ್ದನ್ನು ತೆಗೆದುಕೊಳ್ಳಲೇಬೇಕಾದ ಹಿಟ್ಲರ ಹಿರೊಹಿಟೋರೆಂಬ ಗಿರಾಕಿ—ಇತ್ತು. ಆದರಿಂದ ಶಾಂತಿಕಾಲದ ಉದ್ದೇಶಗಳಲ್ಲಿಯೂ ಸಾರ್ವತ್ರಿಕ ಉದ್ಯೋಗವನ್ನು ನಾಗರಿಕರು ಬೇಡುತ್ತಿದ್ದಾರೆ ವೈಯಕ್ತಿಕ ಪರಿಶ್ರಮದಿಂದ ಸಾಕಷ್ಟು ಕೆಲಸಗಳು ಹುಟ್ಟದಿದ್ದರೆ ಸರಕಾರಗಳು ಕೈಹಾಕಬೇಕೆಂಬ ಅಭಿಪ್ರಾಯ ಹೆಚ್ಚಿದೆ. ವೈಯಕ್ತಿಕ ವ್ಯವಹಾರಕ್ಕಿದ್ದ ಪವಿತ್ರ ಸ್ಥಾನ ಉಳಿದಿಲ್ಲ. ತನ್ನ ಕಾರಖಾನೆಯನ್ನು ನಡೆಸುವ ರೀತಿಯಿಂದ (ಕಡಿಮೆ ಕೂಲಿ ಕೊಡುವದು, ಹೆಚ್ಚು ಬೆಲೆ ಬೇಡುವದು ಇತ್ಯಾದಿ) ಸಮಾಜಕ್ಕೆ ಹಾನಿ ಮಾಡಲು ಖಾಸಗಿ ಒಡೆಯನಿಗೆ ಅಧಿಕಾರವಿಲ್ಲದಂತಾಗಿದೆ. ಹಳೆಯ ಆಸ್ತಿಯ ಹಕ್ಕಿನ ಸ್ಥಾನದಲ್ಲಿ ಹೊಸ ಮಾನವ ಹಕ್ಕಿನ ಕಲ್ಪನೆ ಬಂದು ಕುಳಿತಿದೆ.

ಈ ಹೊಸ ಕಲ್ಪನೆಯಿಂದ ಹೊಸ ಗಂಡಾಂತರಗಳು ಉದ್ಭವಿಸುತ್ತವೆ. ಸಮಾಜದಪರವಾಗಿ ಸರ್ಕಾರ ಹೆಚ್ಚು ಕೆಲಸ ಮಾಡತೊಡಗಿದರೆ ಅದರ ಅಧಿಕಾರ ಹೆಚ್ಚಾಗುತ್ತದೆ. ಆಗ ಅದರ ಮೇಲೆ ಚನ್ನಾಗಿ ಕಣ್ಣು ಇಟ್ಟಿರದಿದ್ದರೆ ಅದು ಸಮಾಜದ ಮೇಲೆಯೆ ಅಧಿಕಾರವನ್ನು ಪ್ರಾಪ್ತಗೊಳಿಸಿಕೊಳ್ಳಬಹುದು. ಆಧುನಿಕ ಸರ್ವಾಧಿಕಾರಗಳ ಇತಿಹಾಸವನ್ನು ನೋಡಿದರೆ ಮೊದಲು ವ್ಯಕ್ತಿಗಳಿಂದ ಮತ್ತು ವ್ಯಕ್ತಿಮಯ ಸಮಾಜದಿಂದ ಸರಕಾರದ ಕೈಗೆ ಅಧಿಕಾರ ಹರಿದು ಹೋಗಿ, ಆ ಮೇಲೆ ಆ ಸರಕಾರ ಜನತೆಯ ಇಚ್ಛೆಗೆ ನಿಲುಕದಂತಾಗಿಬಿಟ್ಟದ್ದು ಕಂಡುಬರುತ್ತದೆ.


ಮಧ್ಯಮಾರ್ಗ

ಆಧುನಿಕ ಪ್ರಜಾತಂತ್ರದ ಉಭಯ ಸಂಕಟವಿದು: ನಿರುದ್ಯೋಗ, ಕೊರತೆ, ಪರಸ್ಪರ ಪಕ್ಷಪಾತ ಇವು ಪ್ರಜಾತಂತ್ರದ ಅಭಿಶಾಪಗಳು. ಇವುಗಳ ಕಾರಣದಿಂದಲೇ ಅನೇಕರು ಸರ್ವಾಧಿಕಾರತ್ವದ ಕಡೆಗೆ ಒಲೆಯುತಿದ್ದಾರೆ. ಸರ್ವಾಧಿಕಾರಿ ರಾಜ್ಯಗಳಲ್ಲಿ ಕಡಿಮೆ ಸಂಬಳವಲ್ಲಾದರೂ ಪ್ರತಿಯೊಬ್ಬನಿಗೂ ಒಂದು ಉದ್ಯೋಗವಿದೆ. —ಆದರೆ ಸ್ವಾತಂತ್ರ್ಯ ಮಾತ್ರ ಇಲ್ಲ. ಹಳೆ ಪದ್ಧತಿಯ ಬಂಡವಲವಾದಿ ಪ್ರಜಾತಂತ್ರಗಳಲ್ಲಿ ಸಾಮಾಜಿಕ ಭದ್ರತೆಯ ಅಭಾವ, ವಸ್ತುಗಳ ಕೊರತೆ ಇವುಗಳೊಡನೆ ಸ್ವಾತಂತ್ರ್ಯ ಇತ್ತು. ಪ್ರಜಾತಂತ್ರವನ್ನು ಎದುರಿಸುವ ಸಮಸ್ಯೆಯೆಂದರೆ, ರಾಜಕೀಯ ಸ್ವಾತಂತ್ರ್ಯವನ್ನು ಇರಗೊಡಿಸಿ ಆರ್ಥಿಕ ಭದ್ರತೆ, ಸಾರ್ವತ್ರಿಕ ಸಮೃದ್ಧಿಗಳನ್ನು ಸಾಧಿಸಬೇಕಾದುದು. ಇದನ್ನು ಸಾಧಿಸಿದರೆ ಮಾತ್ರ ಸಧ್ಯದ ಸರ್ವಾಧಿಕಾರವಿರೋಧಿ ಹೋರಾಟದಲ್ಲಿ ಪ್ರಜಾತಂತ್ರ ಯಶಸ್ವಿಯಾಗಿ ತಾಳಬಲ್ಲದು. ಸಮಸ್ಯೆಗಳನ್ನು ಪರಿಹಾರ ಮಾಡಲಾರದ ಅತಿ ಅಲ್ಪ ಸರಕಾರಿ ಕ್ರಿಯೆಯೆಂಬ ದರಿ ಮತ್ತು ಎಲ್ಲರಿಗೂ ಕೆಲಸ ತರಬಹುದಾದರೂ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಅತ್ಯಧಿಕ ಸರಕಾರಿ ಕ್ರಿಯೆಯೆಂಬ ಹುಲಿ ಇವುಗಳ ನಡುವಣ ಸಂಕಟಮಯ ಮಾರ್ಗವನ್ನು ಪ್ರಜಾತಂತ್ರವಾದಿ ರಾಷ್ಟ್ರಗಳು ಅನುಸರಿಸಬೇಕಾಗಿದೆ. ಜಗತ್ತಿನ ಅತ್ಯಂತ ಶ್ರೀಮಂತ ಬಲಿಷ್ಠ ರಾಷ್ಟ್ರವಾದ ಅಮೇರಿಕೆ ಸಧ್ಯ ಕೆಲವರ್ಷ ಈ ಬಗೆಯಾಗಿ ಸಾಗಬಲ್ಲದು. ಅಧ್ಯಕ್ಷ ರೂಜವೆಲ್ಟರ "ನ್ಯೂ ಡೀಲ್" (ಹೊಸ ಉಪಾಯ) ದಿಂದಾದ ಕೆಲಮಟ್ಟಿನ ಸರಕಾರಿ ಯೋಜನೆಗಳು ಮತ್ತು ಅದೇ ಸಮಯದಲ್ಲಿ ಪ್ರಬಲ ವೈಯಕ್ತಿಕ ಪರಿಶ್ರಮಗಳು, ಸಂಗಡಲೆ ಸರಕಾರಿ ಮಧ್ಯಸ್ಥಿಕೆ, ಇವು ಉಚಿತ ಬೆಳವಣಿಗೆಗಳೇ ಸರಿ. ಈ ಬೆಳವಣಿಗೆಗಳಿಗೆ ಸಂಪ್ರದಾಯಶರಣರ ವಿರೋಧವೊದಗಿವಾಗ ಅಮೇರಿಕನ್ ಸಮಾಜರಚನೆ ಲೋಕಪ್ರಿಯವಾಗಿ ವಿವಿಧ ರೂಪದ ಸರ್ವಾಧಿಕಾರಗಳಿಗೂ ಪ್ರಜಾಸತ್ತೆಗಳಿಗೂ ತಿಕ್ಕಾಟ ಬೇಗನೆ ಒದಗಿ ಬರುವದು.

ಯುರೋಪದಲ್ಲಿ

ಯುರೋಪದಲ್ಲಿ ಮಾತ್ರ ಬಂಡವಲಗಾರ ಪ್ರಜಾತಂತ್ರ ಅಥವಾ ಸರ್ವಾಧಿಕಾರ ಇವುಗಳಲ್ಲೊಂದನ್ನು ಆರಿಸಿಕೊಳ್ಳುವಂತಿಲ್ಲ. ಜರ್ಮನ್ ಬಂಡವಲಗಾರರೂ "ಕ್ಷತ್ರಿಯ" ಜಮೀನದಾರರೂ ಮಧ್ಯಮ ವರ್ಗದ ಅಜ್ಞರೂ ಸೇರಿ ಪಟ್ಟಕ್ಕೇರಿಸಿದ ಮತ್ತು ಜರ್ಮನೇತರ ಪ್ರತಿಗಾಮಿಗಳು ಕಮ್ಯುನಿಝಂ ವಿರುದ್ಧ ಕೋಟೆಯೆಂಬ ಭಾವನೆಯಿಂದ ಬೆಳೆಸಿಟ್ಟ ಹಿಟ್ಲರನು ಯುರೋಪಿಯನ್ ಬಂಡವಲಗಾರಿಕೆಯನ್ನು ಕೊಂದೇಹಾಕಿದ್ದಾನೆ. ಯುರೋಪಿಯನ್ ಬಂಡವಲಗಾರಿಕೆಯ ಅವಶೇಷಗಳನ್ನು ಇನ್ನೊಮ್ಮೆ ಜೋಡಿಸಲು ಸಾಧ್ಯವಿಲ್ಲ. ಯುರೋಪು ಪ್ರಜಾತಂತ್ರ ಸಹಿತ ಸಾಮ್ಯವಾದ, ಅಥವಾ ಪ್ರಜಾತಂತ್ರರಹಿತ ಸಾಮ್ಯವಾದ ಅರ್ಥಾತ್ ಬಾಲ್ಶೆವಿಝಂ—ಇವುಗಳಲ್ಲೊಂದನ್ನು ಆರಿಸಿಕೊಳ್ಳಬೇಕಾಗಿದೆ. ಏಶಿಯಾ ದಕ್ಷಿಣ ಅಮೇರಿಕಾ, ಆಫ್ರಿಕಾ, ಆಸ್ಟ್ರೇಲಿಯಾ ಮೊದಲಾದ ಹಿಂದುಳಿದ ಭೂಭಾಗಗಳಲ್ಲಿ ಸರಕಾರಿ ಯೋಜನೆಗಳೆ ಆರ್ಥಿಕ ಮುನ್ನಡೆಯಲ್ಲಿ ಪ್ರಮುಖ ಪಾತ್ರ ವಹಿಸಬೇಕಾಗಿದೆ. ಹಿಂದೀ ಕೋಟ್ಯಾಧೀಶ ಕಾರಖಾನೆದಾರನೊಬ್ಬ ತಾನು ಸಾಮ್ಯವಾದಿಯೆಂದು ನನ್ನೊಡನೆ ಹೇಳಿದ್ದ ಜೆ. ಆರ್. ಡಿ. ಟಾಟಾ ಮೊದಲಾದ ಹಿಂದೀ ಬಂಡವಲಗಾರರು ಸಿದ್ಧಗೊಳಿಸಿರುವ ಯೋಜನೆಯನ್ನು ಸರಕಾರವೇ ನಡೆಸಬೇಕೆಂದು ಸೂಚಿಸಲಾಗಿದೆ. ಇದೀಗ ಹೊಸ ವಿಚಾರಧಾರೆ. ಸರಕಾರದ ಸಾಮ್ಯವಾದಿ ಹಿಡಿತವಿಲ್ಲದೆ ತಾವು ಕೆಲಸ ಸಾಧಿಸಲಾರೆವೆಂದು ಬಂಡವಲಗಾರರೇ ಒಪ್ಪಿಕೊಳ್ಳತೊಡಗಿದ್ದಾರೆ. ಸಂಗಡಲೇ, ಅವರು ಅಮೇರಿಕನ್ ಬಂಡವಳಗಾರಿಕೆಯ ಸಹಾಯ ಅಪೇಕ್ಷಿಸುತ್ತಾರೆ.

ಖಾಸಗಿ ಬಂಡವಲಕ್ಕೆ ಪ್ರತಿಬಂಧವಿರುವ ಸೋವಿಯೆಟ್ ರಾಜ್ಯವನ್ನು ಬಿಟ್ಟರೆ, ಉಳಿದೆಡೆ ಖಾಸಗಿ ಬಂಡವಳ ಉಳಿಯಬೇಕೋ ಬೇಡವೋ ಎಂಬ ಪ್ರಶ್ನೆಯಿಲ್ಲ. ಎಷ್ಟು ಭಾಗ ಸಾಮ್ಯವಾದ ಮತ್ತು ಎಷ್ಟು ಭಾಗ ಖಾಸಗಿ ಬಂಡವಲ ಬೆರಸಿ ಎರಕ ಹೊಯ್ಯಬೇಕೆಂಬುದೆ ಪ್ರಶ್ನೆಯಾಗುವದು. ಈ ಎರಕದ ಪ್ರಯೋಗದ ಫಲವನ್ನೇ ಅವಲಂಬಿಸಿದೆ ಪ್ರಜಾತಂತ್ರದ ಭವಿತವ್ಯ.



ಸಿಂಗಾಪುರದಲ್ಲಿ ಜಪಾನಿ ಯುದ್ಧಾಪರಾಧಿಗಳ ವಿಚಾರಣೆ (ಜನವರಿ ೨೧)

ಬೆಳ್ದಿಂಗಳ ಬಯಕೆ

ತುಂಬು ಚಂದಿರ ಬಂದು ಚಂದವನೆ ಹರಡಿತ್ತು
　　ತುಂಬಿ ತುಳುಕಿದುದೆನ್ನ ಪ್ರೇಮ
ತಂಗಾಳಿ ಸುಳಿದಿತ್ತು ತಂಪೆಳಕು ಇಳಿದಿತ್ತು
　　ತಿಂಗಳಾಯಿತು ನನ್ನ ನಾರಿ
ತೌರಿಗ್ಹೋದಾ ಗೌರಿ ತಿರುಗಿ ಬರಲಿಲ್ಲೆಂದು
　　ಮರುಗಿ ಕರಗಿದುದೆನ್ನ ಮನವು.
ತಿಂಗಳಾಚೆಗೆ ನಾವು ಬೆಳ್ದಿಂಗಳಲಿ ನಿಂದು
　　ಕೆನ್ನೆಯೊತ್ತಿರಲೆನ್ನ ಎದೆಗೆ,
ಆಡಲಿಲ್ಲವೆ ನಾವು ಬೇಡಲಿಲ್ಲವೆ ಜೀವ:
　　ಕೂಡಿರಲಿ ಕಷ್ಟದಲ್ಲಿ.
ತಂಪು ಬೆಳಕಿನ ಸೊಂಪ ಕಲಕಲಿಲ್ಲವೆ ನಾವು
　　ಕಳೆ ಏರುತಿರಲು ಚಂದ್ರ.
ಕೋಪತೋರುವ ತೆರದಿ ತಾಪನುಡಿಸುವ ಭರದಿ
　　ಕಪ್ಪು ಮೋಡದ ಹೆಪ್ಪಿನೊಳಗೆ.
ಶಶಿಯೋಡುತಿರಲಂದು ಶಿಶುವಾಗಿ ನಾನ್ನಿಂದು
　　ಶಪಿಸಲಿಲ್ಲದೆ ಶಶಿಯ ಪುಂಡತನವ.
ಮನ್ನಿಸುವೆನು ಬನ್ನಿ ಎನ್ನುತಲೆ ಹೊರಬರಲು
　　ಚನ್ನಿಗನು ಚಲುವ ಸಖಿಸಿ,
ಕುಣಿಯಲಿಲ್ಲವೆ ನಾವು ತಣಿಯಲಿಲ್ಲವೆ ಆಶೆ
　　ಅಣಕಿಸುತೆ ನಾವುನೋವ.
ಚಂದಿರನೆ ಇರಲೆಂದು ಚಂದವೇ ಸ್ಥಿರವೆಂದು
　　ಅರೆದು ಹಾಡಿದೆವಲ್ಲ ನಾವು
ಹಿಂದಾದ ಆ ನೆನಸ ಇಂದು ಕಂಡಿತು ಮನಸು
　　ಚಂದಿರನ ಚಲುವ ಬಯಸಿ
ಓಡೋಡಿ-ಬಾ ಗೌರಿ, ಈಡಾಡಿ ನಿನ ತೌರ
　　ಕೂಡಿ, ಕಳೆ ವಿರಹದಳಲ.
ತಿಂಗಳಾ ಕನಸಿಂದು ನೆನಸಾಗಿ ನಲಿಯಲಿ
　　ಮಂಗಳವು ತಿಂಗಳನ ಬೆಳಕು.

ಡಾ. ಪಿ. ನಾಗನಗೌಡ
ಮದರಾಸು

ದಾವಣಗೇರಿಯ ಶ್ರೀ ಪ್ರಭಯ್ಯನವರು ತಮ್ಮ ಲಗ್ನದ ಕಾಲಕ್ಕೆ ೪೦೦ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಬೇರೆ ಬೇರೆ ಸಂಘ ಸಂಸ್ಥೆಗಳಿಗೆ ಕಾಣಿಕೆ ಕೊಟ್ಟರು.

ಕರ್ಮವೀರ
ಹರಿಜನ ಪುರವಣಿ

ತಪ್ಪು ಒಪ್ಪಿಕೊಳ್ಳೋಣ ಮತ್ತು ಉಪಾಯ

ನಾನು ಸೋಂಡನೆಂದು ನನಗೂ ನನ್ನ ಹಲವು ಗೆಳೆಯರಿಗೂ ಮನವರಿಕೆಯಾಗಿದೆಂಬುದು ಸ್ಪಷ್ಟ. ತಪ್ಪುಗಳಿಂದಲೇ ನಾನು ಪಾಠ ಕಲಿಯಬಲ್ಲೆನು. ನಾನು ಎಂದೂ ಮಾಡಬಾರದ ತಪ್ಪನ್ನು ಮಾಡುತ್ತಿರುವೆನೆಂದು ಇದೀಗ ಕಂಡುಹಿಡಿದಿರುವೆನು.

ಡಾ. ದಿನಶಾ ಮೇಥಾ ಇವರ ಪರಿಚಯು ನನಗೆ ಬಹಳ ದಿನಗಳಿಂದ ಇದೆ. ತಾವು ಯೋಚಿಸಿದಂಥ ನೈಸರ್ಗಿಕ ಚಿಕಿತ್ಸಾಕಾರ್ಯದಲ್ಲಿ ಅವರು ತಮ್ಮ ಜೀವನವನ್ನೇ ಮೀಸಲಾಗಿಟ್ಟಿರುವರು. ಹಿಂದುಸ್ತಾನದಲ್ಲಿ ಪರಿಪೂರ್ಣ ಚಿಕಿತ್ಸಾಲಯವೊಂದನ್ನು ಕಾಣಬೇಕೆಂಬುದು ಅವರ ಮಹತ್ವಾಕಾಂಕ್ಷೆ ಹಿಂದುಸ್ತಾನದಲ್ಲಿ ಬಡಹಳ್ಳಿಗರ ಬೇನೆಗಳ ಪ್ರತಿಬಂಧ ಮತ್ತು ಪರಿಹಾರಕ್ಕಾಗಿಯೇ ಮುಖ್ಯವಾಗಿ ಇಂಥ ನೈಸರ್ಗಿಕ ಚಿಕಿತ್ಸಾವಿಶ್ವವಿದ್ಯಾಲಯ ಸ್ಥಾಪಿತವಾಗಲಿಕ್ಕೆ ಬೇಕು. ಜಗತ್ತಿನಲ್ಲಿ ಇಂಥ ಮಾದರಿಯ ವಿಶ್ವವಿದ್ಯಾಲಯವೆಲ್ಲಿಯೂ ಇಲ್ಲ. ಪಶ್ಚಿಮ ದೇಶಗಳಲ್ಲಿರುವ ಸಂಸ್ಥೆಗಳು ಶ್ರೀಮಂತರಿಗಾಗಿಯೇ ಹೆಚ್ಚಾಗಿ ಇರುವವಲ್ಲದೆ ಬಡವರಿಗಾಗಿ ಇರುವದಿಲ್ಲ.

ಹಿಂದುಸ್ತಾನದ ಹಳ್ಳಿಗರ ನೈಸರ್ಗಿಕ ಚಿಕಿತ್ಸಾ ಪದ್ಧತಿ ನನಗೆ ಗೊತ್ತಿದೆಂದು ನನಗನಿಸುತ್ತದೆ ಆದುದರಿಂದ ಹಳ್ಳಿಗರಿಗಾಗಿ ನಿಸರ್ಗ ಚಿಕಿತ್ಸಾಲಯವು ಪುಣೆ ಪಟ್ಟಣದಲ್ಲಿರತಕ್ಕದ್ದಲ್ಲೆಂಬುದು ಕೂಡಲೆ ನನಗೆ ಗೊತ್ತಾಗಬೇಕಿದ್ದಿತು. ಆದರೆ ವಿಶ್ವಸ್ತಮಂಡಲವೊಂದನ್ನು ಸ್ಥಾಪಿಸಲಾಯಿತು. ಆತಿಥೀರ ಜಹಾಂಗೀರಜಿ ಪಟೇ , ದಿನಶಾ ಮೆಥಾ ಇವರ ನನ್ನೊಡನೆ ವಿಶ್ವಸ್ತರಾಗಲು ಒಪ್ಪಿಕೊಂಡರು. ಶ್ರೀಮಂತರಿಗಾಗಿ ಎಂದಿನಿಂದಲೂ ಇದ್ದ ಚಿಕಿತ್ಸಾಲಯವನ್ನೆ ಬಡವರ ಸಲುವಾಗಿ ಉಪಯೋಗಿಸಬೇಕೆಂದು ನಾನು ಕೂಡಲೆ ಪುಣೆಗೆ ಧಾವಿಸಿದೆನು. ನಾನು ಕೆಲವು ಮಹತ್ವದ ಬದಲಾವಣೆಗಳನ್ನು ಸೂಚಿಸಿದೆನು. ಆದರೆ ನಗರದಲ್ಲಿ ಬಡವರಿಗಾಗಿ ಒಂದು ಸಂಸ್ಥೆಯನ್ನು ಸ್ಥಾಪಿಸಬೇಕೆಂಬ ಆಸೆ ತಳೆಯುವದೆಂದರೆ ಮೂರ್ಖತನವೆಂಬ ಅರಿವು ಕಳೆದ ಸೋಮವಾರ ದಿನ ನನಗುಂಟಾಯಿತು. ಬಳಲುವ ಬಡವರಿಗಾಗಿ ನಾನು ಕೊರಗುತ್ತಿದ್ದರೆ ಅವರೆಡೆಗೇ ನಾನು ಹೋಗಬೇಕಲ್ಲದೆ ಅವರು ನನ್ನ ಕಡೆಗೆ ಬರಬೇಕೆಂದು ಅಪೇಕ್ಷಿಸಬಾರದೆಂದು ನನ್ನ ಮನವರಿಕೆಯಾಯಿತು. ಸಾಮಾನ್ಯ ವೈದ್ಯಕೀಯ ಚಿಕಿತ್ಸೆಗೂ ಇದೇ ಮಾತು ಅನ್ವಯಿಸುವದು. ನೈಸರ್ಗಿಕ ಚಿಕಿತ್ಸೆಗಂತೂ ಈ ಮಾತು ಮತ್ತಷ್ಟು ಹತ್ತುವದು. ಮಣ್ಣಿನ ಪೊಟೀಸ, ಆತಪ ಚಿಕಿತ್ಸೆ, ಕಟಿಸ್ನಾನ, ಆಸನಸ್ನಾನಗಳ ಬಗ್ಗೆ ಮತ್ತು ಹಳೆಯ ಪದ್ಧತಿಯಿಂದ ಬೇಯಿಸಿದ ಆಹಾರ ಮೊದಲಾದವುಗಳ ಬಗ್ಗೆ ಪುಣೆಗೆ ಬಂದ ಹಳ್ಳಿಗರು ನನ್ನ ಸೂಚನೆಗಳನ್ನು ಅದೆಂತು ತಿಳಿದುಕೊಂಡು ಆಚರಿಸಬಲ್ಲರು? ರೋಗನಿವಾರಣೆಗಾಗಿ ಯಾವದೊಂದು ಪುಡಿಯನ್ನು ಇಲ್ಲವೆ ಪೇಯವನ್ನು ನಾನು ಕೊಡಬೇಕೆಂದು ಅವನು ಅಪೇಕ್ಷಿಸಬಹುದು. ನೈಸರ್ಗಿಕ ಚಿಕಿತ್ಸೆ ಒಂದು ಬಗೆಯ ಜೀವನಮಾರ್ಗ; ಅದನ್ನು ಕಲಿಯಲಿಕ್ಕೆಬೇಕಾಗುವದು. ನಾನ್ನು ತಿಳಿದುಕೊಳ್ಳುವಂತೆ ಅದೇನು ಔಷಧೀಯ ಚಿಗತ್ಸೆಯಲ್ಲ. ಪಂಚಾಮಕರ ಚಿಕಿತ್ಸೆಯಾಗಬೇಕಾದರೆ ಆ ಮನುಷ್ಯನ ಗುಡಿಸಲಿನಲ್ಲಿ ಅದರ ಹತ್ತರ ಇಲ್ಲವೆ ಮನೆಯಲ್ಲಿ ಅಥವಾ ಮನೆಯ ಹತ್ತರ ಆ ಚಿಕಿತ್ಸೆ ನಡೆಯಬೇಕು. ಆ ವೈದ್ಯನು ಸಹಾನುಭೂತಿ ಮತ್ತು ತಾಳ್ಮೆಯುಳ್ಳವನು ಮತ್ತು ಮಾನವೀಜ್ಞಾನವುಳ್ಳವನು ಇರಬೇಕಾದುದು ಅವಶ್ಯ. ಯಾವದೊಂದು ಹಳ್ಳಿಯಲ್ಲಿ ಇಲ್ಲವೆ ಹಳ್ಳಿಗಳಲ್ಲಿ ಈ ರೀತಿ ಯಶಸ್ವಿಯಾಗಿ ಚಿಕಿತ್ಸೆ ಮಾಡಿದ ಬಳಿಕ ಸಾಕಷ್ಟು ಸ್ತ್ರೀ ಪುರುಷರು ಈ ನೈಸರ್ಗಿಕ ಚಿಕಿತ್ಸೆಯ ರಹಸ್ಯವನ್ನರಿತ ಬಳಿಕ ನೈಸರ್ಗಿಕ ಚಿಕಿತ್ಸಾಲಯದ ಬೀಜಾಣುವು ದೊರೆತಂತಾಗುವದು. ಈ ಸಾಮಾನ್ಯ ಸತ್ಯವನ್ನು ಸಂಶೋಧಿಸಲು ಸಂಸ್ಥೆಯಲ್ಲಿ ಹನ್ನೊಂದು ದಿನಗಳ ವರೆಗೆ ಅದಕ್ಕಾಗಿಯೇ ಎಂದು ನಾನುಇರಬೇಕಾಗಿರಲಿಲ್ಲ ಮತ್ತು ಅದಕ್ಕಾಗಿ ಭವ್ಯವಾದ ಕಟ್ಟಡ ಮತ್ತು ಉಳಿದ ಉಪಕರಣಗಳೆಲ್ಲ ಅವಶ್ಯವಿರಲಿಲ್ಲ. ನನ್ನ ಮೂರ್ಖತನಕ್ಕಾಗಿ ನಗಬೇಕೋ ಅಳಬೇಕೊ ತಿಳಿಯದಾಗಿದೆ. ನಾನು ನಕ್ಕೆನು ಮತ್ತು ತಪ್ಪನ್ನು ತಿದ್ದಿಕೊಳ್ಳಲು ಧಾವಿಸಿದೆನು. ಈ ರೀತಿ ತಪ್ಪು ಒಪ್ಪಿಕೊಂಡದ್ದರಿಂದ ನಷ್ಟ ಪರಿಹಾರವಾದಂತಾಯಿತು.

ತನಗೆ ಮನವರಿಕೆಯಾಗುವ ವರೆಗೆ ಯಾವದೊಂದು ವಿಷಯವು, ಮಹಾತ್ಮ ಪ್ರಣೀತವಾದರೂ ಆತ್ಯಂತಿಕ ಸತ್ಯವೆಂದು ತಿಳಿದುಕೊಳ್ಳಬಾರದೆಂದು ವಾಚಕರು ಇದರಿಂದ ತಿಳಿದುಕೊಳ್ಳಬಹುದು. ಸದ್ಯದ ಪ್ರಸಂಗದಲ್ಲಿ ನನ್ನ ತಪ್ಪು ಇಷ್ಟೊಂದು ಸ್ಪಷ್ಟವಿರುವದು. ಅದು ಇನ್ನು ಕೆಲಸಮಯದವರೆಗೆ ಸಾಗಿದ್ದರೂ ಅದಕ್ಕೆ ಯಾರೂ ಬಲಿಬೀಳುತ್ತಿರಲಿಲ್ಲ. ನಿಜವಾದ ಹಳ್ಳಿಗರು ಪರಿಹಾರ ಪಡೆಯಲು ಈ ಸಂಸ್ಥೆಗೆ ಬರುತ್ತಿರಲಿಲ್ಲ. ಆದರೆ ಬಹಳ ತಡಮಾಡಿ ಈ ಶೋಧವಾಗಿದ್ದರೆ ನನ್ನಬಗ್ಗೆ ಇರುವ ಅದರ ಭಾವಗಳನ್ನು ನಾನು ಕಳೆದುಕೊಂಡು ನನ್ನ ಖ್ಯಾತಿಯೆಲ್ಲ ಹಾರಿಹೋಗುತ್ತಿದ್ದಿತು. ಸ್ವಾಭಿಮಾನ ವಿನಾಶದಷ್ಟು ಬಾಧಕವಾದುದು ಬೇರೊಂದಿಲ್ಲ. ನನ್ನ ಸಹಕಾರಿಗಳ ವಿಶ್ವಾಸಕ್ಕೆ ನಾನೀಗ ಪಾತ್ರನಾಗಿರುವೆನೊ ಇಲ್ಲವೊ ನಾನರಿಯೆ. ಅದನ್ನು ನಾನು ಕಳೆದುಕೊಂಡರೆ ಅದಕ್ಕೆ ನಾನು ಅರ್ಹನಾಗಿರುವೆನೆಂಬುದೂ ನನಗೆ ಗೊತ್ತಿದೆ. ಬಳಲುವ ಹಳ್ಳಿಗರ ಸಲುಗಾಗಿ ತೆಗೆದಿಟ್ಟ ಹಣದಲ್ಲಿ ಒಂದು ಪೈ ಕೂಡ ಈ ನಿರರ್ಥಕ ಸಾಹಸ ಕಾರ್ಯದಲ್ಲಿ ವೆಚ್ಚಮಾಡಿಲ್ಲೆಂದು ವಾಚಕರಿಗೆ ಹೇಳಿ ಈ ಕತೆ ಮುಗಿಸುತ್ತೇನೆ. ಸದ್ಯದ ಸಂಸ್ಥೆ ಇನ್ನು ಮುಂದೆ ಯಾವ ಬಗೆಯಿಂದ ಪರಿವರ್ತನ ಹೊಂದಬಹುದು, ಬಡವರ ನೈಸರ್ಗಿಕ ಚಿಕಿತ್ಸೆಯ ಪ್ರಯೋಗವೆಲ್ಲಿ ನಡೆಯಬಹುದು ಮುಂತಾದ್ದೆಲ್ಲ ಈ ತಪ್ಪು ಒಪ್ಪೋಣಕ್ಕೆ ಸಂಬಂಧಿಸಿದ ಸಂಗತಿಗಳಲ್ಲ. ನನ್ನೀ ವೃದ್ಧಾಪ್ಯವೆಂದು ಹೇಳುತಿರುವ ಸಮಯದಲ್ಲಿ ಕೈಕೊಂಡ ಈ ನವೋದ್ಯಮಕ್ಕೆ ಪ್ರಾರಂಭಿಕ ತಪ್ಪಿನಿಂದ ಯಾವದೇ ಬಗೆಯ ಬಾಧೆಯುಂಟಾಗದು, ಅದನ್ನು ಬಿಡಲಾಗದು. ತದ್ವಿರುದ್ಧವಾಗಿ, ವ್ಯವಹಾರ್ಯವಿದ್ದರೆ ಲಕ್ಷಗಟ್ಟಲೆ ಜನರ ಸಲುವಾಗಿ ನೈಸರ್ಗಿಕ ಚಿಕಿತ್ಸೆಯ ಈ ಧ್ಯೇಯ ಸಾಧನೆಗಾಗಿ ಹೆಚ್ಚು ಜೋರಿನಿಂದ ಪ್ರಯತ್ನಿಸಬೇಕೆಂಬುದು ಇದರಿಂದ ಸ್ಪಷ್ಟವಾಗಬೇಕು. ನಿಃಸಂದೇಹವಾಗಿ ಇದು ಶಕ್ಯವಿರುವದು.

ಪುಣೆ — ಮೋ. ಕ. ಗಾಂಧಿ

೬—೩—೪೬

ರೋಗಿಗಳಿಗೆ

ಪುಣೆಯ ನೈಸರ್ಗಿಕ ಚಿಕಿತ್ಸಾಲಯದಲ್ಲಿ ಪ್ರವೇಶ ದೊರಕಿಸಬೇಕೆಂಬ ಬಗ್ಗೆ ಅನೇಕ ಜನರಿಂದ ಪತ್ರಗಳು ಬರುತಿವೆ. ಸದ್ಯಕ್ಕೆ ಅಂಥ ಸೌಕರ್ಯವೇನೂ ಇಲ್ಲೆಂದು ನಾನು ತಿಳಿಸಬಯಸುತ್ತೇನೆ. ಆ ಆರೋಗ್ಯ ಧಾಮದಲ್ಲಿ ಯೋಚಿಸಿದಷ್ಟು ಸ್ವಚ್ಛತೆಯ ಮಟ್ಟನ್ನು ಇನ್ನೂ ಏರುವದಾಗಿಲ್ಲ. ಹಳ್ಳಿಗರ ಸಲುವಾಗಿ ಇನ್ನೂ ಕಾರ್ಯ ಪ್ರಾರಂಭವಾಗಿಲ್ಲ. ಇವೆಲ್ಲ ಪ್ರಾಥಮಿಕ ವ್ಯವಸ್ಥೆ ಆಗುವವರೆಗೆ ಏನೂ ಮಾಡುವದು ಸಾಧ್ಯವಿಲ್ಲ. ಆದುದರಿಂದ ರೋಗಿಗಳು ಸ್ವಲ್ಪ ದಿನ ತಡೆಯಬೇಕಾಗುವದು. ಮುಂಬಯಿಯಲ್ಲಿ ಡಾ. ದಿನಶಾ ಮೇಥಾರವರ ನೈಸರ್ಗಿಕ ಚಿಕಿತ್ಸಾಲಯವು ರೋಗಿಗಳಿಗಾಗಿ ಇದ್ದೇ ಇದೆ. ಅವರು ಪುಣೆಯಲ್ಲಿ ಮತ್ತು ಸಿಂಹಗಡದಲ್ಲಿ ಶಾಖೆಗಳನ್ನು ತೆರೆಯಬಹುದು. ಅವರು ನೈಸರ್ಗಿಕ ಚಿಕಿತ್ಸಾಲಯದ ಸಂಬಂಧದಲ್ಲಿ ಬಹಳ ಮಹತ್ವದ ಹೊಣೆಯನ್ನು ಹೊತ್ತುಕೊಂಡಿರುವದರಿಂದ ಇದಕ್ಕೆಲ್ಲ ಸ್ವಲ್ಪ ಸಮಯ ಹಿಡಿಯುವದೆಂದು ನಂಬಲಾಗಿದೆ. ಖಾಸಗಿ ರೋಗಿಗಳಿಗೆ ಹಿಂದಿನಂತೆ ಈಗಲೂ ಫೀ ದರ ಉಳಿಯುವದು.

ಮುಂಬಯಿ ೧೨ — ಮೋ. ಕ. ಗಾಂಧಿ

ಜ. ಅನ್ಸಾರಿ

ಪುಣೆ ಮಾರ್ಚ ೭- ಗಾಂಧೀಜಿಯವರು ಪತ್ರಿಕೆಗಳಿಗೆ ಕೆಳಗಿನ ಪ್ರಕಟನೆ ಕೊಟ್ಟಿದ್ದಾರೆ.

ಅಂತ್ಯಾವಸ್ಥೆಯಲ್ಲಿರುವ ಜನರಲ್ ಅವಾರಿಯವರ ಪ್ರಾಣವುಳಿಸಲು ನನ್ನ ಸಹಾಯವನ್ನು ಕೋರುವ ಪತ್ರಗಳ ತಂತಿಗಳ ಸುರಿಮಳೆ ನಡೆದಿದೆ. ಜನರಲ್ ಅವಾರಿಯವರ ಪರಿಚಯ ನನಗಿದೆ, ಅವರೊಬ್ಬ ಪ್ರಿಯ ಕಾರ್ಯಕರ್ತರು. ಅನೇಕಸಲ ಅವರು ಅನುಚಿತ ಹಟಮಾರಿಗಳಿರುವರೆಂಬುದೂ ನನಗೆ ಗೊತ್ತಿದೆ. ಸದ್ಯದ ಪ್ರಸಂಗವೂ ಅದೇ ಬಗೆಯದಾಗಿದೆ. ಯಾವನೊಬ್ಬ ಮನುಷ್ಯ ಎಷ್ಟೇ ಲೋಕಪ್ರಿಯ ಇಲ್ಲವೆ ದೊಡ್ಡವನಿದ್ದರೂ ಅನುಚಿತ ಉದ್ದೇಶವನ್ನು ಕೈಕೊಂಡು ಅದರ ನಿಮಿತ್ತ ಉಪವಾಸವನ್ನು ಹೂಡಿದರೆ ಅವನ ಪ್ರಾಣವನ್ನುಳಿಸುವದಕ್ಕಾಗಿ ಅನುಚಿತ ಉದ್ದೇಶವು ವಿಜಯ ಹೊಂದುವಂತೆ ಮಾಡುವದಕ್ಕಿಂತ ಅವನನ್ನು ಸಾಯಗೊಡುವದು ಅವನ ಮಿತ್ರರ (ಅವರಲ್ಲಿ ನಾನೊಬ್ಬ) ಸಹಕಾರ್ಯಕರ್ತರ ಮತ್ತು ಬಂಧುಬಳಗದ ಕರ್ತವ್ಯವಾಗಿದೆ. ಸಾಧ್ಯ ಅನುಚಿತವಿದ್ದರೆ ಉಚಿತ ಸಾಧನವೂ ಅನುಚಿತವಾಗುವದು. ಜನರಲ್ ಅವಾರಿಯವರ ಸಾಧ್ಯವು ಅನುಚಿತ ಮತ್ತು ಅನ್ಯಾಯದ್ದಿರುವದೆಂದು ಪುತ್ತೊಮ್ಮೆ ನಾನು ಹೇಳಬಯಸುವೆ. ಕಾಂಗ್ರೆಸ್ಸಿನ ಕೇಂದ್ರನಿಯೋಜಕ ಸಮಿತಿಯು ಬಹಳ ದೊಡ್ಡ ತಪ್ಪು ಮಾಡಿದೆಂದು ಅವರು ಪ್ರಕಟನೆ ಹೊರಡಿಸಿದ್ದರಲ್ಲಿ ಅವರ ತಪ್ಪು ಎಳ್ಳಷ್ಟು ಇರಲಿಕ್ಕಿಲ್ಲ. ಆದರೆ ತಪ್ಪನ್ನು ಸರಿಪಡಿಸುವವರಾರು ? ಜನರಲ್ ಅವಾರಿಯವರು ಹೇಳುವಂತೆ ಸರದಾರ ವಲ್ಲಭಭಾಯಿ ಪಟೇಲರು ಅದನ್ನು ಮಾಡಲಾರರು. ಅವರು ಸರದಾರರಾಗಿದ್ದರೂ ಒಬ್ಬ ವ್ಯಕ್ತಿಯೆ. ಅವರು ಸಮಿತಿಯ ನಿರ್ಣಯವನ್ನು ಸಾರಿರುವರು. ನ್ಯಾಯಾಧೀಶನು ತನ್ನ ನಿರ್ಣಯವನ್ನು ಪುನಃ ಪರಿಶೀಲಿಸಲಾರನು. ಇದು ಸರದಾರರ ಮಾತಾಯಿತು. ಕೇಂದ್ರ ನಿಯೋಜಕ ಸಮಿತಿಯು ತನ್ನ ನಿರ್ಣಯವನ್ನು ಪುನಃ ಪರಿಶೀಲಿಸಲಾರದು. ಅದಕ್ಕೆ ಹಾಗೆ ಮಾಡಲು ಅಧಿಕಾರವಿಲ್ಲ. ಸುವ್ಯವಸ್ಥಿತ ಪ್ರಜಾಪ್ರಭುತ್ವದಲ್ಲಿ ಯಾವದೊಂದು ಸಂಸ್ಥೆ ಚಂಚಲಚಿತ್ತದಿಂದ ಕಾರ್ಯಮಾಡಬಹುದು. ಜನರಲ್ ಅವಾರಿ ಮತ್ತು ಅವರ ಗೆಳೆಯರು ಕಾಂಗ್ರೆಸ ಕಾರ್ಯನಿರ್ವಾಹಕಸಮಿತಿಗೆ ಅಪೀಲಮಾಡಲು ಅಧಿಕೃತರಿರುವರು ಅನಂತರ ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಮತ್ತು ಕೊನೆಯದಾಗಿ ಕಾಂಗ್ರೆಸ್ಸಿಗೆ ಅವರು ಅಪೀಲ ಮಾಡಬಹುದು. ಇದೆಲ್ಲ ಅವರಿಗೆ ಬಹಳ ವಿಲಂಬಿತ ವಿಧಾನವೆನಿಸಬಹುದು. ಯಾವನೊಬ್ಬ ವ್ಯಕ್ತಿಗಾಗಿ ಇಲ್ಲವೆ ವ್ಯಕ್ತಿಗಳಿಗಾಗಿ ಅವರು ಹೋರಾಡದೆ ಅವರು ಹೇಳುತಿರುವಂತೆ ತತ್ವಕ್ಕಾಗಿ ಹೋರಾಡುತಿದ್ದರೆ, ಅದೇನು ವಿಲಂಬಿತ ವಿಧಾನವಾಗಲಾರದು. ತತ್ವರಕ್ಷಣೆಗನುಕೂಲವಾಗಿಯೆ ಸದಾಕಾಲ ಗತಿಸುವದು ನ್ಯಾಯನಿರ್ಣಯಕ್ಕೆ

—೯ನೇ ಪುಟ ನೋಡಿರಿ

ಮೂಲಶಿಕ್ಷಣಕ್ಕಿಂತ ಹಿಂದಿನ ಶಿಕ್ಷಣ

ಇರುವ ಹುಡುಗರನ್ನೆಲ್ಲ ನಾವು ಸೆಳೆದುಕೊಳ್ಳಬೇಕೆಂಬುದೆ ನಮ್ಮ ಪ್ರಯತ್ನವಾಗಿರಬೇಕು. ಯಾರಾದರೂ ಬಾರದಿದ್ದರೆ ಇದರಲ್ಲಿ ನಮ್ಮದೇನೋ ದೋಷವಿರಬೇಕೆಂದು ತಿಳಿದುಕೊಳ್ಳಬೇಕು. ಅವರಿಗೆ ಬರುವ ಇಚ್ಛೆಯಾಗಬೇಕು.

ನಮ್ಮ ಕಡೆಗೆ ಎಷ್ಟು ಹುಡುಗರು ಬರುವರೊ ಅವರನ್ನೆಲ್ಲ ನಮ್ಮ ಮಕ್ಕಳೆಂದೇ ತಿಳಿದು ವರ್ತಿಸಬೇಕು. ಅವರ ಮೈ-ಮನಗಳು ಬಲಿಷ್ಠವಾದರೆ ಅವರಲ್ಲಿ ಸಾಧಾರಣವಾದ ಸಭ್ಯತೆಯುಂಟಾದರೆ, ನಮ್ಮ ಕೆಲಸವಾಯಿತೆಂದು ತಿಳಿಯಬೇಕು.

ನಾನು ಅನೇಕ ಹುಡುಗರಿಗೆ ಕಲಿಸಿದ್ದೇನೆ. ಆದರೆ ಅವರಿಗೆ ಗೊಂದಲ ಮಾಡಲು ಬಿಟ್ಟಿಲ್ಲ. ಅವರು ನನ್ನ ಕೈಯಲ್ಲಿದ್ದರೆ, ಚಿಕ್ಕಂದಿನಿಂದಲೂ ವಿಧ್ವಂಸವೆಂದರೆ ಕೆಟ್ಟದ್ದೆಂದು ಅವರು ಕಲಿತುಕೊಳ್ಳುವಂತೆ ಶಿಕ್ಷಣ ಕೊಟ್ಟೇನು. ಅವರೇನು ಮಾಡುವದಿದ್ದರೂ ಉತ್ಪಾದನ ಮಾಡಲಿ, ಉಂಟುಮಾಡಲಿ. ಉತ್ಪಾದನ ಮಾಡುವದರಲ್ಲಿಯೆ ಕಲೆಯಿದೆ, ಇರಬೇಕು.

ಮಕ್ಕಳು ಹುಟ್ಟಾ ಒಳ್ಳೆಯವರಾಗಲಿ ಕೆಟ್ಟವರಾಗಲಿ ಇರುವರೆಂದು ನಾನು ನಂಬುವದಿಲ್ಲ. ಕೆಲವು ಒಲವುಗಳೇನೋ ಇರುತ್ತವೆ. ಆದರೆ ಅವಕ್ಕೆ ರೂಪುಕೊಡುವವರು ನಾವು. ಅದರ ಅರ್ಥ ಹೀಗಾಗುತ್ತದೆ-ಮಗುವು ತಾಯಿಯ ಗರ್ಭದಲ್ಲಿ ಬಂದೊಡನೆ ಅದರ ಶಿಕ್ಷಣ ಪ್ರಾರಂಭವಾಗುತ್ತದೆ. ಆದುದರಿಂದ ನಾನು ತಾಯಿಗೆ ಕಲಿಸುವೆ— ಅವಳು ಪ್ರೌಢಶಿಕ್ಷಣದ ವಿಷಯವಾಗುತ್ತಾಳೆ— ಮಗುವಿನ ಸಂಸ್ಕಾರವೂ ಅಲ್ಲಿಂದಲೇ ಹುಟ್ಟುತ್ತದೆ. ಭವಿಷ್ಯತ್ತಿನ ಪ್ರಜೆಯನ್ನು ಈ ಹಾದಿಯಿಂದಲೇ ಸಿದ್ಧಗೊಳಿಸಬೇಕಾಗಿದೆ.

ಮಗು ತಾಯಿಯನ್ನು ಎಲ್ಲಿವರೆಗೆ ಬಿಟ್ಟು ಹೋಗುವದಿಲ್ಲವೊ ಅಲ್ಲಿ ವರೆಗೆ ತಾಯಿಗೇ ಕಲಿಸುವೆ. ಮಕ್ಕಳ ಕೈಕಾಲು ಚಲಿಸುತ್ತವೆ. ಅವು ಏನಾದರೂ ಮಾಡಿಯೇ ತೀರುತ್ತವೆ. ಎರಡು ಎರಡೂವರೆ ವರ್ಷದ ಮಕ್ಕಳು ನಮ್ಮ ಕೈಗೆ ಬಂದರೆ, ಮತ್ತು ನಾವು ಹೇಳಿಕೊಡುವ ರೀತಿಯಲ್ಲಿ ಕೈಕಾಲು ಆಡಿಸಿದರೆ ಅವು ಎಷ್ಟು ಉಚ್ಚಕ್ಕೇರಬಹುದೆಂಬುದಕ್ಕೆ ಸೀಮೆಯನ್ನು ಕಲ್ಪಿಸುವದೇ ಸಾಧ್ಯವಿಲ್ಲ.

ನಮ್ಮ ಕೈಯಲ್ಲಿದ್ದರೆ ಮಗು ಯಾವೊಂದು ವಸ್ತುವನ್ನು ಹಾಳುಮಾಡಲಿಕ್ಕಿಲ್ಲ. ಹೀಗೆ ಮಾಡಿದ್ದರಿಂದ ನೋವಾಗುವದು.

ಅವರಿಗೆ ನಾವು ಕಲಿಸುವದೆಲ್ಲ ರಚನಾತ್ಮಕವಿರಲಿ, ಕ್ರಿಯಾತ್ಮಕವಿರಲಿ, ವಿನಾಶಕವಲ್ಲದಿರಲಿ.

ಮಗು ಮಾತಾಡತೊಡಗಿದೊಡನೆ ಭಾಷೆಯ ಶಿಕ್ಷಣ ಆರಂಭವಾಗುತ್ತದೆ. ಮೊದಲು ಬಣ್ಣಗಳ ಗುರುತು ಆಗುವದು. ಅಕ್ಷರ ಜ್ಞಾನವನ್ನು ಚಿತ್ರಗಳಿಂದಲೇ ಪ್ರಾರಂಭಿಸಬೇಕು. ೧, ೨, ಅ, ಆ, ಇತ್ಯಾದಿ ಚಿತ್ರಗಳಿವೆಯಲ್ಲ? ಓದುವದು, ಬರೆಯುವದು, ಲೆಕ್ಕ ಮಾಡುವದು ಕಾಲಕಾಲಕ್ಕೆ ತನ್ನಂತೆ ಪ್ರವಾಹದಲ್ಲಿ ಬರುತ್ತದೆ. ಹೀಗೆ ಮಾಡುವದರಿಂದ ಶ್ರಮವೆನಿಸುವದಿಲ್ಲ. ಅವನ ಎಲ್ಲ ಶಿಕ್ಷಣವೂ ಆಟದಂತೆ ಅನಿಸಿರಬೇಕು.

ಅವನು ಏನನ್ನು ತಯಾರಿಸಿದರೂ ಪ್ರಯೋಜನಕ್ಕೆ ಬೀಳುವ ವಸ್ತು ತಯಾರಿಸಲಿ. ಆಗ ಅವನ ಬುದ್ಧಿ ಮತ್ತು ಕೈಕಾಲುಗಳ ಬೆಳವಣಿಗೆ ಏಕಕಾಲಕ್ಕೆ ಆಗುವದು.

ಮೂಲ ಶಿಕ್ಷಣದಲ್ಲಿ ಕೆಲಸ ಮತ್ತು ಆಟವೆಂದು ಎರಡು ವಿಭಾಗಗಳಿವೆ. ಮಗುವಿಗಂತೂ ಎಲ್ಲವೂ ಆಟವೇ ಆಟ. ಮುಂದೆ ಹೋದರೆ ಅವನ ಇಡಿ ಆಯುಷ್ಯವೂ ಆಟವೇ ಆಗುತ್ತದೆ. ನಾನು ಅನೇಕ ವರ್ಷಗಳಿಂದ ಹೀಗೆಯೆ ಸಾಗುತ್ತ ಬಂದಿದ್ದೇನೆ. ನನಗೆ ಯಾವ ಹೊತ್ತಿಗೂ ಇದೀಗ ಆಟದ ಸಮಯ ನಡೆ, ಆಡೋಣ, ಎನಿಸುವದಿಲ್ಲ. ನನ್ನ ಪಾಲಿಗೆ ಬರೆಯುವದೂ ಆಟವೆ. ನನ್ನ ಮನಸಿನ ನೂತನ ಶಿಕ್ಷಣದ ಹುಡುಗರು ಆಡುತ್ತಾಡುತ್ತ ಕಲಿಯುವರು.

–ಮೋ. ಕ. ಗಾಂಧಿ

(೧೨-೩-೪೬ನೆ ದಿನ ಸೇವಾಗ್ರಾಮದಲ್ಲಿ ಶಿಕ್ಷಕರ ಮುಂದೆ ಗಾಂಧೀಜಿ ಕೆಲ ಮಾತುಗಳನ್ನಾಡಿದ್ದರು. ಇದು ಅದರ ಸುಧಾರಿಸಿದ ಪ್ರತಿ.)

ಪ್ರಶ್ನೆ—ಪೆಟ್ಟಿಗೆ

ಪ್ರಶ್ನೆ— ಸೈನ್ಯದಲ್ಲಿದ್ದುಕೊಂಡು ರಚನಾತ್ಮಕ ಕಾರ್ಯವನ್ನು ಯಾವ ಬಗೆಯಿಂದ ಮಾಡಬಹುದು ?

ಉತ್ತರ— ಸೈನ್ಯದಲ್ಲಿದ್ದವರು ರಾಟೆಯನ್ನು ತಿರುಗಿಸಬಲ್ಲರು. ಅಲ್ಲದೆ ಅರಳೆಯಿಂದಾಗುವ ಎಲ್ಲ ಕೆಲಸವನ್ನೂ ಮಾಡಬಲ್ಲರು. ಕಾಗದ ಮಾಡುವ ಕೆಲಸವನ್ನೂ ಅವರು ಮಾಡಬಲ್ಲರು ಸಮಯ ಸಿಕ್ಕಾಗೆಲ್ಲ ಬೇರೆ ಬೇರೆ ಬಗೆಯ ಗ್ರಾಮೋದ್ಯೋಗಗಳನ್ನು ನಿರ್ವಹಿಸಬಲ್ಲರು. ಯುದ್ಧವಿಲ್ಲದಾಗಂತೂ ಸೈನಿಕರಿಗೆ ಸಮಯ ಸಿಕ್ಕೇಸಿಕ್ಕುವದು. ಮತ್ತು ಯುದ್ಧ ನಡೆದಾಗಲೂ ಎಲ್ಲರೂ ಅದರಲ್ಲಿ ಧುಮುಕುವರೆಂದಲ್ಲ, ಧುಮುಕುವದೂ ಇಷ್ಟವಲ್ಲ, ಕೆಲಸದ ಮೇಲೆ ಬರಲು ಕೇಳಿದಾಗ ಹೋಗುವಂಥ ಸಿದ್ಧತೆ ಇರತಕ್ಕದ್ದು. ಹಿಂದುಸ್ತಾನದ ಸ್ವಾತಂತ್ರ್ಯಕ್ಕಾಗಿ ಯಾವ ಯಾವ ಕೆಲಸಗಳನ್ನು ಮಾಡತಕ್ಕದ್ದೊ ಅದರ ಅಭ್ಯಾಸವನ್ನೆಲ್ಲ ಅವರು ಮಾಡಬಲ್ಲರು. ಎರಡೂ ಲಿಪಿಗಳಲ್ಲಿ ರಾಷ್ಟ್ರಭಾಷೆಯನ್ನು ಬರೆಯಬಲ್ಲರು.

ಇದೆಲ್ಲದರ ಹಿಂದೆ ಸ್ವಾತಂತ್ರ್ಯದ ಹಂಬಲ ಮತ್ತು ತಾವೊಬ್ಬರೆ ಉಳಿದರೂ ತಮ್ಮ ಅಭಿಪ್ರಾಯಕ್ಕೆ ಬದ್ಧರಾಗುಳಿಯುವದು ಮತ್ತು ಅದರಂತೆ ಆಚರಿಸುವ ಧೈರ್ಯವಿರತಕ್ಕದ್ದು. ಇದರಲ್ಲಿ ಸೈನ್ಯದ ಶಿಸ್ತಿಗೂ (ಶಾಸನ) ಯಾವದೇ ಬಗೆಯ ಬಾಧೆಯುಂಟಾಗದು. ಶಿಸ್ತು ಮುರಿದ ಬಳಿಕವೂ ನೋಕರಿಯ ಮೇಲೆ ಕಾಯಂವುಳಿಯುವದು ಧರ್ಮವೆಂಬದು ನನ್ನ ವಿಚಾರ ಶ್ರೇಣಿಯಲ್ಲಿ ಬರುವುದಿಲ್ಲ. ಗೋಪ್ಯವಾಗಿ ಏನಾದರೂ ಮಾಡುವದು ಸಾಧ್ಯವೇ ಇಲ್ಲ. ಇವೆರಡೂ ನಿಯಮಗಳಿಗನುಸರಿಸಿ ನಡೆಯುವ ವ್ಯಕ್ತಿ ಮತ್ತು ಸ್ವಾತಂತ್ರ್ಯ ನಿಜವಾದ ರೀತಿಯಿಂದ ನಡೆಯಬಲ್ಲವೆಂದು ನಾನು ಭಾವಿಸುತ್ತೇನೆ.

ಪ್ರಶ್ನೆ:— ತಾಟು ಜಳಜಳವಾಗುವಂತೆ ಉಂಡು ಬಿಸುವದು ಕೀಳ್ತನ ಮತ್ತು ಸ್ವಲ್ಪದರೂ ಚಲ್ಲುವದು ದೊಡ್ಡಸ್ತನವೆಂದು ತಿಳಿಯಲಾಗುತ್ತದೆ. ಹೀಗೇಕಾಗಬೇಕು ? ಉಪವಾಸ ಬಳಲುವ ಈ ಸಮಯದಲ್ಲಿ ಇದನ್ನೆಂತು ಸಹಿಸಬೇಕು ?

ಉತ್ತರ— ಹೀಗೇಕಾಗುವುದೆಂಬದನ್ನು ಹುಡುಕುವ ಗೊಂದಲದಲ್ಲಿ ಬೀಳುವುದು ಸರಿಯೆಂದು ನನಗನಿಸುವದಿಲ್ಲ. ಮತ್ತು ಸರಿಯಾಗಿದ್ದರೂ ಇದನ್ನು ಹುಡುಕುವದರಲ್ಲಿ ನಾನು ವೇಳೆ ಕೊಡಲಾರೆ. ಎಲೆಯಲ್ಲಿ ಚಲ್ಲುವಷ್ಟು ಊಟಕ್ಕೆ ತೆಗೆದುಕೊಳ್ಳುವದು ಮತ್ತು ದೊಡ್ಡಸ್ತನವೆಂದು ಅದನ್ನು ಚಲ್ಲುವುದು ಮೂರ್ಖತನ ಹಾಗು ಅವಿವೇಕತನವೆಂದು ತಿಳಿಯಬೇಕಾಗುವುದು. ಇಂಥ ಕಠಿನ ಸಮಯದಲ್ಲಿ ಅನ್ನವನ್ನು ಹಾಳುಮಾಡುವದು ನಿರ್ದಯತನ. ಈ ಸಮಯದಲ್ಲಿ ಕ್ರಿಮಿಕೀಟಕಕ್ಕೂ ಹೊಟ್ಟೆತುಂಬುವಷ್ಟು ಉಣ್ಣುವ ಅಧಿಕಾರವಿಲ್ಲ. ಎಲೆ ಸ್ವಚ್ಛಮಾಡಿ ಏಳುವದರಲ್ಲಿ ಬಹಳ ವಿವೇಕ ಮತ್ತು ಸಭ್ಯತೆ ಇದೆಂದು ನನಗನಿಸುತ್ತದೆ. ಅದರಿಂದ ವೇಳೆ ಉಳಿಯುವದು ಮತ್ತು ತಾಟು ತೊಳೆಯುವವರ ಪರಿಶ್ರಮವೂ ಉಳಿಯುವದು. ತಾಟಿನಲ್ಲಿ ಅವಶ್ಯವಿದ್ದುದಕ್ಕಿಂತ ಹೆಚ್ಚು ಬಡಿಸಿದ್ದಾದರೆ ಊಟ ಪ್ರಾರಂಭ ಮಾಡುವ ಮೊದಲು ತಮಗೆ ಹೆಚ್ಚಾದುದನ್ನು ಬೇರೆ ಪಾತ್ರೆಯಲ್ಲಿ ತೆಗೆದಿಡುವುದು ವಿವೇಕವೆಂದು ನಾನು ತಿಳಿಯುತ್ತೇನೆ ಮತ್ತು ನನ್ನ ಅಭಿಪ್ರಾಯ ಈ ಬಗೆಯಾಗಿರುವದು. ಬಡಿಸುವವರು ಅತಿಥಿಗಳಿಗೆ ರುಚಿಸುವಂಥವನ್ನು ಮತ್ತು ಅವಶ್ಯವಿದ್ದಷ್ಟು ಮಾತ್ರ ಬಡಿಸತಕ್ಕದ್ದು. ಗೊತ್ತಿದ್ದವರು ಅತಿಥಿಗಳಿಗೆ ಏನು ಬೇಕೆಂಬುದನ್ನು ಮೊದಲೆ ತಿಳಿದುಕೊಳ್ಳುವರು ಮತ್ತು ಅದಕ್ಕನುಸಾರವಾಗಿ ಎಲ್ಲ ಸಾಮಾನುಗಳನ್ನು ಅವರ ಕಡೆಗೆ ಕಳಿಸಿಕೊಡುವರು.

ಪ್ರಶ್ನೆ— ರಕ್ತದಿಂದ ಪತ್ರ ಬರೆಯುವದು ಮತ್ತು ತಿಲಕ ಹಚ್ಚುವದರ ಗಾಳಿ ಇತ್ತೀಚೆ ಬೀಸಹತ್ತಿದೆ. ಈ ಪ್ರಥೆ ಬಿಟ್ಟುಗೊಡುವಂತಹದಿಲ್ಲವೆ ?

ಉತ್ತರ—: ನಾನಂತೂ ಈ ಪ್ರಥೆಗೆ ಪಾಶವೀ ವೃತ್ತಿಯಿಂದು ತಿಳಿಯುತ್ತೇನೆ. ತಮ್ಮ ರಕ್ತವನ್ನು ಕೊಡುವದರಲ್ಲಿ ಕಷ್ಟವೇನೂ ಇಲ್ಲ. ಇತ್ತೀಚೆ ಇಂಥ ಎಲ್ಲ ಕ್ರಿಯೆಗಳು ದುಃಖ ಕೊಡದೆ ಮಾಡಲ್ಪಡುತಿವೆ. ಬಹಳ ರಕ್ತಕೊಡುವ ಪ್ರಸಂಗ ಬಂದಾಗ ರಕ್ತ ಕೊಡುವವರ ಬಲ ಕುಂದುವದು. ತಮ್ಮ ರಕ್ತದಿಂದ ತಿಲಕ ಹಚ್ಚುವುದರಲ್ಲಿ ಮತ್ತು ರಕ್ತದ ಬಿಂದುವಿನಿಂದ ಸಹಿ ಮಾಡುವದರಲ್ಲಿ ಅಂಥದೇನು ದೊಡ್ಡಸ್ತನವಿಲ್ಲ, ತ್ಯಾಗವಿಲ್ಲ, ದುಃಖಸೇವನವೂ ಇಲ್ಲ. ತತ್ಪ್ರತಿಯಾಗಿ ವಿಚಾರಹೀನ ಹುಚ್ಚುತನವಿದೆ. ಅದನ್ನು ಬಿಟ್ಟುಗೊಡುವದು ಇಷ್ಟವಾಗಿದೆ. ಇಷ್ಟೇ ಅಲ್ಲದೆ ಇದನ್ನು ನಿಲ್ಲಿಸುವದು ಧರ್ಮವಾಗಿರುವದು. ಯಾವ ಧುರೀಣರೂ ಈ ಕಾಡುಪ್ರಥೆಗೆ ವಶವಾಗದಿರುವುದು ಸರಲವಾದ ಮಾರ್ಗವಾಗಿದೆ.

ಮೊ. ಕ. ಗಾಂಧಿ

(ಗುಜರಾಥಿಯಿಂದ)

ರಚನಾತ್ಮಕ ಕಾರ್ಯ ಮತ್ತು ಸಮಗ್ರ ಗ್ರಾಮಸೇವೆ

ಜನವರಿ ೨೮ ಕ್ಕೆ ಮದ್ರಾಸಿನಲ್ಲಿ ರಚನಾತ್ಮಕ (ವಿಧಾಯಕ) ಕಾರ್ಯಕರ್ತರ ಸಭೆಯೊಂದು ಸೇರಿತ್ತು ಅಲ್ಲಿ ಗಾಂಧೀಜಿಗೆ ಕೇಳಲ್ಪಟ್ಟ ಎರಡು ಪ್ರಶ್ನೆಗಳನ್ನೂ ಅವುಗಳ ಉತ್ತರಗಳನ್ನೂ ಈ ಕೆಳಗೆ ಕೊಡಲಾಗಿದೆ:—

ಪ್ರಶ್ನೆ— ರಚನಾತ್ಮಕ ಕಾರ್ಯಕ್ರಮದ ಒಂದು ಅಂಗವನ್ನು ಹಿಡಿದುಕೊಂಡು ಕುಳಿತವನು ಅದರ ಇತರ ಅಂಗಗಳಲ್ಲಿಯೂ ಕೈ ಹಾಕಬಹುದೆ ? ಅನೇಕ ವಿಷಯಗಳಲ್ಲಿ ಕೈಹಾಕುವದು ಒಳಿತಾದೀತೆ ? ಹಾಗಿದ್ದರೆ ಎಲ್ಲವನ್ನೂ ಅವನು ಹೇಗೆ ಮಾಡಬೇಕು ?

ಉತ್ತರ— ರಚನಾತ್ಮಕ ಕಾರ್ಯಕ್ರಮದಲ್ಲಿ ೧೮ ಸಂಗತಿಗಳು ತುಂಬಿವೆ. ಚರಕವೇ ಅದರ ಮಧ್ಯಬಿಂದು. ಪ್ರತಿಯೊಬ್ಬ ಕಾರ್ಯಕರ್ತನಿಗೂ ಚರಕದ ಬಗೆಗೆ ಪೂರ್ಣವಾದ ತಿಳಿವು ಇರತಕ್ಕದ್ದು. ಅದೂ ಅಲ್ಲದೆ ಒಬ್ಬ ಕಾರ್ಯಕರ್ತನು ಕಾಗದ ತಯಾರಿಸುವದನ್ನು ತನ್ನ ಮುಖ್ಯ ವೃತ್ತಿಯಾಗಿ ಮಾಡಿಕೊಳ್ಳುತ್ತಾನೆಂದು ತಿಳಿಯೋಣ. ಆದರಿಂದಲೇ ಅವನ ಹೊಟ್ಟೆ ತುಂಬಬೇಕಾಗಿದ್ದರೆ ಅವನಿಗೆ ಬೇರೆ ಕೆಲಸಗಳಿಗಾಗಿ ಬಹಳ ಸಮಯ ಉಳಿಯಲಾರದು. ಆದರೂ ಗ್ರಾಮ ಶುಚಿತ್ವದ ಕೆಲಸವನ್ನು ಅವನು ಮಾಡಬಲ್ಲವನಾಗಿಯೆ ಇರುವನು. ಜಡ್ಡಾದವರ ಶುಶ್ರೂಷೆಯನ್ನು ಪೂರ್ಣವಾಗಿ ಅವನು ಮಾಡಲಾರದೆ ಹೋದರೂ ಕೆಲವು ಸಲಹೆ ಸೂಚನೆಗಳನ್ನು ಈ ವಿಷಯದಲ್ಲಿ ಜನರಿಗೆ ಕೊಡಬಲ್ಲನು. ಯಾರಾದರೊಬ್ಬನು ಚರಕವನ್ನೆ ತನ್ನ ಕೆಲಸವನ್ನಾಗಿ ಮಾಡಿಕೊಂಡು ಅದರಿಂದಲೇ ಹೊಟ್ಟೆ ಹೊರೆದುಕೊಳ್ಳ ಬಯಸಿದರೆ ಅವನು ಹಾಗೆ ಮಾಡಬಹುದು. ಚರಕದಿಂದ ಹೊಟ್ಟೆ ತುಂಬಿಸಿಕೊಳ್ಳುವದು ಸಾಧ್ಯವಿದೆ. ಮತ್ತು ಅದರೊಡನೆ ಬೇರೆ ಸೇವಾಕಾರ್ಯಗಳನ್ನು ಮಾಡಲವಕಾಶವಿದೆಯೆಂಬಲ್ಲಿ ನನಗೆ ಏನೂ ಸಂದೇಹವಿಲ್ಲ. ಪ್ರತಿಯೊಬ್ಬ ಕಾರ್ಯಕರ್ತನೂ ಚರಕ ತಿರುಗಿಸುವದಲ್ಲದೆ ಬೇರೆ ಯಾವ ಯಾವ ಕಾರ್ಯಗಳನ್ನು ತಾನು ಮಾಡಬೇಕೆಂಬುದನ್ನು ನಿರ್ಧರಿಸಿಕೊಳ್ಳಬೇಕು. ಆದರೆ ಅವನು ಏನೇ ಮಾಡಲಿ ಜ್ಞಾನಪೂರ್ವಕ ಮಾಡಬೇಕು. ಚರಕವನ್ನು ಜ್ಞಾನಪೂರ್ವಕ ತಿರುಗಿಸಬೇಕಾದರೆ ಅವನಿಗೆ ನೂಲುವದರ ಹಿಂದು ಮುಂದಿನ ಸಮಸ್ತ ಕ್ರಿಯೆಗಳ ಪರಿಜ್ಞಾನವಿರುವದವಶ್ಯ. ಇದಲ್ಲದೆ ರಚನಾತ್ಮಕ ಕಾರ್ಯಕ್ರಮದ ಇತರ ವಿಷಯಗಳ ಸಂಪೂರ್ಣ ತಿಳಿವು ಅಲ್ಲದಿದ್ದರೂ ಸಾಧಾರಣ ಜ್ಞಾನವಂತೂ ಅವನಿಗೆ ಇದ್ದೇ ಇರತಕ್ಕದ್ದು. ಒಬ್ಬ ಖಗೋಲ ವಿಜ್ಞಾನಿಗೆ ಇತರ ವಿಜ್ಞಾನಗಳ ಪರಿಚಯ ಏನೂ ಇಲ್ಲದೆ ಹೋದರೆ ಅವನಿಗೆ ಖಗೋಲ ವಿದ್ಯೆಯೂ ಪೂರ್ಣ ತಿಳಿಯದಂತಿಲ್ಲ. ಆದುದರಿಂದ ನೀವು ರಚನಾತ್ಮಕ ಕಾರ್ಯಕ್ರಮದ ಯಾವ ಅಂಗಗಳನ್ನು ನಿಮ್ಮದಾಗಿ ಮಾಡಿಕೊಂಡಿರುವಿರೋ ಅದನ್ನು ಪೂರ್ಣವಾಗಿ ಮಾಡಿರಿ. ಉಳಿದವುಗಳಿಗೆ ಸಮಯವಿದ್ದರೆ ಮಾಡಿರಿ, ಇಲ್ಲದಿದ್ದರೆ ಬಿಡಿರಿ.

ಪ್ರಶ್ನೆ— ನಿಮ್ಮ ಕಲ್ಪನೆಯ ಸಮಗ್ರ ಸೇವೆಯ ಪೂರ್ಣ ಅರ್ಥ ಏನು ? ಈ ಕೆಲಸಕ್ಕೆ ನಾವು ನಮ್ಮನ್ನು ಹೇಗೆ ಯೋಗ್ಯರಾಗಿ ಮಾಡಿಕೊಳ್ಳಬೇಕು ?

ಉತ್ತರ— ೧೮ ವಿಧದ ರಚನಾತ್ಮಕ ಕಾರ್ಯಕ್ರಮದಲ್ಲಿ ಸಮಗ್ರ ಸೇವೆಯೂ ಬಂದುಬಿಡುತ್ತದೆ ಹಳ್ಳಿಯಲ್ಲಿ ಎಷ್ಟು ಜನರಿರುವರೋ ಅವರೆಲ್ಲರ ಗುರುತಿರುವದು, ಅವರಿಗೆ ಬೇಕಾದ ಸೇವೆ ಕೊಡುವದು, ಅರ್ಥಾತ್ ಅದಕ್ಕಾಗಿ ಸಾಧನಗಳನ್ನು ಜೋಡಿಸಿಕೊಳ್ಳುವದು ಮತ್ತು ಅವರಿಗೆ ಆ ಕೆಲಸ ಮಾಡಲು ಕಲಿಸಿಕೊಡುವದು, ಹೊಸ ಕಾರ್ಯಕರ್ತರನ್ನು ಸಿದ್ಧಗೊಳಿಸುವದು, ಇತ್ಯಾದಿ. ಗ್ರಾಮನಿವಾಸಿಗಳ ಮೇಲೆ ಗ್ರಾಮಸೇವಕನು ಬೀರುವ ಪ್ರಭಾವದ ಪರಿಣಾಮವಾಗಿ ಅವರೇ ಸಹಾಯವನ್ನು ಕೇಳುತ್ತ ಅವನ ಬಳಿ ಬರವಂತಾಗಬೇಕು ಮತ್ತು ಅದಕ್ಕೆ ಬೇಕಾದ ಸಾಧನಗಳನ್ನೂ ಕಾರ್ಯಕರ್ತರನ್ನೂ ಒಟ್ಟು ಹಾಕಲಿಕ್ಕೂ ಅವರು ಅವನೊಡನೆ ಸಂಪೂರ್ಣ ಸಹಕರಿಸುವಂತಾಗಬೇಕು. ನಾನು ಒಂದು ಹಳ್ಳಿಯಲ್ಲಿ ಗಾಣ ಇಡಲು ಹೊರಟರೆ ಗಾಣಕ್ಕೆ ಸಂಬಂಧಿಸಿದ ಎಲ್ಲ ಕೆಲಸಗಳನ್ನು ಮಾಡಿಯೇ ಬಿಡುವೆ. ಆದರೆ ನಾನು ೧೫, ೨೦ ರೂಪಾಯಿ ಗಳಿಸುವ ಎಣ್ಣೆ ಗಾಣಿಗನಾಗಲೊಲ್ಲೆ. "ಮಹಾತ್ಮಾ ಗಾಣಿಗ" ನಾಗುವೆನು. "ಮಹಾತ್ಮಾ" ಶಬ್ದವನ್ನು ನಾನು ವಿನೋದದಲ್ಲಿ ಉಪಯೋಗಿಸಿದ್ದೇನೆ. ಅರ್ಥವಿಷ್ಟೆ—ಹಳ್ಳಿಗರನ್ನು ಆಶ್ಚರ್ಯಚಕಿತರನ್ನಾಗಿ ಮಾಡುವಷ್ಟು ಸಿದ್ಧಿಯನ್ನು ಗಾಣಿಗತನದಲ್ಲಿ ನಾನು ಸಂಪಾದಿಸುವೆನು. ಗೀತೆ ಓದುವ, ಕುರಾಣ ಶರೀಫ ಓದುವ, ಅನೇಕ ಹುಡುಗರಿಗೆ ಶಿಕ್ಷಣವೀಯಬಲ್ಲ ಗಾಣಿಗನಾಗುವೆನು. ಸಮಯದ ಅಭಾವದಿಂದ ಅವನು ಹುಡುಗರಿಗೆ ಶಿಕ್ಷಣವೀಯಲಾರದಿದ್ದರೆ ಆ ಮಾತು ಬೇರೆ. ಜನರು ಬಂದು ಹೇಳುವರು: "ಗಾಣಿಗ ಮಹಾಶಯರೆ, ನಮ್ಮ ಹುಡುಗರಿಗೆ ಕಲಿಸಲು ಒಬ್ಬ ಶಿಕ್ಷಕನನ್ನು ತಂದು ಕೊಡಿರಿ." ನಾನು ಹೇಳುವೆ: "ಶಿಕ್ಷಕನನ್ನೇನೋ ತಂದುಕೊಡುವೆ. ಆದರೆ ಅವನ ವೆಚ್ಚವನ್ನು ನೀವು ವಹಿಸಬೇಕು." ಅದಕ್ಕೆ ಅವರು ಸಂತೋಷದಿಂದ ಒಪ್ಪುವರು. ನಾನು ಅವರಿಗೆ ನೂಲಲು ಹೇಳಿಕೊಡುವೆ. ಆಗ ಅವರು ನೇಯುವದಕ್ಕೂ ಸಹಾಯಬೇಕೆನ್ನುವರು. ನಾನು ಶಿಕ್ಷಕನಂತೆ ನೇಯ್ದು ತೋರಿಸುವೆ. ಬೇಕಾದವರು ನೇಯುವದನ್ನೂ ಕಲಿಯುವರು. ಅವರಿಗೆ ಗ್ರಾಮ ಸ್ವಚ್ಛತೆಯ ಮಹತ್ವವನ್ನು ತಿಳಿ ಹೇಳುವೆ. ಆಗ ಅವರು ಸ್ವಚ್ಛತೆಗಾಗಿ ಭಂಗಿಯನ್ನು ಬೇಡುವರು. ನಾನನ್ನುವೆ: ನಾನು ಸ್ವತಃ ಭಂಗಿಯಿದ್ದೇನೆ. ಬನ್ನಿರಿ ಆ ಕೆಲಸವನ್ನೂ ನಿಮಗೆ ಕಲಿಸುವೆ. ಇದು ನನ್ನ ಸಮಗ್ರ ಸೇವೆಯ ಕಲ್ಪನೆ. ನೀವೆನ್ನಬಹುದು, ಈ ಯುಗದಲ್ಲೇನೂ ಇಂಥ ಗಾಣಿಗ ಹುಟ್ಟುವಂತಿಲ್ಲ: ನಾನೆನ್ನುವೆ, ಹಾಗಾದರೆ ಈ ಯುಗದಲ್ಲಿ ಹಳ್ಳಿಗಳು ಹೀಗೆಯೆ ಇರುವವುಗಳು.

ರಶಿಯಾದ ಗಾಣಿಗರನ್ನು ತೆಗೆದುಕೊಳ್ಳಿರಿ. ಎಣ್ಣೆಯ ಮಿಲ್ಲುಗಳನ್ನು ನಡೆಸುವರೂ ಗಾಣಿಗರೇ ತಾನೆ ? ಅವರ ಕೈಯಲ್ಲಿ ಹಣವುಂಟು. ಆದರೆ ಹಣಕ್ಕೇನು ಬೆಲೆ ? ಹಣವೆಂಬುದು ಮನುಷ್ಯನ ಕೈಯ ಹೊಲಸು ನಿಜವಾದ ಶಕ್ತಿ ಜ್ಞಾನದಲ್ಲಿರುವದು. ಅವರಲ್ಲಿ ನೈತಿಕ ಪ್ರತಿಷ್ಠೆಯೂ ನೈತಿಕ ಬಲವೂ ಇದೆ. ಆಗಲೇ ಎಲ್ಲರೂ ಅಂಥ ಮನುಷ್ಯನ ಸಲಹೆ ಕೇಳಲು ಹೋಗುವರು. ಇದು ನಿಮಗೆಲ್ಲರಿಗೂ ಗೊತ್ತು. ನೀವೆಲ್ಲರೂ ಅವರ ಅನುಕರಣವನ್ನು ನಿಮ್ಮ ಸ್ವಂತ ಶಕ್ತಿಗೆ ಅನುಗುಣವಾಗುವಂತೆ ಮಾಡಬಲ್ಲಿರಿ.

—ಸುಶೀಲಾ ನಯ್ಯರ

ಎರಡು ಗಮನಾರ್ಹ ಪ್ರಯೋಗಗಳು

ಸಾಮಾಜಿಕ ಉದ್ಧಾರದ ಕಾರ್ಯಕ್ರಮವನ್ನು ಯೋಜಿಸುವಾಗ ಯಾವುದನ್ನು ಮೂಲಭೂತವೆಂದೆಣಿಸಬೇಕು, ಯಾವುದಕ್ಕೆ ಮೊದಲಸ್ಥಾನವೀಯಬೇಕು ಎಂಬ ಪ್ರಶ್ನೆಗಳು ಕೆಲವೊಮ್ಮೆ ಹುಟ್ಟುವದುಂಟು. "ಆರೋಗ್ಯಚಕ್ರ" (The wheel of Health) ಎಂಬ ಪುಸ್ತಕದಲ್ಲಿ ಡಾ. ಜಿ. ಟಿ. ವೆಂಚ್, ಎಂ. ಡಿ, ಅವರು ಎರಡು ಗಮನಾರ್ಹ ಪ್ರಯೋಗಗಳನ್ನು ಬಣ್ಣಿಸಿದ್ದಾರೆ. ಆರೋಗ್ಯ ಧೋರಣೆಯಲ್ಲಿ ಆಹಾರ ವ್ಯವಸ್ಥೆಗಿಂತ ಮೊದಲು ಹೊಸ ಆರೋಗ್ಯಕರ ವಸತಿಗಳನ್ನು ಕಟ್ಟುವ ಮತ್ತು ದೈಹಿಕ ವ್ಯಾಯಾಮವನ್ನು ಸಂಘಟಿಸುವ ಪದ್ಧತಿ ಸದೋಷವೆಂದು ಆ ಪ್ರಯೋಗಗಳಿಂದ ಸಿದ್ಧವಾಗುತ್ತದೆ. ಮೊದಲನೆಯ ಪ್ರಯೋಗವನ್ನು ಸ್ಟಾಕಟನ್-ಆನ್ ಟೀಸ್‌ದಲ್ಲಿ ನಡೆಸಲಾಯಿತು.

ಸ್ಟಾಕಟನ್-ಆನ್-ಟೀಸ ಪ್ರಾಚೀನ ಸಂತೆಯ ಪಟ್ಟಣ, ೧೯೩೧ ರಲ್ಲಿ ಅದರ ಜನಸಂಖ್ಯೆ ೬೭,೭೨೨ ಇತ್ತು. ಜನಸಂಖ್ಯೆಯಲ್ಲಿ ೧೪ ರಿಂದ ೬೫ ವಯಸ್ಸಿನ ವರೆಗಿನ ಗಂಡಸರಲ್ಲಿ ನೂರಕ್ಕೆ ೪೦ ರಷ್ಟು ಜನ ನಿರುದ್ಯೋಗಿಗಳಾಗಿದ್ದರು. ಏಳೆಂಟು ವರ್ಷಗಳ ಕೆಳಗೆ ಸ್ಟಾಕಟನ್ ಪಟ್ಟಣದ ನಗರಸಭೆಯವರು ಹೊಲಸುಗೇರಿಗಳನ್ನು ಪರಿಷ್ಕರಿಸುವ ಕೆಲವನ್ನು ರಭಸದಿಂದ ಪ್ರಾರಂಭಿಸಿದರು. ಸುಧಾರಿಸಿದ ಮನೆಗಳನ್ನು ಕಟ್ಟುವ ಕಾರ್ಯಕ್ರಮವೂ ರಭಸದಿಂದ ತೊಡಗಿತು. ಇದರಿಂದ ಸ್ಟಾಕಟನ್-ಆನ್-ಟೀಸದ ಆರೋಗ್ಯ- ವೈದ್ಯಕೀಯ ಅಧಿಕಾರಿಗಳಾದ ಡಾ. ಜಿ. ಸಿ. ಎಂ. ಗಾನಿಗ್ಲ ಇವರಿಗೆ ಅದ್ವಿತೀಯವಾದ ಕೆಲ ನಿರೀಕ್ಷಣೆಗಳನ್ನು ಸಂಘಟಿಸಿ ಅಂಕಿ ಸಂಖ್ಯೆಗಳನ್ನು ಸಂಗ್ರಹಿಸುವ ಅವಕಾಶವೊದಗಿತು ಆ ಅಂಕೆ ಸಂಖ್ಯೆಗಳು ಆಹಾರದ ಪ್ರಥಮ ಮತ್ತು ಮೂಲಭೂತ ಮಹತ್ವವನ್ನು ಅಪ್ರತಿಭಟನೀಯವಾಗುವಂತೆ ಸಿದ್ಧಮಾಡಿದವು.

೧೯೨೭ ರಲ್ಲಿ ಹೊಸತಾಗಿ ಮಾಡಲ್ಪಟ್ಟ ಗೃಹವಸತಿ ಪರಿಶೀಲನೆಯ ಫಲವಾಗಿ ಪಟ್ಟಣದ "ಅನಾರೋಗ್ಯಕರ ಪ್ರದೇಶ"ವೆಂದು ಗುರುತಿಸಲಾದ ಅತಿ ದೊಡ್ಡ ಭಾಗಕ್ಕೆ "ನಂ. ೧ ಪ್ರದೇಶ" ಎಂದು ಹೆಸರಿಟ್ಟು, ಅದರಲ್ಲೊಂದು ಭಾಗವನ್ನು ಕೆಡವಿ, ಅದರ ನಿವಾಸಿಗಳನ್ನು ಹೊಸದಾಗಿ ಕಟ್ಟಲ್ಪಟ್ಟ ಆಧುನಿಕ ನಗರ ಸಭಾ ವಸತಿಗೆ ವರ್ಗಾಯಿಸುವ ನಿರ್ಣಯವಾಯಿತು. ಈ ಹೊಸ ವಸತಿಗೆ "ಮೌಂಟ್ ಪ್ಲೆಜೆಂಟ್" (ಆನಂದಗಿರಿ) ಎಂದು ಮನೋಹರವಾದ ಹೆಸರಿಡಲಾಗಿತ್ತು ! ೧೯೨೭ ರಲ್ಲಿ ನಂ. ೧ ಪ್ರದೇಶದಿಂದ ೧೫೨ ಸಂಸಾರಗಳನ್ನೊಳಗೊಂಡ ೭೧೦ ಜನರನ್ನು "ಆನಂದಗಿರಿ"ಗೆ ವರ್ಗಾಯಿಸಲಾಯಿತು. ನಂ. ೧ ಪ್ರದೇಶದಲ್ಲಿ ೨೮೯ ಸಂಸಾರಗಳ ೧೨೯೮ ವ್ಯಕ್ತಿಗಳು ಹಿಂದೆ ಉಳಿದರು.

ಹೊಸ ಪರಿಸ್ಥಿತಿ ಮತ್ತು ಹಳೆ ಪರಿಸ್ಥಿತಿ, ಒಳ್ಳೆಯ ವಸತಿ ಮತ್ತು ಹೊಲಸುಗೇರಿ ಇವುಗಳ ನಡುವೆ ಇರುವ ಭಿನ್ನತೆಯನ್ನು ಯಾರಿಗೂ ಸ್ಪುಟವಾಗಿ ಗೋಚರಿಸುವಂತೆ ಎತ್ತಿ ಹಿಡಿಯುವ ತಾರತಮ್ಯವಿತ್ತು ಇಲ್ಲಿ. "ಸ್ವಾಭಾವಿಕವಾಗಿ, ಆನಂದಗಿರಿಗೆ ವರ್ಗಾಯಿಸಿದ್ದರಿಂದ ಒಳ್ಳೆಯ ಸುಧಾರಣೆ ಪರಿಣಮಿಸಬಹುದೆಂದು ಎಲ್ಲರೂ ನಿರೀಕ್ಷಿಸಿದ್ದರು." ಆದರೆ ಆಶ್ಚರ್ಯಕರ ಸಂಗತಿಯೊಂದು ಜರಗಿತು. "ಆನಂದಗಿರಿಯ ನಿವಾಸಿಗಳ ಆರೋಗ್ಯ ಸುಧಾರಿಸುವ, ಅಥವಾ ಕನಿಷ್ಠ ಯಥಾಸ್ಥಿತಿ ಉಳಿಯುವ ಬದಲು, ಕೆಡುತ್ತಾ ಹೋಯಿತು. ಅದೇ ಹೊತ್ತಿಗೆ ಹೊಲಸುಗೇರಿಗಳಲ್ಲಿ ಉಳಿದವರಿಗೆ ಏನೂ ಆಗಲಿಲ್ಲ" ಎಂದು ಕಂಡುಬಂತು. ವರ್ಗಾಯಿಸಿದ್ದು ಆದನಂತರದ ೫ ವರ್ಷಗಳಲ್ಲಿ ಪಟ್ಟಣದ ಸರಾಸರಿ ಮರಣಸಂಖ್ಯೆ ೧೦೦೦ಕ್ಕೆ ೨೨ ಇತ್ತು. ಹೊಲಸುಗೇರಿಯ ಮರಣ ಸಂಖ್ಯೆ ೧೦೦೦ಕ್ಕೆ ೨೨ ಆಗಿತ್ತು. ಆನಂದಗಿರಿಯದು ೩೩.೫೫ ಆಯಿತು. "ಹಿಂದಿನ ಐದು ವರ್ಷಗಳಲ್ಲಿ ಇವೇ ಜನರ ಸರಾಸರಿ ಮರಣ ಸಂಖ್ಯೆಗಿಂತ ಈಗಿನ ಮರಣ ಸಂಖ್ಯೆ ೧೦೦ಕ್ಕೆ ೪೬ರಷ್ಟು ಬೆಳೆದುದು" ಮತ್ತೂ ಆಶ್ಚರ್ಯಕರವಾಗಿತ್ತು. ಇದು ನಿಜವಾದ ಹೆಚ್ಚಳವಾಗಿತ್ತು. ದೈವಾಯತ್ತವಾದ "ಹೆಚ್ಚು ಕಡಿಮೆಯ ಮೇರೆಗಿಂತಲೂ ಹೆಚ್ಚಿನ ಹೆಚ್ಚಳವಾಗಿತ್ತು."

ಇದಕ್ಕೆ ಕಾರಣವೇನು ? ಸುಧಾರಿಸಿದ ವಸತಿ ಸೌಕರ್ಯವೇ ? "ಮೊದಲಿಗಿಂತ ಒಳಿತಾದುದರಿಂದ ನಿಜವಾಗಿ ಕೆಟ್ಟ ಪರಿಣಾಮವಾಯಿತೆಂದು ಸಿದ್ಧವಾಗಿದ್ದು ಎಲ್ಲಾದರೂ ಉಂಟೆ?" ಇದು ಅರ್ಥವಿಲ್ಲದ್ದಾಗಿ ತೋರುತ್ತದೆ. ಡಾ. ಜಿ. ಸಿ. ಎಂ. ಗಾನಿಗ್ಲ ಅವರು ಈ ಸಮಸ್ಯೆಯನ್ನು ಬಿಡಿಸಿದರು. ಮನೆವಾರ್ತೆಯ ಆಯವ್ಯಯಗಳನ್ನು ಹೋಲಿಸಿ ಪರೀಕ್ಷಿಸಿದಾಗ ಹೊಲಸುಗೇರಿಯ ಪ್ರತಿ ಸಂಸಾರವು ವಾರಕ್ಕೆ ಸರಾಸರಿ ೪ ಶಿಲಿಂಗ ೮ ಪೆನ್ಸ ಬಾಡಿಗೆ ಕೊಡುತಿದ್ದುದು

(೯ನೇ ಪುಟ ನೋಡಿರಿ)

ಪುಂಡರೆದುರು ಸತ್ಯಾಗ್ರಹ

ಪುಂಡನು ಲೂಟಿ ಮಾಡಿದರೆ ಅವನ ಮುಂದೆ ಸತ್ಯಾಗ್ರಹಿ ಏನು ಮಾಡಬೇಕು? ಈ ಪ್ರಶ್ನೆ ಏಳಲೇಬಾರದು. ಅದರೆ ಒಬ್ಬ ಗೆಳೆಯರು ವಿನಯದಿಂದ ಈ ಪ್ರಶ್ನೆಯನ್ನು ಕಳಿಸಿ ಉತ್ತರ ಬಯಸಿದ್ದಾರೆ.

ಸತ್ಯಾಗ್ರಹದ ರಹಸ್ಯವನ್ನು ತಿಳಿದುಕೊಂಡವರಿದ್ದರೆ ಈ ಪ್ರಶ್ನೆ ಏಳಲೇ ಅರದು. ಯಾವುದನ್ನು ನಾವು ಸತ್ಯವೆಂದು ಭಾವಿಸುತ್ತೇವೊ ಅದರ ರಕ್ಷಣೆಯಲ್ಲಿ ಸತ್ತುಹೋಗುವುವೇ ಸತ್ಯಾಗ್ರಹದ ತಿರುಳು. ಲೂಟಿಗಾರನು ಬಂದರೆ ಮತ್ತು ನಾನು ಏಕಾಕಿಯಾಗಿದ್ದರೆ ಆತ್ಮರಕ್ಷಣೆ ಮಾಡಿಕೊಳ್ಳುತ್ತ ಸತ್ತುಹೋಗುವದೇ ನನ್ನ ಕರ್ತವ್ಯ. ಯಾವ ಮನುಷ್ಯನೂ ಇದಕ್ಕಿಂತ ಹೆಚ್ಚಿನದೇನನ್ನೂ ಮಾಡಲಾರ. ಖಡ್ಗ ಇಟ್ಟುಕೊಂಡವನು ಕತ್ತಿ ತಿರುಗಿಸಿ ಒಂದೆರಡು ತಲೆಗಳನ್ನು ಉರುಳಿಸಬಹುದಾದರೂ ಕೊನೆಗೆ ಅವನು ಶರಣು ಬರಲೇಬೇಕು ಇಲ್ಲವೆ ಹೋರಾಡುತ್ತ ಸಾಯಬೇಕು. ಸತ್ಯಾಗ್ರಹಿಯ ಖಡ್ಗವೆಂದರೆ ಅವನ ಪ್ರೇಮ ಹಾಗು ಅದರಿಂದ ಉತ್ಪನ್ನವಾದ ಆಗ್ರಹ. ಅದುದರಿಂದ ಅವನು ನೂರಾರು ಪುಂಡರು ಬಂದರೂ ಅವರನ್ನು ಬಂಧುಗಳೆಂದೇ ಬಗೆಯುವ; ಹೊಡೆಯಲಾರ— ಕೊಲ್ಲಲಾರ, ಅದರೆ ಹೌದು, ಅವರ ಕೈಯಿಂದ ಸಾಯುವ, ಸತ್ತು ಅಮರನಾಗುವ.

ಇದು ನೇರವಾದ ಸರಳ ಲೆಕ್ಕವಾಯಿತು. ಅದರೆ ದೊಡ್ಡ ವಸತಿಯಲ್ಲಿ ಒಬ್ಬನೇ ಸತ್ಯಾಗ್ರಹಿ ಹೇಗೆ ಜಯ ದೊರಕಿಸಿಕೊಳ್ಳಬಲ್ಲ? ಮುಂಬಯಿಯಲ್ಲಿ ನೂರಾರು ಜನರ ಗುಂಪು ಏರಿಬಂತು, ಮತ್ತು ಸೊತ್ತುಗಳನ್ನು ಲೂಟಿ ಮಾಡಿತು, ಕೊಳ್ಳಿ ಹಚ್ಚಿತು. ಅಲ್ಲಿ ಒಬ್ಬಂಟಿಗ ಸತ್ಯಾಗ್ರಹಿ ಪುರಿಗಡಲೆಯಾಗಿ ಹೋದಾನು. ಪ್ರಶ್ನಕಾರ ಹೀಗೆ ತರ್ಕ ಮಾಡಿದ್ದಾನೆ.

ನನ್ನದಂತೂ ಒಂದೇ ಉತ್ತರ, ಒಬ್ಬನಿರಲಿ, ಅನೇಕರಿರಲಿ, ಗುಂಪಿನಿಂದ ಹೆದರಿ ಬಿದ್ದು ಓಡಿಹೋಗುವದು ಸತ್ಯಾಗ್ರಹಿಯಿಂದ ಸಾಧ್ಯವಿಲ್ಲ. ಹೋರಾಡುತ್ತ ಮಡಿದರ ಸತ್ಯಾಗ್ರಹಿ ತನ್ನ ಪಾಲಿನ ಕರ್ತವ್ಯ ಪೂರೈಸಿದಂತೆ ಎಂದು ಹೇಳಬಹುದು. ಶಸ್ತ್ರಾಸ್ತ್ರಗಳ ಹೋರಾಟದಲ್ಲಿಯೂ ಇದೇ ನಿಯಮ ಅನ್ವಯಿಸುತ್ತದೆ. ಸತ್ಯಾಗ್ರಹದಲ್ಲಿ ಇದು ಹೆಚ್ಚಾಗಿ ಅನ್ವಯಿಸುವದು. ಒಬ್ಬನ ಬಲಿದಾನದಿಂದ ಅನೇಕರ ಬಲಿದಾನ ಪ್ರಕಟವಾಗಬೇಕು. ಒಬ್ಬನ ಬಲಿದಾನದಿಂದಲೇ ಬಹಳ ದೊಡ್ಡ ಫಲ ದೊರಕುವದೂ ಸಾಧ್ಯವುಂಟು. ಅದರೆ ಪರಿಣಾಮದ ಆಶೆಯೇ ಕೆಟ್ಟದೆಂದು ತಿಳಿದುಕೊಳ್ಳಬೇಕು. ಇಲ್ಲಿ ನಾನು ಕೇವಲ ಸತ್ಯಾಗ್ರಹದ ಶಕ್ಯತೆಯನ್ನು ತೋರಿಸಿಕೊಟ್ಟಿದ್ದೇನೆ. ಪರಿಣಾಮವನ್ನು ಮೋಹವೆಂದು ತಿಳಿದುಕೊಳ್ಳಬೇಕು.

ನನ್ನ ದೃಷ್ಟಿಯಲ್ಲಂತೂ ಪ್ರತಿಯೊಂದು ಯುಗದಲ್ಲಿ, ಅದೂ ಈ ಯುಗದಲ್ಲಿ ಇನ್ನೂ ವಿಶೇಷವಾಗಿ, ಪ್ರತಿಯೊಬ್ಬ ಸ್ತ್ರೀ-ಪುರುಷನೂ ತನ್ನನ್ನು ರಕ್ಷಿಸಿಕೊಳ್ಳುವ ಶಿಕ್ಷಣವನ್ನು ಪಡೆಯಲೆ ಬೇಕು. ಪಶ್ಚಿಮ ದೇಶಗಳಲ್ಲಿ ಶಸ್ತ್ರಗಳಿಂದ ಆತ್ಮರಕ್ಷಣ ಮಾಡಿಕೊಳ್ಳಲಾಗುತ್ತಿದೆ. ಅಲ್ಲಿ ಪ್ರತಿಯೊಂದು ವಿಭಾಗದಲ್ಲಿಯೂ ಗಂಡಸರಿಗೆ ನಿರ್ದಿಷ್ಟಾವಧಿಯವರೆಗೆ ಸರಕಾರದಿಂದ ಶಸ್ತ್ರಾಸ್ತ್ರಗಳ ತಿಳಿವಳಿಕೆ ಮತ್ತು ಅವುಗಳ ಉಪಯೋಗದ ಶಿಕ್ಷಣವನ್ನು ಕೊಡಲಾಗುತ್ತದೆ. ಸತ್ಯಾಗ್ರಹದ ಶಿಕ್ಷಣ ಯುವಕ, ಮುದುಕ ಮತ್ತು ಸ್ತ್ರೀ ಪುರುಷರೆಲ್ಲರಿಗೂ ಅನ್ವಯಿಸುತ್ತದೆ. ಅದಕ್ಕಾಗಿ ಯಾರನ್ನೂ ನಿರುಪಾಯವಾಗಿ ಮಾಡುವ ಅವಶ್ಯಕತೆಯುಂಟಾಗುವದಿಲ್ಲ. ಈ ಶಿಕ್ಷಣದಲ್ಲಿ ಮನಸ್ಸೆ ಮುಖ್ಯ ದೇಹವಲ್ಲ. ಮನಸನ್ನು ನಿರ್ಬಂಧಿಸಿ ಮಾಡಿ ಶಿಕ್ಷಣ ಕೊಡುವ ಮಾತು ಯಾರೂ ಕೇಳಿಲ್ಲ. ವಾತಾವರಣದ ಪ್ರಭಾವ ಮನಸ್ಸಿನ ಮೇಲಾಗುವದೆಂಬುದು ಬೇರೆ ಮಾತು.

ಇದರಿಂದ ಅಂಗಡಿಯಿಟ್ಟ ವ್ಯಾಪಾರಿಯಿಂದ ಹಿಡಿದು ದುಡಿಮೆ ಉಳುಮೆ ಸಾಗಿಸುವ ರೈತ ಮತ್ತು ಲೇಖನಿ ಓಡಿಸುವ ಕಾರಕೂನನ ವರೆಗೆ ಸ್ವಲ್ಪದರಲ್ಲಿ ಎಲ್ಲರೂ ತಮ್ಮನ್ನು ರಕ್ಷಿಸಿಕೊಳ್ಳಲು ಸತ್ಯಾಗ್ರಹದ ಶಿಕ್ಷಣ ಪಡೆಯುವದು ಧರ್ಮವೆಂದು ತಿಳಿದುಕೊಳ್ಳಬೇಕೆಂದು ಸಿದ್ಧವಾಗುತ್ತದೆ.

ಸತ್ಯಾಗ್ರಹ ಯಾವಾಗಲೂ ಶಸ್ತ್ರಾಗ್ರಹಕ್ಕಿಂತ ಮೇಲಿನದು. ಇದು ಅಂದು ತೋರಿಸುವ ಸಂಗತಿಯಲ್ಲ, ಮಾಡಿಯೆ ತೋರಿಸಬಹುದಾದುದು. ಇದು ಶಕ್ತಿವಂತನ ಆಯುಧ, ಅವನ ಭೂಷಣ— ಬಲಹೀನನದು ಅಲ್ಲವೇ ಅಲ್ಲ. ಇಲ್ಲಿ ಮನಸ್ಸು ಮತ್ತು ಆತ್ಮದ ಬಲವನ್ನೇ ತೆಗೆದುಕೊಳ್ಳಬೇಕು ಹೊರತು ದೇಹದ ಬಲವನ್ನಲ್ಲ.

ಇದರ ಇತಿಮಿತಿಯನ್ನೂ ಅರಿತುಕೊಳ್ಳಬೇಕಾಗಿದೆ. ಸುಳ್ಳಿಗಾಗಿ ಸತ್ಯಾಗ್ರಹದ ಉಪಯೋಗ ಎಂದಿಗೂ ಸಾಗದು. ಹೀಗಿರುವಾಗ ಸತ್ಯಾಗ್ರಹಿಗಳ ಸಾಯಲು ಸಿದ್ಧವಿರುವ ತುಕ್ಕಡಿಯೊಂದು ಪ್ರತಿಹಳ್ಳಿಯಲ್ಲಿಯೂಗಲ್ಲಿಯಲ್ಲಿಯೂ ನಿರ್ಮಾಣವಾಗಬೇಕು. ಆ ತುಕಡಿಯಲ್ಲಿ ಎಲ್ಲರಿಗೂ ಪರಿಚಿತರಾದವರೇ ಇರಬೇಕು. ಅಪರಿಚಿತರಾರೂ ಇರಬಾರದು ಇದು ಶಸ್ತ್ರಾಗ್ರಹಿಗೆ ತೀರ ವಿಪರೀತವಾದ ರೀತಿ ಸರಕಾರದ ಸೈನ್ಯ ಭರತಿಯಲ್ಲಿ ಪರಿಚಿತ ಅಪರಿಚಿತರೆಲ್ಲರೂ ನುಗ್ಗಬಹುದು. ಸತ್ಯಾಗ್ರಹದ ಭರತಿಯಲ್ಲಿ ಸತ್ಯ ಅಹಿಂಸೆಗಳನ್ನು ಪಾಲಿಸುವವರು ಮಾತ್ರ ದಕ್ಕಬಲ್ಲರು. ಅದುದರಿಂದ ಎಲ್ಲರಿಗೂ ಗುರುತಿದ್ದವರೇ ಅದರಲ್ಲಿ ಸೇರಬೇಕು.

ಪುಣೆ — ಮೋ. ಕ. ಗಾಂಧಿ

೫-೩-೪೬. (ಗುಜರಾತಿಯಿಂದ)

ಹಿಂದೂ-ಮುಸಲ್ಮಾನೀ ಚಹಾ ಇತ್ಯಾದಿ

ನಿಲ್ದಾಣಗಳಲ್ಲಿ ಹಿಂದೂ-ಮುಸಲ್ಮಾನ ಚಹಾ ಮೊದಲಾದವುಗಳು ಬೇರೆಬೇರೆಯಾಗಿ ಮಾರುತ್ತವೆ. ಎಷ್ಟೋ ವೇಳೆ ಉಣ್ಣುವ ಜಾಗೆಗಳೂ ಬೇರೆಯೆ ಇರುತ್ತವೆ. ಕೆಲವು ಬಾರಿ ಹರಿಜನರಿಗೆ ಸ್ಥಳವೇ ಸಿಗುವದಿಲ್ಲ. ಇವೆಲ್ಲ ನಮ್ಮ ದುರ್ದಶೆಯ ಚಿಹ್ನಗಳು, ಇಂಗ್ಲೀಷ ಪ್ರಭುತ್ವದ ಕಲಂಕಗಳು. ಸರಕಾರ,ಧರ್ಮದ ವಿಷಯಗಳಲ್ಲಿ ಕೈಹಾಕದಿರುವದನ್ನು ನಾವು ತಿಳಿದುಕೊಳ್ಳಬಲ್ಲೆ. ಅದರೆ ನಿಲ್ದಾಣಗಳಲ್ಲಿ ವಿವಿಧ ಧರ್ಮಗಳ ಸಲುವಾಗಿ ಬೇರೆ ಬೇರೆ ಚಹಾ-ನೀರುಗಳ ವ್ಯವಸ್ಥೆಯಿಡುವದು ಭೇದಭಾವದ ಮೇಲೆ ಮುದ್ರೆಯೊತ್ತುವದೇ ಸರಿ. ರೇಲ್ವೆ ಮತ್ತು ರೇಲ್ವೆ ನಿಲ್ದಾಣಗಳು ಜನರಿಗೆ ತಮ್ಮ ದೋಷಗಳನ್ನು ದೂರ ಮಾಡಿಕೊಳ್ಳಲು, ಅವರಿಗೆ ಐಕ್ಯ, ಸಮಾಜದಲ್ಲಿ ಸಭ್ಯ ಆಚಾರ ಮತ್ತು ಸ್ವಚ್ಛತೆ ಮೊದಲಾದವುಗಳನ್ನು ಕಲ್ಪಿಸಿ ಕೊಡಲು ಉತ್ತಮ ಸಾಧನಗಳಾಗಬಲ್ಲವು. ಅದರ ಬದಲು ಇಲ್ಲಿ ಅಲಕ್ಷ್ಯ ಮಾಡಲಾಗುತ್ತದೆ, ರೇಲ್ವೆ ಗಾಡಿಗಳು ಕೆಟ್ಟ ಚಾಳಿಗಳನ್ನು ಇನ್ನಷ್ಟು ಹೆಚ್ಚಿಸಲು ಸಾಧನವಾಗುತ್ತವೆ. ಮೊದಲನೆ, ಎರಡನೆ ವರ್ಗಗಳಲ್ಲಿ ಸವಾರಿ ಮಾಡುವವರಿಗೆ ಮೋಜು-ಮಜಾ ಮಾಡುವ ಚಾಳಿಯನ್ನು ಬೆಳೆಸಲು ಕಲಿಸಲಾಗುತ್ತದೆ. ಮೂರನೇ ವರ್ಗದ ಪ್ರವಾಸಿಕರನ್ನೇ ರೇಲ್ವೆಗಳು ಅವಲಂಬಿಸಿದ್ದರೂ ಅವರ ಸೌಕರ್ಯಗಳೇನು ಕಷ್ಟಕರವೇ ಇರುತ್ತವೆ. ಇದೂ ಸಾಲದೆ ಹಿಂದೂ ಮುಸಲ್ಮಾನ ಮೊದಲಾದ ಅಸ್ಪೃಶ್ಯತಾ ಭೇದಗಳನ್ನು ಮಾಡಿದರೆ ರೇಲ್ವೆ ಅಧಿಕಾರಿಗಳು ಅಯೋಗ್ಯತೆಯು ಪರಾಕಾಷ್ಠೆಗೆ ಮುಟ್ಟಿದ್ದಾರೆಂದಾಗುತ್ತದೆ. ಯಾರೊಬ್ಬ ಪ್ರವಾಸಿ ಭೇದಭಾವಗಳನ್ನು ಇಟ್ಟುಕೊಳ್ಳಬಯಸಿದರೆ ಅವನು ಹಸಿವೆ ನೀರಡಿಕೆಗಳನ್ನು ಸಹಿಸಲಿ. ರೇಲ್ವೆಯವರಿಂದ ಭೇದಭಾವಗಳನ್ನು ಬಲಪಡಿಸಲು ವ್ಯವಸ್ಥೆಗಳನ್ನು ಅಪೇಕ್ಷಿಸದಿರಲಿ. ಶಾಕಾಹಾರಿ ಮತ್ತು ಮಾಂಸಾಹಾರಿಗಳಿಗೆ ಅವರವರಿಗೆ ಅನುಕೂಲವಾದ ವ್ಯವಸ್ಥೆಯನ್ನಿಡುವ ಮಾತು ಬೇರೆ. ಆ ವ್ಯವಸ್ಥೆ ಈಗಲೂ ಇದ್ದೇ ಇವೆ.

ಪುಣೆ — ಮೋ. ಕ. ಗಾಂಧಿ

೭-೩-೪೬

ಹರಿಜನರಿಗೆ ತೊಂದರೆ

ಶ್ರೀ. ಪರೀಕ್ಷಿತಲಾಲ ಮುಜುಮದಾರರು ಬರೆಯುತ್ತಾರೆ:

"ಕಾಠೇವಾಡದಲ್ಲಿ ವಢವಾಣ ರಾಜ್ಯದಲ್ಲಿ ಮೋಟಾ ಕೇರಾಡಾ ಎಂಬ ಗ್ರಾಮವುಂಟು. ಅಲ್ಲಿ ಯಾವದೋ ಒಂದು ರೋಗದ ಕಾರಣದಿಂದ ಮರಣ ಸಂಖ್ಯೆ ಹೆಚ್ಚಿಬಿಟ್ಟಿತು. ಭಂಗಿಗಳ ಕಾರಣದಿಂದಲೇ ಹೀಗಾಗಿರಬೇಕೆಂದು ಕೆಲ ಜನರ ಮನಸಿಗೆ ಅನಿಸಿತು. ಅವರು ಅಲ್ಲಿ ವಾಸಿಸುತ್ತಿದ್ದ ಭಂಗಿಗಳ ಕುಟುಂಬಕ್ಕೆ ಬೆದರಿಕೆ ಹಾಕಿದರು. ಇದರ ಪರಿಣಾಮವಾಗಿ ಆ ಭಂಗೀ ಕುಟುಂಬ ಹಳ್ಳಿ ಬಿಟ್ಟು ಓಡಿಹೋಯಿತು. ವಢವಾಣ ರಾಜ್ಯದ ಹರಿಜನ ಸೇವಕರಿಗೆ ಈ ಸುದ್ದಿ ತಿಳಿದೊಡನೆ ಅವರು ವಢವಾಣ ರಾಜ್ಯದ ಹರಿಜನರಿಗೆ ಸಹಾಯ ಕೊಡಿಸಿದರು. ಇತ್ತ ಹಳ್ಳಿಯ ಜನರು ಅಲ್ಲಿಯ ಕೆಲವರ ಭ್ರಾಂತಿಯನ್ನು ದೂರಗೊಳಿಸಿದರು. ಇಬ್ಬರೂ ಹರಿಜನರ ರಕ್ಷಣೆಗೆ ವ್ಯವಸ್ಥೆ ಮಾಡಿದ್ದರ ಪರಿಣಾಮವಾಗಿ ಆ ಕುಟುಂಬ ತಿರುಗಿ ಹಳ್ಳಿಗೆ ಮರಳಿತು –ಹೀಗೆ ಸುದ್ದಿ ಬಂದಿದೆ.

"ಈ ವರ್ಷ ಹಳ್ಳಿಗಳಲ್ಲಿ ರೋಗ ಹಬ್ಬಿತು. ಇದಕ್ಕಾಗಿ,ಮುಖ್ಯವಾಗಿ ಕಾಠೆವಾಡದಲ್ಲಿ, ಹರಿಜನರ ಮೇಲೆ ಬಹಳ ವಿಪತ್ತು ಬಂದಿದೆ. ಹೀಗೆ ಹಳ್ಳಿ ಜನರ ಅಜ್ಞಾನದ ಫಲವನ್ನು ಈ ಬಡ ಹರಿಜನರು ಬಹಳವಾಗಿ ಭೋಗಿಸಬೇಕಾಗಿದೆ."

ಈ ಭ್ರಾಂತಿಯನ್ನು ದೂರೀಕರಿಸಲು ಶುದ್ಧ ಔಷಧಿಯೆಂದರೆ ಜ್ಞಾನ. ಕಾಠೇವಾಡದಲ್ಲಿ ಈ ರೀತಿಯ ಭ್ರಮೆಗಳು ಹೆಚ್ಚಾಗಿರಲು ಕಾರಣವೆಂದರೆ ಅಲ್ಲಿಯ ಹಳ್ಳಿಗಳಲ್ಲಿ ಹೊಸ ವಿಚಾರಗಳ ಪ್ರವೇಶವೇ ಆಗಿಲ್ಲವೆನ್ನುಷ್ಟು ಸ್ಥಿತಿಯಿದೆ. ಹರಿಜನ ಸೇವಕರು ಈ ಕೊರತೆಯನ್ನು ಹೋಗಲಾಡಿಸಲು ಚನ್ನಾಗಿ ಯತ್ನಿಸಬೇಕಾಗಿದೆ. ಸೇವಕರಾದರೂ ಎಲ್ಲಿ? ಇದ್ದವರೂ ಹಳ್ಳಿಗಳಿಗೆ ಹೋಗುವದಿಲ್ಲ. ಹೋದರೂ ಈ ಕಠಿಣವೆನಿಸುವ ಕಾರ್ಯವನ್ನು ಹೇಗೆ ಮಾಡಬೇಕು? ಇಂಥ ಅನೇಕ ತೊಡಕುಗಳನ್ನು ಕಲ್ಪಿಸಿಕೊಳ್ಳಬಹುದು. ಅದರೆ ಇಂಥ ತೊಡಕುಗಳನ್ನು ಲೆಕ್ಕಿಸದೆ ಶುದ್ಧ ಬುದ್ಧಿಯಿಂದ ಕೆಲಸ ಮಾಡುತ್ತ ಹೋಗುವವರಲ್ಲಿಯೆ ಪುರುಷಾರ್ಥವಿದೆ. ವಢವಾಣದ ಸುದ್ದಿಯನ್ನು ನಂಬಿದರೆ, ರಾಜ, ಪ್ರಜೆಗಳಿಬ್ಬರಿಗೂ ವಿವೇಕ ಬಂದು ಒಡನೆ ಉಪಾಯಮಾಡಲ್ಪಟ್ಟು ಒಂದು ಗಳಿಗೆಯಲ್ಲಿ ಸಂಕಟ ದೂರವಾಯಿತೆಂದು ಹೇಳಬಹುದು. ಎಲ್ಲ ಕಡೆಗಳಲ್ಲಿಯೂ ಹೀಗೆಯೆ ಅದರೆ ಭ್ರಾಂತಿಗಳು ದೂರವಾಗಬಹುದು. ಇದರಲ್ಲಿಯೇ ಸತ್ಯ ಶಿಕ್ಷಣ ತುಂಬಿದೆ.

ಪುಣೆ — ಮೋ. ಕ. ಗಾಂಧಿ

೪-೩-೪೬

(ಹರಿಜನ ಬಂಧುವಿನಿಂದ)

(೭ನೇ ಪುಟದಿಂದ ಬಂದುದು)

ಅತ್ಯುಚ್ಚ ನ್ಯಾಯಸ್ಥಾನವಾದ ಕಾಂಗ್ರೆಸ್ ಅಧಿವೇಶನದಲ್ಲಿ ಜ. ಅವಾರಿಯವರ ವಿರುದ್ಧ ನಿರ್ಣಯವಾದರೆ ಅದಕ್ಕೆ ಅವರು ತಲೆಬಾಗಿಸಬೇಕಾಗುವದು ತಪ್ಪಲ್ಲದ ಕರ್ತವ್ಯಾಚರಣೆಯ ಮಾರ್ಗದರ್ಶನದಲ್ಲಿ ಇದೇ ಅವಶ್ಯಕ ಮತ್ತು ನ್ಯಾಯ್ಯವಾದುದು. ಎಲ್ಲ ದೇಶಗಳಲ್ಲಿ ಮಾನವೀ ಸಂಸ್ಥೆಗಳ ನಿರ್ಣಯವು ಹಲವು ಪ್ರಸಂಗಗಳಲ್ಲಿ ತಪ್ಪೆಂದು ಕಂಡುಬಂದುದು ನಿಜ. ಈ ಪ್ರಸಂಗದಲ್ಲಿಯೂ ಹಾಗೆ ಇರಬಹುದು. ಅಲ್ಲಿಯ ವರೆಗೆ ಜನರಲ್ ಅವಾರಿಯವರಿಗೆ ಜೀವಾವಧಿ ಉಪವಾಸ ಮಾಡಿ ಸಾರ್ವಜನಿಕರ ಭಾವನೆಗಳನ್ನುದ್ರೇಕಿಸುವ ಅಧಿಕಾರ ಇರುವದಿಲ್ಲ. ತತ್ವವಿಚಾರದಲ್ಲಿಯೂ ಅವರದು ತಪ್ಪು, ಆಚರಣೆಯಲ್ಲಿ ಅದು ಉಪಹಾಸಕರವಾಗಿದೆ. ಏಕೆಂದರೆ ಇಂಥ ಕೃತಿಯು ಹಿನ್ನಲೆಯ ತತ್ವವನ್ನು ಕೇವಲ ವಿಪರೀತಾರ್ಥದಲ್ಲಿಯೆ ಹಾಗೆ ಕರೆಯಬಹುದು. ಪ್ರಜಾಪ್ರಭುತ್ವದಲ್ಲಿ ವಿಶುದ್ಧ ಮನುಷ್ಯರು ಕೂಡ ತಿಳಿಯದಲೆ ತಪ್ಪು ನಿರ್ಣಯ ಕೊಡಬಹುದು. ಇದಕ್ಕುಪಾಯ ವೆಂದು ಹೆಚ್ಚು ಮತ್ತು ವಿಶುದ್ಧ ಶಿಕ್ಷಣ ಕೊಡುವದು ಜನತೆಯಲ್ಲಿ ಹೆಚ್ಚು ಜಾಗ್ರತಿ ಮಾಡುವದು. ಇಂಥ ಜಾಗ್ರತ ವಾತಾವರಣದಲ್ಲಿ ಅನೇಕ ಸಾರ್ವಜನಿಕ ಕಾರ್ಯಕರ್ತರು ತರಬೇತಿ ಹೊಂದುವರು. ಸಾರ್ವಜನಿಕರಿಗೆ ಒಳ್ಳೆ ಉದಾಹರಣೆ ಕೊಡುವದಕ್ಕಾಗಿ ಭಾಷಣ, ಲೇಖನ ಮತ್ತು ಕಾರ್ಯ ಮಾಡುವದು ಅವರ ಮುಖ್ಯ ಕರ್ತವ್ಯವಾಗುವದು. ತಪ್ಪು ಮಾರ್ಗ ಹಿಡಿದ ಗೆಳೆಯನ ಪ್ರಾಣ ರಕ್ಷಣೆಗಾಗಿ ಮಾನ್ಯ ನ್ಯಾಯ ಮಾರ್ಗಚ್ಯುತರಾಗುವವರಿಗಿಂತ ಅವರಿಗೆ ಬೆಂಬಲ ಕೊಟ್ಟು ಅವರ ಉಪವಾಸವನ್ನು ಎತ್ತಿ ಹಿಡಿದು ಪ್ರೋತ್ಸಾಹಿಸುತ್ತಿರುವ ಗೆಳೆಯರೇ ಜನರಲ್ ಅವಾರಿಯವರ ಮರಣ ಬೇಗ ಬರುವದಕ್ಕೆ ಅವಕಾಶ ಮಾಡಿಕೊಡುವರೆಂದು ನಾನೀಗ ನಂಬುತ್ತೇನೆ. ಸಗ್ಗವಳಿಕೆಗಿಂತ ನ್ಯಾಯವೇ ಗೆಲ್ಲಲಿ.

ಎರಡು ಗಮನಾರ್ಹ ಪ್ರಯೋಗಗಳು

(೮ನೇ ಪುಟದಿಂದ ಮುಂದರಿದುದು)

ಕಂಡು ಬಂತು. ೧೯೩೮ ರಲ್ಲಿ ಅನಂದಗಿರಿಯ ವಾರದ ಬಾಡಿಗೆ ೯ ಶಿಲಿಂಗ್ ಇದ್ದು ೧೯೪೩ ರಷ್ಟಕ್ಕೆ ಅದು ೯ ಶಿಲಿಂಗ ೩॥ ಪೆನ್ಸಿಗೇರಿತ್ತು. ಅರ್ಥಾತ್ ಅದು ಮೂಲ ಬಾಡಿಗೆಯಿಂದ ಇಮ್ಮಡಿಯಾಗಿತ್ತು. ಪರಿಣಾಮವಾಗಿ ಆಹಾರಕ್ಕಾಗಿ ಮಾಡುವ ವೆಚ್ಚ ಕಡಿಮೆಯಾಗಿತ್ತು. ಮುಖ್ಯವಾಗಿಎರಡೂ ಪ್ರದೇಶಗಳ ಅನುದ್ಯೋಗಿಗಳಲ್ಲಿ ಆಹಾರಕ್ಕಾಗಿ ಅನಂದಗಿರಿಯಲ್ಲಿ ತಲಾ ವಾರಕ್ಕೆ ೩ಶಿ.೭ ಪೆನ್ಸ್ ವೆಚ್ಚವಾಗುತ್ತಿದ್ದರೆ ಹೊಲಸುಗೇರಿಯಲ್ಲಿ ೪ಶಿ.೬ ಪೆನ್ಸ ವೆಚ್ಚವಾಗುತ್ತಿದ್ದುದು ಕಂಡು ಬಂತು. "ವಸತಿ ಮತ್ತು ಸ್ವಚ್ಛತೆಯನ್ನು ಮೊದಲು ಸುಧಾರಿಸುವ ಹವ್ಯಾಸದಲ್ಲಿ ವ್ಯಕ್ತಿಯ ಪ್ರಾಥಮಿಕ ಅವಶ್ಯಕತೆಯಾದ ಆಹಾರದ ವೆಚ್ಚದಿಂದ ಹಣವನ್ನು ಸೆಳೆದುಕೊಳ್ಳಲಾಯಿತು," ಎಂಬುದು ಇದರ ಮಥಿತಾರ್ಥ. ಆಹಾರದ ಕೀಳ್ಮೆಯ ಕಾರಣದಿಂದ, ಅವನು, ತುಂಬಿಕೊಡಲು ಸುಧಾರಿಸಿದ ವಸತಿ, ಸ್ವಚ್ಛತಾವ್ಯವಸ್ಥೆಗಳಿದ್ದರೂ ಆರೋಗ್ಯ ಕೆಡುತ್ತ ಹೋಯಿತು.

ಎರಡನೆ ಪ್ರಯೋಗವೂ ಇದನ್ನೇ ಹೇಳುತ್ತದೆ ಮಕ್ಕಳ ಶಿಕ್ಷಣದಲ್ಲಿ ಆಸ್ಥೆಯುಳ್ಳವರಿಗೆ ಅದು ವಿಶೇಷ ಮಹತ್ವದ್ದಾಗಿದೆ. ಅದು "ವ್ಯಾಯಾಮ ಮತ್ತು ದೈಹಿಕ ಕವಾಯತಿಗಿಂತಲೂ ಆಹಾರಕ್ಕೆ ಪ್ರಥಮ ಸ್ಥಾನವಿದೆ" ಎಂದು ತೋರಿಸುತ್ತದೆ. ಒಂದು "ಮರುಕವುಳ್ಳ ಅವರೂ ಬಡಸಂಸ್ಥೆಯಲ್ಲಿ"ನ ೮೮ ನಿಗ್ರೋ ಹುಡುಗರಲ್ಲಿ ೪೨ ಹುಡುಗರಿಗೆ ಪರೀಕ್ಷಾರ್ಥವಾಗಿ, ಸಾಮಾನ್ಯ ಆಹಾರವಲ್ಲದೆ ದಿನಕ್ಕೊಂದು ಕ್ವಾರ್ಟ ಹಾಲನ್ನು ಹೆಚ್ಚಾಗಿ ಕೊಡಲಾಯಿತು. ಈ ಮಕ್ಕಳಿಗೂ ಹಾಲು ಕೊಡದ ಮಕ್ಕಳಿಗೂ "ವ್ಯಾಯಾಮದ ಬಯಕೆ ಹೊರತು" ಬೆಳವಣಿಗೆಯಲ್ಲಿಯಾಗಲಿ ಆರೋಗ್ಯದಲ್ಲಿಯಾಗಲಿ ಯಾ ಭೇದವೂ ಕಾಣಬರಲಿಲ್ಲ. ಹಾಲಿಲ್ಲದ ಮಕ್ಕಳು "ಉದಾಸಿಗಳೂ ಸಾಧುಪ್ರಕೃತಿಯವರೂ ಆಗಿದ್ದರು.... ಹಾಲು ಕುಡಿದ ಹುಡುಗರು ತಮ ತುಂಟತನ, ಚಟುವಟಿಕೆಗಳಿಂದ ಅಧ್ಯಾಪಕ, ವರ್ಗವನ್ನು ಪೀಡಿಸತೊಡಗಿದರು." ಇದಕ್ಕೆ ರಾಷ್ಟ್ರಸಂಘದ ಪೌಷ್ಟಿಕತೆಯ ಸಮಸ್ಯೆಯನ್ನು ಕುರಿತ ಪುಸ್ತಕದ ೧ ನೇ ಭಾಗದಿಂದ ಈ ಕೆಳಗಿನ ಅಂಶವನ್ನು ಎತ್ತಿ ಸೇರಿಸಬಹುದು. "ಸಾಮಾನ್ಯವಾಗಿ ಉತ್ತಮವಾದುದೆಂದು ಪರಿಗಣಿಸಲ್ಪಟ್ಟ ಈ ಸಂಸ್ಥೆಯ ಬೋರ್ಡಿಂಗ ಶಾಲೆಯ ಆಹಾರದ ಜತೆಗೆ ೧ ಪೈಂಟ ಹಾಲು ಕೊಟ್ಟದ್ದರಿಂದ ಸಾಮಾನ್ಯವಾದ ಉತ್ತಮ ಬೆಳವಣಿಗೆಯಾಗಿ ಜಡ್ಡು ಕಡಿಮೆಯಾದುದಲ್ಲದೆ ಅಂಥ ಹುಡುಗರು ಹೆಚ್ಚು ಉದ್ದಂಡರೂ ಚೈತನ್ಯಶಾಲಿಗಳೂ ಅದುದು ವಿಶೇಷವಾಗಿ ಕಂಡುಬಂದಿತು."

ಇದರ ಮೇಲೆ ಟಿಪ್ಪಣಿ ಬರೆಯುತ್ತ ಡಾ. ವೆಂಚರು ಹೇಳುತ್ತಾರೆ: "ಉತ್ತಮ ಆಹಾರ ಮಕ್ಕಳಲ್ಲಾಗಲಿ ದೊಡ್ಡವರಲ್ಲಾಗಲಿ ಹುಟ್ಟಿಸುವ ಅದಮ್ಯ ಚೈತನ್ಯ ಅದನ್ನು ತೆಗೆದುಕೊಳ್ಳಲು ಸಿದ್ಧರಾಗಿರುವ ಯಾವುದೇ ಮಾರ್ಗದಲ್ಲಿ ಹರಿಯಬಹುದು. ಕೆಲಸವೇ ಆಗಲಿ ಆಟವೇ ಆಗಲಿ, ವ್ಯಾಯಾಮವಾಗಲಿ ಕವಾಯತ್ತಾಗಲಿ, ಆಟಗಳ ಸ್ಪರ್ಧೆಯೆ ಆಗಲಿ ನಿರುಪಾಯವಾದ ದುಡಿಮೆ ಆಗಲಿ ಒಳ್ಳೆ ಪುಷ್ಟಿ ಹೊಂದಿದ ದೇಹವು ಚಟುವಟಿಕೆಯ ಅವಕಾಶವನ್ನು ಸಂತೋಷದಿಂದ ಸ್ವಾಗತಿಸುತ್ತದೆ. ಕವಾಯತ್ತು ಮತ್ತು ವ್ಯಾಯಾಮಕ್ಕೆ ಆಹಾರಕ್ಕಿಂತ ಮೊದಲಿನ ಸ್ಥಾನವೀಯುವದು ಕುದುರೆಯ ಎದುರಿಗೆ ಗಾಡಿ ಕಟ್ಟಿದಂತೆ ಸರಿಯಾದ ಮತ್ತು ಸಾಕಷ್ಟು ಆಹಾರ ಪುಷ್ಟಿ ದೊರಕಿಸುವದು ಮಕ್ಕಳ ವಿದ್ಯಾಭ್ಯಾಸದಲ್ಲಿ ಮೊದಲನ ಮೆಟ್ಟಲು.

ಪುಣೆ — ಪ್ಯಾರೇಲಾಲ

೭—೩—೪೬

ವೈಸರಾಯರ ಖಾಸಗಿ ಕಾರ್ಯದರ್ಶಿ ಜಿ. ಇ. ಬಿ. ಅಬೆಲ್ಲರು ತಾ. ೧೩ ರಾತ್ರಿ ಮಹಾತ್ಮಾ ಗಾಂಧಿಯವರನ್ನು ಭೆಟ್ಟಿಯಾಗಿದ್ದರು.

ಅಬೆಲ್ಲರು ಮಹಾತ್ಮರ ಬಳಿ ೪೦ ನಿಮಿಷಗಳವರೆಗಿದ್ದರು. ಕೇಂದ್ರದಲ್ಲಿ ಜನಾದರಣೀಯ ಸರಕಾರ ತಲೆಯೆತ್ತುವ ವರೆಗೆ ಆಹಾರ ಸಮಿತಿಯು ಪ್ರಯೋಜನಕಾರಿಯಾಗುವದಿಲ್ಲೆಂದು ಮೌಲಾನಾ ಅಜಾದರು ವೈಸರಾಯರಿಗೆ ತಂತಿ ಕಳಿಸಿದ್ದನ್ನು ನೋಡಿ ಮಹಾತ್ಮರೊಡನೆ ಸಮಾಲೋಚಿಸಲು ಅಬೆಲ್ಲರು ಬಂದಿದ್ದರೆಂದು ತಿಳಿಯುತ್ತದೆ.

ಅಧಿಕಾರದರ್ಪದ ಸ್ವರೂಪ ಪ್ರದರ್ಶನ

ಶ್ರೀ ಪಿ. ಕೆ. ಶಹಾ ಮತ್ತು ವಿ. ಎಲ್ ಸಾಠೆ ಇವರ ಸ್ಥಾನಬದ್ಧತೆಯ ಹುಕುಮಿನ ಅವಧಿ ಅಗಾಗ ಬೆಳೆಯುತ್ತಿದ್ದಿತಷ್ಟೆ. ಅದರ ವಿರುದ್ಧ ಅವರು ಮುಂಬಯಿ ಹಾಯಕೋರ್ಟಿನಲ್ಲಿ ಮಾಡಿದ 'ಹೇಬಸ್ ಕಾರ್ಪಸ್' ಅರ್ಜಿಗಳೆರಡು ಇದೀಗ ಮಂಜೂರಾಗಿದ್ದು ನ್ಯಾಯಾಧೀಶರು ಒಳ್ಳೆ ಮಹತ್ವದ ನಿರ್ಣಯವನ್ನು ಕೊಟ್ಟಿರುವರು. ಮುಖ್ಯ ನ್ಯಾಯಾಧೀಶ ಸ್ಟೋನ ಮತ್ತು ನ್ಯಾಯಾಧೀಶ ಲೋಕೂರ ಇವರು ವಿಚಾರಪೂರ್ಣ ನಿರ್ಣಯ ಕೊಟ್ಟು ಅಕ್ರಮವಾಗಿ ಈ ವರೆಗೆ ಸ್ಥಾನಬದ್ಧತೆಯಲ್ಲಿಡಲ್ಪಟ್ಟ ಇಬ್ಬರು ಅರ್ಜಿದಾರರನ್ನು ಬಂಧಮುಕ್ತ ಮಾಡಿದರು. ಅಡ್ವೋಕೇಟ ಪುರುಷೋತ್ತಮ ತ್ರಿಕಮದಾಸ ಇವರು ಮುಂಬಯಿ ಹಾಯಕೋರ್ಟಿನಲ್ಲಿ ಈ ಮನವಿ ಮಾಡಿಕೊಳ್ಳಲು ಅವರಿಗೆ ಸಹಾಯ ಮಾಡಿರದಿದ್ದರೆ ಇನ್ನೂ ಅನೇಕ ದಿನಗಳವರೆಗೆ ಇವರು ಸ್ಥಾನಬದ್ಧತೆಯಲ್ಲಿಯೆ ಉಳಿಯುತ್ತಿದ್ದರು. ಆ ತೀರ್ಪಿನೊಳಗಿನ ಕೆಲಮಹತ್ವದ ಅವತರಣಿಕೆಗಳನ್ನು ಕೊಡಬಯಸುತ್ತೇನೆ.

ಈ ಇಬ್ಬರು ಆರೋಪಿಗಳ ಸಂಬಂಧದಲ್ಲಿ ಮುಂಬಯಿ ಸರಕಾರದ ಗೃಹಖಾತೆಯ ಕಾರ್ಯದರ್ಶಿಗಳಾದ ಸಿಮ್ಸರವರು ಕೊಟ್ಟ ಎರಡು ಅಫಿಡೇವಿಟ್ಟುಗಳಲ್ಲಿ ಕೇವಲ ಮೇಲಿನ ನಂಬರಗಳನ್ನಷ್ಟು ಬಿಟ್ಟರೆ ಏನೂ ಹೆಚ್ಚುಕಡಮೆ ಇಲ್ಲೆಂದು ಅಭಿಪ್ರಾಯ ಪಡುತ್ತ ವಿದ್ವಾನ್ ನ್ಯಾಯಾಧೀಶರು ಹೀಗೆ ಬರೆಯುತ್ತಾರೆ.

"ಸಾಠೆಯವರ ಸಂಬಂಧದಲ್ಲಿ ಕೊಡಲಾದ ಕಾರಣಗಳಲ್ಲಿ ಅವರು ಯಾವದೊಂದು ಗುಪ್ತ ಸಂಸ್ಥೆಗೆ ಸಹಾಯ ಮಾಡಿದರು ಇಲ್ಲವೆ ಬೆಂಬಲ ಕೊಟ್ಟರು ಅಥವಾ ಗುಪ್ತ ಸಂಘವನ್ನು ಸಂಘಟಿಸಿದರೆಂಬ ಸೂಚನೆಯೇನೂ ಇಲ್ಲ. ವಿಧ್ವಂಸಕ ಕೃತ್ಯಗಳನ್ನು ಮಾಡುವ ಉದ್ದೇಶವುಳ್ಳ ಸಂಸ್ಥೆಯ ಚಟುವಟಿಕೆಗಳಿಗೆ ಸಹಾಯ ಸಲ್ಲಿಸಿದರೆಂದು ಇದರಲ್ಲಿ ಆರೋಪಿಸಲಾಗಿದೆ. ಇಂಥ ಸಂಸ್ಥೆ ಗುಪ್ತ ರೀತಿಯಿಂದ ಕಾರ್ಯಮಾಡುವದೆಂದು ಗ್ರಹಿಸಿದರೂ ಇಬ್ಬರು ಆರೋಪಿಗಳ ಸಂಬಂಧದಲ್ಲಿ ಗೃಹಖಾತೆಯ ಕಾರ್ಯದರ್ಶಿಗಳು ಕೊಟ್ಟ ಈ ಹೇಳಿಕೆ ಒಂದೇ ಬಗೆಯದಾಗಿರುವದನ್ನು ನೋಡಿದರೆ ವಿಚಾರಣೆಯಿಲ್ಲದೆ ಸ್ಥಾನಬದ್ಧತೆಯಲ್ಲಿಡುವ ಅತ್ಯಂತ ವ್ಯಾಪಕ ಅಧಿಕಾರವುಳ್ಳ ಪ್ರತಿಯೊಬ್ಬ ಸರಕಾರಿ ನವಕರನ ಗಂಭೀರ ಹೊಣೆಗಾರಿಕೆ ಮತ್ತು ಕರ್ತವ್ಯವನ್ನು ತಾತ್ಸಾರದಿಂದ ಪಾಲಿಸಲಾಗಿದೆಂಬುದರ ಸ್ಪಷ್ಟ ಕಲ್ಪನೆ ಬರುವುದು.

ವಿಶಿಷ್ಟ ಪಟ್ಟಿಯ ಸಂಗತಿಗಳನ್ನನುಲಕ್ಷಿಸದೆ ಸ್ಥಾನಬದ್ಧತೆಯ ಹುಕುಮುಗಳನ್ನು ಸಾಯಿಕ್ಲೋಸ್ಟಾಯಿಲ್ ಫಾರ್ಮುಗಳಲ್ಲಿ ಹೊರಡಿಸಿದ್ದನ್ನು ಟೀಕಿಸುವ ಪ್ರಸಂಗ ಈ ಹಾಯಕೋರ್ಟಿನ ಫುಲ್‌ಬೆಂಚಿನವರಿಗೆ ಗೋಖಲೆಯವರ ಪಟ್ಟಿಯ ಕಾಲಕ್ಕೆ ಬಂದಿದ್ದಿತು. ನಿಯಂತ್ರಣ ಹಾಕದಿದ್ದರೆ ಸಾಯಿಕ್ಲೋಸ್ಟಾಯಿಲ್ ಅಫಿಡೇವಿಟ್ಟುಗಳನ್ನು ಒಪ್ಪಿಸುವ ಯುಗದ ಉದಯವಾಗಬಹುದು. ಯಾರ ಅಫಿಡೇವಿಟ ಎಂಬದನ್ನ ಕೂಡ ನಿರ್ದಿಷ್ಟ ಪಡಿಸದೆ ಇರುವ ಆಕ್ರಮವನ್ನು ಬತ್ತಿಟ್ಟಿಗಿಟ್ಟರೂ ೧೯೪೬ ನೇ ಇಸ್ವಿಯ ಜಾನೇವರಿ ೭ ನೇ ತಾರೀಕಿಗೆ ಅವಧಿಯನ್ನು ಬೆಳೆಸುವ ಹುಕುಮು ಹೊರಡಿಸುವಾಗ ಮನವಿಗಾರರ ಪರಿಸ್ಥಿತಿಯ ಬಗ್ಗೆ ಸಂಪೂರ್ಣವಾಗಿ ವಿಚಾರ ಮಾಡಲಾಯಿತೆಂಬದನ್ನು ಕೂಡ ಈ ಅಫಿಡೇವಿಟನಲ್ಲಿ ಉಲ್ಲೇಖಿಸಿಲ್ಲ."

ಕೋರ್ಟಿಗೆ ಬಂದು ಪಾಟೀಸವಾಲಿಗೊಳಗಾಗಲು ಒಪ್ಪದಿದ್ದ ಸಿಮ್ಸರು ಒಪ್ಪಿಸಿದ ಅಫಿಡೇವಿಟನ್ನು ಟೀಕಿಸುತ್ತ ನ್ಯಾಯಾಧೀಶರು ಈ ರೀತಿ ಅಭಿಪ್ರಾಯ ಪಟ್ಟಿರುವರು.

"ಮುಖತಃ ಸಾಕ್ಷಿಯನ್ನು ಕೊಡುವುದಕ್ಕಾಗಿ ಕೋರ್ಟಿಗೆ ಬರಲು ಅವಕಾಶ ಕೊಟ್ಟಿರುವಾಗ ಅದನ್ನು ತಪ್ಪಿಸಿ ಇಂಥ ಅಫಿಡೇವಿಟುಗಳನ್ನು ದಾಖಲುಮಾಡುವುದು ವಿಚಿತ್ರವೇ ಸೈ. ಅವುಗಳಲ್ಲಿಯ ಲೋಪದೋಷಗಳು ಮತ್ತಷ್ಟು ಗಮನಾರ್ಹವಾಗಿದೆ. ಸಿಮ್ಸರ ಅಫಿಡೇವಿಟಗಳು ಒಂದೇ ಬಗೆಯವಾಗಿರುವವಲ್ಲದೆ ಒಂದರನ್ನಿನ್ನೊಂದು ತಿದ್ದಲೆಳಸುತ್ತದೆ. ಈ ಅಫಿಡೇವಿಟಗಳಿಗೆ ಆರೋಪಿಗಳು ೨೨ ನೇ ಫೆಬ್ರುವರಿಗೆ ಉತ್ತರ ಕೊಟ್ಟಿರುವರು."

ಅವಧಿಯನ್ನು ಬೆಳಿಸಿದ ಹುಕುಮುಗಳನ್ನುಲ್ಲೇಖಿಸುತ್ತ ಮಾನ್ಯ ನ್ಯಾಯಾಧೀಶರು ಈ ರೀತಿ ಅಭಿಪ್ರಾಯಪಡುತ್ತಾರೆ.

"ಮೊದಲಿನ ಹುಕುಮಿನ ಅವಧಿ ಮುಗಿದ ಬಳಿಕ ಸ್ಥಾನಬದ್ಧರ ರಕ್ಷಣೆಗಾಗಿ ಕೇವೊಂದು ಸಂರಕ್ಷಣೆಗಳನ್ನು ಕಾಯಿದೆಯಿಂದ ಕೊಡಲಾಗಿದೆ. ಆರು ತಿಂಗಳ ಮುಗಿವ ಮೊದಲು ಅವನನ್ನು ಸ್ಥಾನಬದ್ಧತೆಯಲ್ಲಿ ಏಕೆ ಇಡಲಾಯಿತೆಂಬ ಕಾರಣಗಳನ್ನು ಸ್ಥಾನಬದ್ಧನಿಗೆ ತಿಳಿಸಿರಬೇಕು. ಅಂದರೆ ೭ ನೇ ಕಲಮಿನನ್ವಯ ಅವರು ಅರಿಕೆಯನ್ನೂ ಮಾಡಬಹುದು. ಮೊದಲಿನ ಹುಕುಮಿನ ಅವಧಿ ಮುಗಿವ ೩೦ ದಿನಗಳೊಳಗಾಗಿಯೆ ಅದನ್ನು ಬೆಳಿಸಿದ ಹುಕುಮು ಹೊರಡಬೇಕು ಮತ್ತು ಕೊನೆಯದಾಗಿ ಅವಧಿ ಹೆಚ್ಚಿಸುವ ಅಧಿಕಾರಿಗಳು ಎಲ್ಲ ಪರಿಸ್ಥಿತಿಗಳನ್ನು ಭಾವನಾತ್ಮಕ ಹಾಗು ವಾಸ್ತವಿಕತೆಯ ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸಿರಬೇಕು. ಎಲ್ಲ ಎಂಬ ಶಬ್ದದ ಮೇಲೆ ಹೆಚ್ಚು ಜೋರು ಕೊಡಬೇಕೆಂದು ನಮ್ಮ ಅಭಿಪ್ರಾಯ. ಎಲ್ಲ ಪರಿಸ್ಥಿತಿಗಳೆಂದರೆ ಏನು ಎಂಬ ಪ್ರಶ್ನೆ ಉಪಸ್ಥಿತವಾಗುವದು. ಅದು ಕಾಯಿದೆಯ ಪ್ರಶ್ನೆಯಾಗಿರಲಿಕ್ಕೆ ಬೇಕು"

ಸ್ಥಾನಬದ್ಧತೆಯ ಹುಕುಮಿನ ಅವಧಿ ಬೆಳೆಸುವ ಅಧಿಕಾರಿಗಳು ಎಲ್ಲ ಪರಿಸ್ಥಿತಿಗಳನ್ನು ವಿಚಾರಿಸಿಲ್ಲೆಂದು ಅಭಿಪ್ರಾಯಪಡುತ್ತ ನ್ಯಾಯಾಧೀಶರು ಹೀಗೆ ಬರೆಯುತ್ತಾರೆ.

"ಸ್ಥಾನಬದ್ಧತೆಯಲ್ಲಿಡುವ ಅಧಿಕಾರಿಗಳು ಅವಶ್ಯವಾಗಿ ಗಮನಿಸತಕ್ಕ ಅನೇಕ ಮುದ್ದೆಗಳನ್ನು ಪುರುಷೋತ್ತಮ ತ್ರಿಕಮದಾಸರು ಮುಂದ ಮಾಡಿದರು. ಮೊದಲಿನ ಹುಕುಮು ಹೊರಡಿಸುವಾಗ ಇಂಥದೊಂದು ಕೃತಿಯನ್ನು ಇವನು ಮಾಡಿದನೆಂದು ಇಲ್ಲವೆ ಮಾಡಬಹುದೆಂಬ ಸಂಶಯ ತಮಗೆ ಬಂದಿದೆಂದು ಮುಂತಾದ್ದರ ಬಗ್ಗೆ ಅಧಿಕಾರಿಗಳು ವಿಚಾರಮಾಡಬೇಕಾದುದು ಅವಶ್ಯ ಮನವಿಗಾರರ ಮುದ್ದೆ ಈ ಮುದ್ದೆಗಳಲ್ಲಿ ಒಂದಾಗಿದೆಂಬುದು ಸ್ಪಷ್ಟವಿದೆಂದು ನಮ್ಮ ಅಭಿಪ್ರಾಯ. ಆ ಸಂಗತಿಗಳನ್ನು ಮತ್ತು ವಿಷಯಗಳನ್ನು ವಿಚಾರಿಸುವಾಗ ಆಯಾ ಕಾಲದ ದೇಶದ ಪರಿಸ್ಥಿತಿಯನ್ನು ಗಮನಿಸಬೇಕಾದುದು ಅವಶ್ಯ. ಅವಧಿಬೆಳಸಿದ ಸದ್ಯದ ಹುಕುಮನ್ನು ಹೊರಡಿಸುವಾಗ ಇದ್ದ ದೇಶದ ಪರಿಸ್ಥಿತಿಯನ್ನು ಆ ಕಾಲಕ್ಕೆ ಸ್ಥಾನಬದ್ಧರು ೭ ನೇ ಕಲ್ಮಿನನ್ವಯ ಮಾಡಿಕೊಂಡ ಅರಿಕೆಯನ್ನು ಮತ್ತು ಸ್ಥಾನಬದ್ಧತೆಯ ಕಾಲಕ್ಕಿದ್ದ ಅವನ ಆರೋಗ್ಯ ಮತ್ತು ಸದ್ಯದ ಅವನ ಆರೋಗ್ಯ ಇದನ್ನೆಲ್ಲ ಗಮನಿಸಬೇಕಾದುದು ಅವಶ್ಯ.

"ಈ ಸಂದರ್ಭದಲ್ಲಿ ಪರಿಸ್ಥಿತಿಯನ್ನೆಲ್ಲ ಪೂರ್ಣವಾಗಿ ವಿಚಾರಿಸಿ ನೋಡಿದ್ದಾದರೆ ಆರೋಪಿಗಳು ಮಾಡಿಕೊಂಡ ಮನವಿಗಳನ್ನು ೧೯೪೬ ನೇ ಜಾನೇವಾರಿ ೭ ನೇ ತಾರೀಕಿಗೆ ದೇಶದಲ್ಲಿದ್ದ ಪರಿಸ್ಥಿತಿಯನ್ನನುಲಕ್ಷಿಸಿ ವಿಚಾರ ಮಾಡಿಲ್ಲೆಂದೂ ಸಿಮ್ಸರವರು ಕೊಟ್ಟ ಉತ್ತರಗಳು ಆ ಮನವಿಗಳಲ್ಲಿಯ ಮುದ್ದೆಗಳಿಗೆ ಸಮರ್ಪಕವಾದ ಉತ್ತರಗಳಾಗಿಲ್ಲೆಂದು ನಮ್ಮ ಅಭಿಪ್ರಾಯ. ಅಂದು ಜಾನೇವಾರಿ ೭ ನೇ ತಾರೀಕು ಯುದ್ಧವು ನಡೆದಿರಲಿಲ್ಲ. ಮೊದಲು ಅಕ್ರಮವಾಗಿದ್ದ ಕಾಂಗ್ರೆಸ ಕಮಿಟಿಗಳೆಲ್ಲ ಕ್ರಮಬದ್ಧವಾಗಿದ್ದವು, ಕಾಂಗ್ರೆಸ ವರ್ಕಿಂಗ ಕಮೀಟಿಯ ಸದಸ್ಯರೆಲ್ಲ ಬಿಡುಗಡೆ ಮಾಡಲ್ಪಟ್ಟಿದ್ದರು, ಅದರ ಮುಖಂಡರು ಸ್ಥಾನಬದ್ಧತೆಯಿಂದ ಬಿಡುಗಡೆ ಹೊಂದಿದ್ದರೆಂದು ಮುಂತಾಗಿ ಅರ್ಜದಾರರು ತಮ್ಮ ಅರಿಕೆಗಳಲ್ಲಿ ಹೇಳಿರುವರು. ೧೯೪೬ ನೇ ಜಾನೇವಾರಿ ೭ ನೇ ತಾರೀಕಿನ ಅವಧಿ ಬೆಳೆಸುವ ಹುಕುಮು ಹೊರಡಿಸುವ ಮೊದಲು ಇವೆಲ್ಲ ಮುದ್ದೆಗಳನ್ನು ವಿಚಾರ ಮಾಡಬೇಕಾಗಿತ್ತು.

ಇದಲ್ಲದೆ ಗವರ್ನರಸಾಹೇಬರು ಕಾಗದಪತ್ರಗಳನ್ನೆಲ್ಲ ಪರಿಶೀಲಿಸಿ ಅವಧಿ ಬೆಳೆಸಲು ೭ ನೇ ಜಾನೇವಾರಿ ಹುಕುಮಿಗೆ ಒಪ್ಪಿಗೆಯನ್ನಿತ್ತರೆಂಬುದು ಅಫಿಡೇವಿಟನಲ್ಲಿ ಉಲ್ಲೇಖಿಸಲ್ಪಟ್ಟಿಲ್ಲೆಂಬದರ ಕಡೆಗೆ ನ್ಯಾಯಾಧೀಶರು ಲಕ್ಷವನ್ನೆಳೆದಿದ್ದಾರೆ "೧೯೪೪ ಮತ್ತು ೧೯೪೫ ನೇ ಇಸ್ವಿಗಳಲ್ಲಿ ಈ ಅವಧಿಯನ್ನು ಬೆಳೆಸುವಾಗೆಲ್ಲ ಗವರ್ನರರು ಪರಿಸ್ಥಿತಿಗಳನ್ನೂ ಪರಿಶೀಲಿಸಿ ಅವಧಿಯನ್ನು ಬೆಳೆಸಲು ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದರು. ಆದರೆ ಸದ್ಯದ ಸಂದರ್ಭಗಳಲ್ಲಿ ಅವರು ಪರಿಸ್ಥಿತಿಯನ್ನು ಪರಿಶೀಲಿಸಿ ಅವಧಿ ಬೆಳೆಸುವ ಹುಕುಮಿಗೆ ತಮ್ಮ ಒಪ್ಪಿಗೆಯನ್ನು ಕೊಡದಿದ್ದುದು ಅತ್ಯಂತ ಮಹತ್ವದ ಸಂಗತಿಯಾಗಿದೆ. ಗವರ್ನರಸಾಹೇಬರು ವಿಚಾರ ಮಾಡಿದ ನಂತರ ೭ ನೇ ಜಾನೇವಾರಿಯ ಹುಕುಮನ್ನು ಹೊರಡಿಸಲಾಗಿದ್ದರೆ ಸಿಮ್ಸರವರು ಇಂಥ ಮಹತ್ವದ ವಿಷಯವನ್ನು ಉಲ್ಲೇಖಿಸದಿದ್ದುದೇಕೋ ತಿಳಿಯದಾಗಿದೆ. ಏಕೆಂದರೆ ಇಷ್ಟೊಂದು ವಿಚಾರ ಮಾಡಿ ಹೊರಡಿಸಲ್ಪಟ್ಟ ಹುಕುಮು ವಿಶ್ವಾಸಕ್ಕೆ ಪಾತ್ರವಾಗುವದೆಂಬುದು ನಿಶ್ಚಿತ. ಆದುದರಿಂದ ಪರಿಸ್ಥಿತಿಗಳನ್ನೆಲ್ಲ ಸಂಪೂರ್ಣ ವಿಚಾರಿಸಿ ಜಾನೇವಾರಿ ೭ ನೇ ತಾರೀಕಿನ ಹುಕುಮು ಹೊರಡಿಸಿಲ್ಲೆಂದು ಅರ್ಜದಾರರು ಯಶಸ್ವಿಯಾಗಿ ಆಕ್ಷೇಪವನ್ನು ಎತ್ತಿರುವರೆಂದು ನಾವು ಅಭಿಪ್ರಾಯ ಪಡುತ್ತೇವೆ. ಹೀಗೆ ಪರಿಸ್ಥಿತಿಯಿರುವಾಗ ಅವರನ್ನು ಕೂಡಲೆ ಬಿಡುಗಡೆ ಮಾಡಬೇಕೆಂದು ವಿಧಿಸುವದು ನಮ್ಮ ಸ್ಪಷ್ಟ ಕರ್ತವ್ಯವಾಗಿದೆ."

ಬಂಧಮುಕ್ತರಾದವರು ಅಕ್ರಮ ರೀತಿಯಿಂದ ಸ್ಥಾನಬದ್ಧತೆಯಲ್ಲಿಡಲ್ಪಟ್ಟದ್ದಕ್ಕಾಗಿ ನಷ್ಟಪರಿಹಾರಕ್ಕೆ ಪಾತ್ರರಿರುವರೆಂದು ನನ್ನ ಅಭಿಪ್ರಾಯ. ಆದರೆ ಇದು ವಿವಾದಾತ್ಮಕವಿರಬಹುದು. ಇದೇ ಬಗೆಯಾಗಿ ಸ್ಥಾನಬದ್ಧತೆಯಲ್ಲಿಡಲ್ಪಟ್ಟವರೆಲ್ಲ, ಅವರು ಯಾವದೇ ಪ್ರಾಂತದಲ್ಲಿರಲಿ, ಕೂಡಲೆ ಬಿಡುಗಡೆ ಹೊಂದಬೇಕಾದುದು ಅತ್ಯವಶ್ಯ. ಅವರ ಬಿಡುಗಡೆಯಾದರೆ ಸರಕಾರವು ಬುಡಮೇಲಾಗುವ ಗಂಡಾಂತರವೇನೂ ಇರುವದಿಲ್ಲ.

ಮುಂಬಯಿ ತಾ. ೧೪ — ಮೋ. ಕ. ಗಾಂಧಿ

ಆಹಾರ ಕೊರತೆಯನ್ನೆ ದುರಿಸುವದೆಂತು ?

ಮತ್ತೆ ಹಲವು ಸೂಚನೆಗಳು

೧) ದಲ್ಲಾಳಿಗಳು ಉತ್ಪಾದಕರನ್ನು ಮತ್ತು ಬಳಸುವವರನ್ನು ಲೆಕ್ಕಿಸದೆ ವಿಪರೀತ ಲಾಭವನ್ನು ಪಡೆಯುತ್ತಿರುವುದರಿಂದ ಮದ್ರಾಸ ಸರಕಾರದ ಧೋರಣವು ಅವರಿಬ್ಬರಿಗೂ ಕಲ್ಯಾಣಕರವಾಗಿಲ್ಲೆಂದು ದಕ್ಷಿಣದಿಂದ ಒಬ್ಬ ಗೆಳೆಯ ಬರೆಯುತ್ತಾನೆ. ಜಿಲ್ಲಾಧಿಕಾರಿಗಳು ಠೋಕ ವ್ಯಾಪಾರಿಗಳನ್ನು ನೇಮಿಸುತ್ತಾರೆ. ಅವರು ತಮ್ಮ ಸಬ್ ಏಜಂಟರನ್ನು ನೇಮಿಸಿಕೊಳ್ಳುತ್ತಾರೆ. ಉದಾಹರಣಾರ್ಥವಾಗಿ ಒಬ್ಬ ಏಜಂಟನು ಒಂದು ಹಳ್ಳಿಯಲ್ಲಿ ಮದ್ರಾಸದ ೩೨ ಶೇರಿನ ಮಣಕ್ಕೆ ೫—೯—೧೦ ರಂತೆ ಭತ್ತ ಕೊಳ್ಳುತ್ತಾನೆ. ಅದನ್ನು ನಾಲ್ಕು ಮೈಲುಗಳ ಮೇಲೆ ಠೋಕ ವ್ಯಾಪಾರಸ್ಥರ ವಖಾರಕ್ಕೆ ಒಯ್ಯಲಾಗುತ್ತದೆ. ಅನಂತರ ಅದೇ ಭತ್ತವನ್ನು ತಿರುಗಿ ಬೆಳೆದ ಹಳ್ಳಿಗೇ ತಂದು ಮದ್ರಾಸದ ಒಂದು ಶೇರಿಗೆ ೦—೩—೫ ಯಂತೆ ಮಾರಲಾಗುತ್ತದೆ. ಕೊಂಡ ಹಾಗು ಮಾರಾಟ ದರಗಳಲ್ಲಿ ವ್ಯತ್ಯಾಸವು ಮಣಕ್ಕೆ ೧—೩—೬ ಅಂದರೆ ನೂರಕ್ಕೆ ೨೧.೭ ರಷ್ಟಾಗುವದು. ಸಾರಿಗೆ ವೆಚ್ಚವನ್ನಿಷ್ಟು ಬಿಟ್ಟು ಇದೆಲ್ಲ ನಡುವಿನ ದಲ್ಲಾಳನ ಜೊಕ್ಕಸಕ್ಕೆ ಹೋಗುವದು ಈ ಅಂತರದಿಂದ ಕಳ್ಳಸಂಗ್ರಹ ಮತ್ತು ಕಳ್ಳಪೇಟೆಗೆ ಅವಕಾಶ ದೊರೆಯುವದು. ರೈತನು ಇದಕ್ಕಿಂತ ಕಡಮೆ ದರದಿಂದ ಕಿರಕೋಳ ರೀತಿಯಿಂದ ಮಾರಾಟ ಮಾಡುವ ಏಜಂಟನು ಅವರಿಗೆ ಕೊಡುವದಕ್ಕಿಂತ ಹೆಚ್ಚು ಪಡೆಯಬಲ್ಲನು. ಗಿರಾಕಿಯಾದರೂ ಸೀದಾ ಅಂಗಡಿಗಿಂತ ಹೆಚ್ಚು ಅಗ್ಗವಾಗಿ ರೈತನಿಂದ ಕಾಳು ಪಡೆಯಬಲ್ಲರು.

ಭತ್ತವನ್ನು ಅಕ್ಕಿ ಮಾಡಿ ಮಾರಾಟ ಮಾಡುವಾಗಂತೂ ದಲ್ಲಾಳಿಯ ಲಾಭ ಇದಕ್ಕೂ ಹೆಚ್ಚಿಗಿರುವದು ಗಿರಾಕಿಗೆ ಭತ್ತವನ್ನೆ ಏಕೆ ಕೊಡಬಾರದು ? ಅವನು ಸಹಜವಾಗಿ ಕೈಯಿಂದ ಕುಟ್ಟಿಸಿ ಅಕ್ಕಿ ಮಾಡಿಕೊಳ್ಳಬಹುದು. ದೈಹಿಕ ಮತ್ತು ಆರ್ಥಿಕ ಲಾಭವನ್ನು ಬಿಟ್ಟರೂ ಇದರಿಂದ ಅವನ ದನಗಳಿಗೆ ಹೊಟ್ಟು ಸಿಕ್ಕುವದು. ಆದುದರಿಂದ ಆ ಗೆಳೆಯನು ಕೆಳಗಿನ ಉಪಾಯಗಳನ್ನು ಸೂಚಿಸುವನು:

ಅ) ಭತ್ತವನ್ನು ಹಳ್ಳಿಯ ವಖಾರಗಳಲ್ಲಿಯೇ ಸಂಗ್ರಹಿಸಿಡಬೇಕು. ಸ್ಥಳೀಯ ಆವಶ್ಯಕತೆಗೆ ಸಾಕಷ್ಟು ಸಂಗ್ರಹಿಸಿದ ಬಳಿಕ ಉಳಿದದ್ದನ್ನು ಅವಶ್ಯವಿದ್ದ ಬೇರೆ ಸ್ಥಳಗಳಿಗೆ ಕಳಿಸಬಹುದು.

ಬ) ಭತ್ತವನ್ನೆ ಸೀದಾ ಅಂಗಡಿಗಳಲ್ಲಿ ಕೊಡತಕ್ಕದ್ದು.

ಕ) ಕೊಂಡ ಬೆಲೆಗೇ ಭತ್ತವನ್ನು ಕೊಡಬೇಕು. ಭತ್ತವನ್ನೆತ್ತುವ ಮತ್ತು ಹಂಚುವ ವೆಚ್ಚವನ್ನೆಲ್ಲ ಸರಕಾರವೇ ತೆತ್ತಬೇಕು.

ಡ) ಒಕ್ಕಲಿಗ ಕಲಸಗಾರರಿಗೆ ಸೀದಾದ ಪ್ರಮಾಣ ಇಮ್ಮಡಿಸಬೇಕು. ಹೆಚ್ಚಿನ ಪರಿಶ್ರಮದ ಕಲಸಗಾರರಿಗೂ ದ್ವಿಗುಣಿತ ಸೀದಾ ಕೊಡಬೇಕು.

೨) ಬಂಗಾಲದಲ್ಲಿ ಸಣಬಿನ ಕ್ಷೇತ್ರಗಳನ್ನು ಕಡಿಮೆಮಾಡಿ ಸ್ಥಳಕರ ಅವಶ್ಯಕತೆಯಷ್ಟು ಸ[illegible] ಬೆಳೆಸಬೇಕು. ಆ ಕ್ಷೇತ್ರಗಳಲ್ಲೆಲ್ಲ ಆಹಾರ ಪದಾರ್ಥಗಳನ್ನು ಬೆಳೆಸಬೇಕೆಂದು ಬಂಗಾಲದ ಗೆಳೆಯರೊಬ್ಬರು ಬರೆಯುತ್ತಾರೆ.

೩) ಹಲವು ಸಂಸ್ಥಾನಗಳಲ್ಲಿ ಬಹಳ ಧಾನ್ಯ ಸಂಗ್ರಹಿಸಿಡಲಾಗಿದೆಯೆಂದು ಮತ್ತೊಬ್ಬ ಗೆಳೆಯ ಬರೆಯುತ್ತಾನೆ. ತಮ್ಮ ಬೇಡಿಕೆಗಳನ್ನೆಲ್ಲ ಪೂರೈಸಿಕೊಂಡ ನಂತರ ಉಳಿದುದನ್ನು ಬ್ರಿಟಿಶ ಹಿಂದುಸ್ತಾನದಲ್ಲಿಯ ಕೊರತೆ ಪ್ರದೇಶಗಳಿಗೆ ಕಳಿಸಲು ಬ್ರಿಟಿಶ್ ಸರಕಾರದ ಗೂಡ ಸಹಕರಿಸಲು ಅವರನ್ನು ಕೇಳಿಕೊಳ್ಳಬೇಕು. ಸಂಗ್ರಹಿಸಲ್ಪಟ್ಟ ಧಾನ್ಯ ಕೊಳೆತು ಹೋಗದಂತೆ ಇಲ್ಲವೆ ಲಾಭಬಡಕತನಕ್ಕಾಗಿ ಉಪಯೋಗಿಸಲ್ಪಡದಂತೆ ನೋಡಿಕೊಳ್ಳಬೇಕು.

೪) ಬಡ ಒಕ್ಕಲಿಗರಿಗೆ ಒಕ್ಕಲತನದ ಉಪಕರಣಗಳನ್ನು ಪೂರಯಿಸಿ ಕೊಡುವಲ್ಲಿ ಎಲ್ಲ ಬಗೆಯ ಸಹಾಯ ಸಲ್ಲಿಸಬೇಕು ಈ ಉಪಕರಣಗಳಲ್ಲಿ ಸುಧಾರಣೆ ಮಾಡಿ ಅಗ್ಗದರದಲ್ಲಿ ಒಕ್ಕಲಿಗರಿಗೆ ಅವನ್ನು ಪೂರೈಸುವದು ಸರಕಾರದ ಕರ್ತವ್ಯವಾಗಿದೆ.

೫) ಧಾನ್ಯ ಧಾರಣೆ ನಿಯಂತ್ರಣ ಬಡವರಿಗೆ ಸಹಾಯಕಾರಿಯಾಗಿರದ ಧಾನ್ಯಗಳ ಧಾರಣೆ ಹೆ[illegible]ಸಿ ಕಳ್ಳಪೇಟೆಯನ್ನುಂಟು ಮಾಡುವದೆಂದು ಪಂಜಾಬದ ಗೆಳೆಯನೊಬ್ಬನು ಬರೆಯುತ್ತಾನೆ. ಪಂಜಾಬ ಪೇಟೆಗಳಲ್ಲಿ ಈಗ ಕಡ್ಲಿ ಮಣಕ್ಕೆ ೧೮ ರೂಪಾಯಿಯಂತೆ ಮಾರಲ್ಪಡುವದು. ಮತ್ತು ಉದಾರವೂ ಸಂಶಯಾತ್ಮಕ ಮಾರ್ಗಗಳಿಂದ ದೊರೆಯುವದು. ನಿಯಂತ್ರಣವನ್ನು ತೆಗೆದದ್ದಾದರೆ ಧಾರಣೆ ಇಳಿಯುವದು. ಪಂಜಾಬದಲ್ಲಿ ಬೇಕಾದಷ್ಟು ಗೋದಿಯಿದೆ. ಅದೀಗ ಕಪ್ಪಾಗುತ್ತ ನಡೆದಿದೆ. ಅಲ್ಲದೆ ಮಣಕ್ಕೆ ೧೩—೧೪ ರೂಪಾಯಿ ಕೊಟ್ಟು ಕೊಂಡ ಹಿಟ್ಟಿನಲ್ಲಿ ಮಣ್ಣು ಬೆರಕೆಯಿರುತ್ತದೆ.

೬) ಬರುವ ಮಾವಿನ ಸುಗ್ಗಿಯ ಲಾಭ ಪಡೆದುಕೊಳ್ಳಬೇಕೆಂದು ಅನೇಕರು ಸೂಚಿಸುತ್ತಾರೆ. ಈ ಸಲ ಸುದೈವದಿಂದ ಮಾವಿನ ಹಣ್ಣಿನ ಸುಗ್ಗಿ ಚೆನ್ನಾಗುವದು. ಮಾವಿನ ಹಣ್ಣಿನಲ್ಲಿ ಮಾನವರಿಗೆ ಅವಶ್ಯವಾದ ಪೌಷ್ಟಿಕ ಸತ್ವಗಳು ಬಹಳ ಇರುವವು.

೭) ಶೇಂಗಾದಹಿಂಡಿ, ಸಾಸವಿ ಮತ್ತು ಉ[illegible] ಕಾಳುಗಳನ್ನುಪಯೋಗಿಸಿ ಮಾನವರಿಗೆ ಪೌಷ್ಟಿಕವಾದ ಸತ್ವವನ್ನು ಸಿದ್ಧಪಡಿಸಬಹುದು. ಈ ಸತ್ವವನ್ನು ಬಕ್ಕರಿ ಮಾಡುವಾಗ ಉಪಯೋಗಿಸಬಹುದು. ಗೋದೀಹಿಟ್ಟಿನಲ್ಲಿ ಸಮಪ್ರಮಾಣದಲ್ಲಿ ಕೂಡಿಸಿ ಚಪಾತಿಯನ್ನೂ ಮಾಡಬಹುದು. ಶೀಮೀ ಎಣ್ಣೆಯನ್ನು ಹೆಚ್ಚಾಗಿ ತರಿಸಿದ್ದಾದರೆ ಬಡವರಿಗಾಗಿ ಹೆಚ್ಚು ಕಾಳುಗಳು ದೊರೆಯಬಹುದು.

೮) ಆಹಾರವು ರಾಜಕಾರಣ ಮತ್ತು ಪಕ್ಷಾತೀತವಾಗಿವೆ. ಕೇಂದ್ರದಲ್ಲಿ ಆಹಾರ ಮಂತ್ರಿಮಂಡಳವು ಪ್ರತ್ಯೇಕವಾಗಿರಬೇಕು. ಜನತೆಯ ವಿಶ್ವಾಸಪಾತ್ರರಾದ ಮಂತ್ರಿಗಳು ಅದರಲ್ಲಿರಬೇಕು. ಲಂಚಗುಳಿತನ ನಿರ್ಮೂಲನಕ್ಕೆ ಇದೊಳ್ಳೆ ಸಹಾಯಕವಾಗಬಹುದು.

೯) ಶ್ರೀಮಂತರಲ್ಲಿ ಹೆಚ್ಚು ಜನರು ಬಹಳ ಊಟ ಮಾಡುವರು. ಆರೋಗ್ಯ ಮತ್ತು ಶಕ್ತಿ ಹೆಚ್ಚು ಊಟ ಮಾಡುವದನ್ನವಲಂಬಿಸುವದಿಲ್ಲೆಂಬದನ್ನು ಅವರಿಗೆ ತಿಳಿಸಿ ಕೊಡಬೇಕಾಗಿದೆ. ವಸ್ತುಸ್ಥಿತಿ ತದ್ವಿರುದ್ಧವಾಗಿದೆಂದೂ ಅವರಿಗೆ ಹೇ[illegible]ಬೇಕು.

೧೦) ಸೋಯಾಬೀನದಲ್ಲಿ ಜೀವನ ಸತ್ವಗಳಿರುವದರಿಂದ ಅದನ್ನುಪಯೋಗಿಸಬೇಕೆಂದು ಪ್ರತಿಪಾದಿಸಲಾಗಿದೆ. ಒಂದು ಪಾಲು ಸೋಯಾಬೀನ ಮತ್ತು ಮೂರು ಪಾಲು ಗೋದಿಯಿಂದ ಪ್ರ[illegible]ಣಿತ ಪೌಷ್ಟಿಕತೆ ಬರುವದು. ದಿನದ ಗೋದಿ ಸೀದಾಕ್ಕೆ ಅದನ್ನು ಕೂಡಿಸಿದ್ದಾದರೆ ಗೋದಿಯ ಪ್ರಮಾಣವನ್ನು ೯ ಔಂಸಿಗೆ ಇಳಿಸಬಹುದು. ಅದನ್ನು ಬೇಗನೆ ಹೊರಗಿನಿಂದ ತರಿಸಬೇಕಲ್ಲದೆ ಇಲ್ಲಿಯೂ ಬೆಳೆಸಲು ಪ್ರೋತ್ಸಾಹಿಸಬೇಕು.

(ಅ. ಕಾ.) (ಅಪೂರ್ಣ)

ಧಾರವಾಡ

ಶ್ರೀ ಕೃಷ್ಣಮೂರ್ತಿ ಪುರಾಣಿಕರು ಬರೆದ ರಾಮನ ಕತೆಗಳು ಎಂಬ ಪುಸ್ತಕದ ಪ್ರಕಟಣೋತ್ಸವ ಧಾರವಾಡದ ಸಾಹಿತ್ಯ ಮಂಟಪದಲ್ಲಿ ಶ್ರೀ ಶಂ ಬಾ ಜೋಶಿಯವರ ಅಧ್ಯಕ್ಷತೆಯಲ್ಲಿ ಜರುಗಿತು ಶ್ರೀರಂಗರು ಪುರಾಣಿಕರ ಪರಿಚಯ ಮಾಡಿಕೊಟ್ಟ ಬಳಿಕ ಪ್ರಿ. ಧಾರವಾಡ ಅವರು ಕೆಲ ಪೋಷಕ ಮಾತುಗಳನ್ನಾಡಿದರು. ಪುರಾಣಿಕರು ತಮ್ಮನ್ನು ಮುಂದೆ ತರುವ ಹಿರಿಯರನ್ನು ಅಭಿನಂದಿಸಿದ ಬಳಿಕ ನೆಗಳೂರ ರಂಗನಾಥರು ಎಲ್ಲರ ಆಭಾರ ಮನ್ನಿಸಿದರು.

ಶ್ರೀ ಉಮಾಬಾಯಿ ಕುಂದಾಪುರ ಇವರು ಕರ್ನಾಟಕ ಪ್ರಾಂತದ ಕಸ್ತೂರಬಾ ಸ್ಮಾರಕ ನಿಧಿಯ ಕಾರ್ಯನಿರ್ವಹಿಸಲು ಏಜಂಟರಾಗಿ ನಿಯಮಿಸಲ್ಪಟ್ಟದ್ದರಿಂದ ಇನ್ನು ಮುಂದೆ ಕಸ್ತೂರಬಾ ನಿಧಿಗೆ ಸಂಬಂಧಿಸಿದ ಎಲ್ಲ ಪತ್ರವ್ಯವಹಾರ ಅವರ ಹೆಸರಲೆ ಮಾಡಬೇಕೆಂದು ಶ್ರೀಮತಿ ಕೃಷ್ಣಾಬಾಯಿ ಪಂಜೀಕರ ಇವರು ಪ್ರಕಟಿಸುತ್ತಾರೆ.

ಮುಂಬಯಿ ಸರಕಾರದ ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ಬಾಳಾಸಾಹೇಬ ಖೇರ ಇವರು ಧಾರವಾಡ ಬೆಳಗಾವಿ ಕಾರವಾರ ಜಿಲ್ಹೆಗಳ ಕೆಲ ಭಾಗಗಳಲ್ಲಿ ಎರಡು ದಿನ ಸಂಚರಿಸಿ ಕಾಂಗ್ರೆಸ ಚುನಾವಣೆ ಪ್ರಚಾರ ಮಾಡಿ ಹೋದರು. ಕಾಂಗ್ರೆಸ್ಸು ಈ ಚುನಾವಣೆಯಲ್ಲಿ ಖಂಡಿತ ಯಶಸ್ಸು ಪಡೆಯುವದಾಗಿ ತಮಗೆ ವಿಶ್ವಾಸವಿದೆಂದು ಕರ್ನಾಟಕಕ್ಕೆ ಸಂದೇಶ ಕೊಟ್ಟರು. ಧಾರವಾಡ ಜಿಲ್ಹೆಯಲ್ಲಿ ಸಂಪು ಎಲ್ಲೆಡೆ ಹಬ್ಬಿದೆ.

ಅಗಡಿಯ ಶ್ರೀಮಂತ ಭಯ್ಯಾಸಾಹೇಬ ಬಹಾದ್ದೂರ ದೇಸಾಯಿ ಅವರು ೯ ನೇ ತಾರೀಕು ಮುಂಜಾನೆ ಹೃದಯವಿಕಾರದಿಂದ ನಿಧನಹೊಂದಿದರು. ಇವರು ಒಳ್ಳೆ ಲೋಕಪ್ರಿಯರಾಗಿದ್ದರು.

ಧಾರವಾಡಜಿಲ್ಹಾ ಪ್ರವೇಶ ಸಮಿತಿಯು ಪಿ. ವೆಂಕೋಬಾಚಾರ್ಯ ಇವರ ಅಧ್ಯಕ್ಷತೆಯಲ್ಲಿ ಸಂಘಟಿಸಲಾಗಿದೆ. ಎಪ್ರಿಲ ಮೊದಲನೇ ವಾರದಲ್ಲಿ ಕೆಲ ಊರುಗಳಲ್ಲಿ ಪ್ರಚಾರ ಕಾರ್ಯ ನಡೆಸಬೇಕೆಂದು ಗೊತ್ತುಮಾಡಲಾಯಿತು. ಜಿಲ್ಹಾ ಸಾಹಿತ್ಯ ಸಮ್ಮೇಲನವನ್ನು ಜರುಗಿಸುವ ಸುಧ್ಯಾಸಾಧ್ಯತೆ ವಿಚಾರಮಾಡಲು ಶ್ರೀ ಚಿಂತಾಮಣಿ ಹರಪೇಟೆ ಇವರಿಗೆ ಅಧಿಕಾರ ಕೊಡಲಾಯಿತು. ರಾಣೀಬಿನ್ನೂರಲ್ಲಿ ಭಾಷಣಮಾಲೆ ಏರ್ಪಡಿಸಬೇಕೆಂದು ಗೊತ್ತಾಯಿತು. ಹೊಸ ಸದಸ್ಯರನ್ನು ಮಾಡಬೇಕೆಂದೂ ನಿರ್ಣಯಿಸಲಾಯಿತು.

ಪ್ರಾಂತಿಕ ಶಾಸದ ಸಭೆ ಚುನಾವಣೆ ಪ್ರಚಾರಕ್ಕಾಗಿ ದಿಲ್ಲಿಯಿಂದ ಬಂದಿದ್ದ ಶ್ರೀ ದ. ಪ. ಕರಮರಕರರು ಆ ಕಾರ್ಯವನ್ನು ಮುಗಿಸಿಕೊಂಡು ೧೫ ನೇ ತಾರೀಕ ಮೇಲಗಾಡಿಯಿಂದ ಮರಳಿ ದಿಲ್ಲಿಗೆ ಹೋದರು.

ಬ್ಯಾಡಗಿ ಇಂಗ್ಲಿಶ ಶಾಲೆಯಲ್ಲಿ ೬ ನೇ ತಾರೀಕಿನ ದಿನ ಉದಯವೆಂಬ ಮಾಸಪತ್ರಿಕೆಯ ಉದ್ಘಾಟನ ಸಮಾರಂಭ ನಗರಸಭೆಯ ಅಧ್ಯಕ್ಷ ಶ್ರೀ ಮೇಲ್ಮುರಿ ಗಣೇಶಪ್ಪನವರ ಹಸ್ತದಿಂದ ನೆರವೇರಿತು.

ಬ್ಯಾಡಗಿ ಇಂಗ್ಲಿಶ ಶಾಲೆಯಲ್ಲಿ ಶ್ರೀ ಪಂಢರೀನಾಥ ಗಲಗಲಿಯವರು ಕಳೆದವಾರ ಕಾಳಿದಾಸನ ಬಗ್ಗೆ ವಿದ್ವತ್ಪೂರ್ಣ ಭಾಷಣವಿತ್ತರು. ವಿಶ್ವವಿದ್ಯಾಲಯದಲ್ಲಿ ಸಂಸ್ಕೃತಕ್ಕೆ ತಕ್ಕ ಮನ್ನಣೆ ಕೊಡುವದವಶ್ಯವೆಂದೂ ಅವರು ಪ್ರತಿಪಾದಿಸಿದರು.

ಬಮ್ಮನಹಳ್ಳಿಯಲ್ಲಿ ಸರಕಾರ ಮಾನ್ಯ ಅರಿವೆ ಅಂಗಡಿಯಲ್ಲಿ ಬೇಡಿದ ಬಟ್ಟೆಗಳು ಸಿಕ್ಕುವದಿಲ್ಲೆಂಬ ತಕರಾರು ಕೇಳಬರುತ್ತದೆ. ಅಂಗಡಿಯವರು ಕೊಡಮಾಡಿದ ಮೊಟರ ಟೊಪಿನ ಅರವೆಯಂಥ ದರ್ಪ ಅರಿವೆ ತೆಗೆದುಕೊಂಡರೆ ಮಾತ್ರ ಗಿರಾಕಿಗಳು ಬೇಡಿದ ಬಟ್ಟೆಗಳನ್ನು ಕೊಡಲಾಗುತ್ತದೆ. ಇದರಿಂದ ಜನರಿಗೆ ಬಹಳ ತೊಂದರೆಯಾಗಿದೆಯೆಂದು ಒಬ್ಬರು ತಿಳಿಸುತ್ತಾರೆ.

ಉತ್ತರ ಕನ್ನಡ

ಉತ್ತರ ಕನ್ನಡ ಜಿಲ್ಹೆಯ ೪೦ ಪ್ರಾಥಮಿಕ ಶಿಕ್ಷಕರು ಸಂಪು ಹೂಡಿದ್ದರಿಂದ ೬೦ ಶಾಲೆಗಳು ಮುಚ್ಚಿವೆ. ಜಿಲ್ಹಾ ಶಿಕ್ಷಕ ಸಂಘದ ಕ್ರಿಯಾ ಸಮಿತಿಯ ಸಭೆ ೧೧ ಕ್ಕೆ ಸೇರಿ ಸಂಪುಗಾರರಿಗೆ ಶಾಂತರೀತಿಯಿಂದ ನಡೆಯಲು ಕೇಳಿಕೊಂಡದ್ದಲ್ಲದೆ ಕುಮಟೆಯಲ್ಲಿಯ ಕೆಲ ಶಿಕ್ಷಕರಿಗೆ ಏ. ಓ. ರವರವರು ಅವಮಾನಕರ ಮಾತು ಆಡಿದ ಬಗ್ಗೆ ನಿಷೇಧ ಪ್ರದರ್ಶಿಸಿದರು ಸಂಪು ಹೂಡಿದ ಶಿಕ್ಷಕರಿಗೆ ಕಳೆದ ತಿಂಗಳದ ಸಂಬಳ ತಡೆ ಹಿಡಿಯಲಾಗಿದೆಂದು ತಿಳಿಯುತ್ತದೆ.

ಸೋದೆಯ ಶ್ರೀ ತ್ರಿವಿಕ್ರಮ ದೇವರ ಉತ್ಸವವು ಫಾಲ್ಗುಣ ಶುದ್ಧ ನವಮಿಯಿಂದ ಫಾಲ್ಗುಣ ವದ್ಯ ಚತುರ್ಥಿಯ ವರೆಗೆ ವಿಜೃಂಭಣೆಯಿಂದ ಜರಗುವದು ಭಕ್ತ ಜನರು ಬಂದು ಕೃತಾರ್ಥರಾಗಬೇಕೆಂದು ಶ್ರೀ ವಾದಿರಾಜ ಮಠದ ಪಾರುಪತ್ಯಗಾರರು ತಿಳಿಸುತ್ತಾರೆ.

ಕರ್ನಾಟಕ

ಬೆಳಗಾವಿ

ಬೆಳಗಾವಿಯ ಬಿ. ಟಿ. ಕಾಲೇಜಿನ ಮಾನ್ಯ ಪ್ರಿನ್ಸಿಪಾಲರಾದ ರ್‍ಯಾಂಗ್ಲರ ಪಿ. ಎಸ್. ಕಟ್ಟಿಯವರು ಬರುವ ಜೂನ ೧೬ ರಿಂದ ನಿವೃತ್ತರಾಗುವದರಿಂದ ಇದೇ ೧೦ ನೇ ತಾರೀಕು ಆ ಕಾಲೇಜಿನ ಪ್ರಾಧ್ಯಾಪಕರೂ ಛಾತ್ರಶಿಕ್ಷಕರೂ ಸರದಾರ ಹಾಯಸ್ಕೂಲಿನ ಪ್ರಾಕ್ಟಿಸಿಂಗ ಸ್ಕೂಲಿನವರೂ ಮೊದಲಾದವರೆಲ್ಲ ಕೂಡಿ ಅವರನ್ನು ಸನ್ಮಾನಿಸಿದರು. ಅನೇಕರು ಮಾತಾಡಿ ಕಟ್ಟಿಯವರ ಅಸಾಮಾನ್ಯ ವ್ಯಕ್ತಿತ್ವವನ್ನು ಪಾಂಡಿತ್ಯವನ್ನು ವರ್ಣಿಸಿದರು. ಶ್ರೀ ಕಟ್ಟಿಯವರು ಉತ್ತರ ಕೊಡುತ್ತ ತಾವು ೭ ವರುಷ ಇಂಗ್ಲಂಡಿನಲ್ಲಿ ಇಂಗ್ಲಿಶ್ ಸ್ಕೂಲಗಳಲ್ಲಿ ಪಡೆದ ಅನುಭವ, ಆಳವಾದ ಅಭ್ಯಾಸದ ಫಲವಿದೆಂದು ಮುಂತಾಗಿ ಹೇಳಿದರು.

[illegible] ಕಾಂಗ್ರೆಸ ಕಾರ್ಯಕರ್ತರಾದ ಇಮಾಮಸಾಹೇಬ ಹು[illegible]ಸಾಹೇಬ ಮುಲ್ಲಾ ಹಿಡಕಲ ಇವರು ೯ ನೇ ತಾರೀಖಿನ ದಿನ ಬಿಡುಗಡೆ ಹೊಂದಿದರು.

ಬಳ್ಳಾರಿ

ಬಳ್ಳಾರಿ ಮತ್ತು ಅನಂತಪುರ ಜಿಲ್ಹೆಗಳಲ್ಲಿ ಬರಗಾಲ ಚಿನ್ಹಗಳು ತಲೆದೋರಿವೆಯಷ್ಟೆ. ಈ ಸಂಬಂಧದಲ್ಲಿ ಸರಕಾರದವರು ಪರಿಹಾರೋಪಾಯ ಕೈಕೊಳ್ಳುತ್ತಿರುವರು. ಹೆಚ್ಚು ಆಹಾರ ಧಾನ್ಯ ಬೆಳೆಯಲು ಅನುಕೂಲವಾಗುವಂತೆ ಬಾವಿ ತೋಡುವ ಕಾರ್ಯಕ್ರಮ ನಡೆದಿದೆ. ಜನರಿಗೆ ನೌಕರಿ ಕೊಡಿಸಲು ಹೊಸ ಕಾಮಗಾರಿಗಳನ್ನು ಸುರು ಮಾಡಲಾಗಿದೆ. [illegible] ವಸೂಲಿಯನ್ನು ನಿಲ್ಲಿಸಿದೆ. [illegible] ಬಗ್ಗೆ ವ್ಯವಸ್ಥೆ ಮಾಡಲಾಗಿದೆ. ಜಿಲ್ಹೆಯಲ್ಲೆಲ್ಲ ಮೇವಿನ ಡಿಪೋಗಳನ್ನು ತೆಗೆದಿದೆ.

ಹಿಂದುಸ್ತಾನದಲ್ಲಿಯೂ ಪರದೇಶಗಳಲ್ಲಿಯೂ ಔದ್ಯೋಗಿಕ ಮತ್ತು ಕಲಾತ್ಮಕ ಶಿಕ್ಷಣ ಹೊಂದಬಯಸುವ ವೈಶ್ಯ ಸಮಾಜದ ವಿದ್ಯಾರ್ಥಿಗಳಿಗಾಗಿ ಶ್ರೀ ಚಿಂಡೂರ ವೆಂಕಟರೆಡ್ಡಿ ೫೦ ಸಾವಿರ ರೂ. ದಾನ ಮಾಡಿ ಪ್ರತಿವರ್ಷ ೧೦ ಸಾವಿರ ರೂಪಾಯಿಗಳಂತೆ ಕೊಡುವರು ವೈ. ನಂಜುಂಡಯ್ಯ ಶೆಟ್ಟಿ ಮತ್ತು ಬಂಧುಗಳು ಇಬ್ಬರ ವೆಚ್ಚ ತಾವು ಹೊರುವದಾಗಿಯೂ ಶ್ರೀ ಯಲಕೂರ ಎಲ್ಲಯ್ಯ ಶೆಟ್ಟಿ ಇವರು ಪ್ರತಿ ವರ್ಷ ೫೦೦ ರೂಪಾಯಿಗಳಂತೆ ಜೀವಂತ ಇರುವ ವರೆಗೆ ಕೊಡುವದಾಗಿಯೂ ವಚನ ಕೊಟ್ಟಿರುವರು.

ಬಳ್ಳಾರಿ ವೀರಶೈವ ಕಾಲೇಜಿನ ವಾರ್ಷಿಕೋತ್ಸವ ಅನಂತಪುರ ಕಾಲೇಜಿನ ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ೯ ಕ್ಕೆ ಜರಗಿತು. ಜಿಲ್ಹಾ ಲೋಕಲ್ ಬೋರ್ಡಿನ ಅಧ್ಯಕ್ಷ ಡಾ. ಆರ್. ನಾಗನಗೌಡರು ವ್ಯವಸಾಯದ ಮಹತ್ವವನ್ನುದ್ದೇಶಿಸಿ ಭಾಷಣ ಮಾಡಿದರು: ವಿದ್ಯಾರ್ಥಿಗಳು ರಚನಾತ್ಮಕ ಕಾರ್ಯದಲ್ಲಿ ದುಡಿಯಬೇಕೆಂದು ಹೇಳಿದರು. ಪ್ರಿನ್ಸಿಪಾಲ ಥಾಯಪ್ಪ ಮತ್ತು ಟಿ. ಸಿದ್ದನಗೌಡರು ಮಾತಾಡಿದ ನಂತರ ಅಧ್ಯಕ್ಷರ ಸಮಾರೋಪವಾಯಿತು.

ಕೊಲ್ಹಾಪುರದ ಮುಖ್ಯ ಪ್ರಧಾನರಾಗಿದ್ದ ಶ್ರೀ ಮಿಚೆಲ್‌ರು ೧೫ ನೇ ತಾರೀಕಿನ ದಿವಸ ಶ್ರೀ ಬಾಗವೆ ಇವರಿಗೆ ಅಧಿಕಾರ ವಹಿಸಿ ಕೊಟ್ಟು ಎಲ್ಲರ ನಿರೋಪ ತೆಗೆದುಕೊಂಡು ಕೊಲ್ಹಾಪುರದಿಂದ ಹೊರಟರು.

ವಿಜಾಪುರ

ಪ್ರಾಥಮಿಕ ಶಿಕ್ಷಕರ ಸಂಪಿನ ಸಂಬಂಧವಾಗಿ ವಿಜಾಪುರ ಜಿಲ್ಹೆಯಲ್ಲಿಯ ೬೦೦ ಶಾಲೆಗಳು ಮುಚ್ಚಿದ್ದು ಸುಮಾರು ೬೦ ಸಾವಿರ ವಿದ್ಯಾರ್ಥಿಗಳು ಮಾರ್ಚ ೧ ರಿಂದ ವಿದ್ಯಾಭ್ಯಾಸವಿಲ್ಲದೆ ಕುಳಿತಿರುವರು. ಜಿಲ್ಹಾ ಬೋರ್ಡಿನ ೧೩೦೦ ಶಿಕ್ಷಕರಲ್ಲಿ ೧೧೫೦ ಕ್ಕಿಂತ ಹೆಚ್ಚು ಶಿಕ್ಷಕರು ಸಂಪಿನಲ್ಲಿ ಸೇರಿರುವರು.

ತಾಳೀಕೋಟೆಯ ಟ್ರೇನಿಂಗ ಕಾಲೇಜಿನ ವಿದ್ಯಾರ್ಥಿಗಳು ೮ನೇ ತಾರೀಕಿನ ದಿನ ಶ್ರೀ ಬಸವಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಂಘ ಸ್ಥಾಪಿಸಿಕೊಂಡು ಸಂಪಿನಲ್ಲಿ ಸೇರುವ ನಿರ್ಣಯ ಮಾಡಿದರು. ಸುಮಾರು ೭೦ ಶಿಕ್ಷಕ ವಿದ್ಯಾರ್ಥಿಗಳು ಸಂಪಿನಲ್ಲಿ ಸೇರಿದ್ದಾರೆ.

ಪ್ರಾಥಮಿಕ ಶಿಕ್ಷಕರಿಗೆ ಸಹಾನುಭೂತಿಯನ್ನು ತೋರಿಸುವದಕ್ಕಾಗಿ ವಿಜಾಪುರದಲ್ಲಿ ಮಾಧ್ಯಮಿಕ ಶಾಲಾಧ್ಯಾಪಕರ ಸಭೆ ೮ನೇ ತಾರೀಕು ಶ್ರೀ ವಿ. ಎ. ನರಸಾಪುರ ಇವರ ಅಧ್ಯಕ್ಷತೆಯಲ್ಲಿ ಸೇರಿ ಶಿಕ್ಷಕರ ಬೇಡಿಕೆಗಳಿಗೆ ಬೆಂಬಲವನ್ನು ಕೊಡಲಾಯಿತು. ಅವರಿಗೆ ಸಹಾಯ ಮಾಡುವುದಕ್ಕಾಗಿ ಒಂದು ಸಮಿತಿಯನ್ನು ನೇಮಿಸಲಾಯಿತು.

ಕೊಡಗು

ಕೊಡಗಿನ ಜಿಲ್ಹಾ ಲೋಕಲ್ ಬೋರ್ಡಿನಲ್ಲಿ ಈ ವರೆಗೆ ಮುಸಲ್ಮಾನರಿಗೆ ಒಂದೂ ಸ್ಥಳವಿರಲಿಲ್ಲ. ಇದೀಗ ಸರಕಾರದವರು ಅವರಿಗಾಗಿ ಒಂದು ಸ್ಥಳವನ್ನು ನಿರ್ಮಿಸಿರುವರು.

ಕೊಡಗು ಜಿಲ್ಹಾ ಕಾಂಗ್ರೆಸ್ ಸಮಿತಿಯನ್ನು ಕ. ಪ್ರಾಂ. ಕಾಂ. ಕಮಿಟೆಯವರು ರದ್ದುಪಡಿಸಿ ಹೊಸ 'ಎಡ್‌ಹಾಕ್' ಸಮಿತಿ ರಚಿಸಿದ್ದು ಅದರ ಪ್ರಥಮ ಸಭೆ ಕಳೆದವಾರ ಮಡಿಕೇರಿಯಲ್ಲಿ ನಡೆಯಿತು.

ಕನ್ನಡ ಸಂಸ್ಥಾನ

ಕೊಪ್ಪಳ ಜಾಗೀರಿಯಲ್ಲಿಯ ರೈತರ ಪರಿಸ್ಥಿತಿ ಕಂಗಾಲಾಗಿದೆ ಹಣ ಕೊಟ್ಟರೂ ಧಾನ್ಯ ಸಿಕ್ಕದಾಗಿದೆ. ಸೀದಾ ಪದ್ಧತಿಯಂತೂ ವಿಚಿತ್ರವಾಗಿದೆ. ೨-೩ ವರುಷಗಳಿಂದ ಪರಿಸ್ಥಿತಿ ಕೆಟ್ಟದ್ದರೂ ಕಾರ್ಡು ಕೊಡಲ್ಪಟ್ಟಿಲ್ಲ ಇನ್ನು ಬರಿ ಜನಗಣತಿ ನಡೆದಿದೆ. ಕೂಡಲೆ ಬರಗಾಲ ಸಾರಿ ನಿವಾರಣೋಪಾಯ ಕೈಕೊಳ್ಳಬೇಕೆಂದು ರೈತರು ನಿರೀಕ್ಷಿಸುತ್ತಾರೆ.

ದಾವಣಗೇರಿಯ ಪ್ರೌಢ ಶಾಲೆಯ ದಿನಾಚರಣೆ ಹರಳಹಳ್ಳಿ ಕೊಟ್ರೂರ ಬಸವಪ್ಪನವರ ಅಧ್ಯಕ್ಷತೆಯಲ್ಲಿ ಅನೇಕ ಕಾರ್ಯಕ್ರಮಗಳೊಡನೆ ಸಾಂಗವಾಯಿತು.

ಜಮಖಂಡಿ ಸಂಸ್ಥಾನ ಶಾಸನ ಸಭೆಯ ಚುನಾವಣೆ ೮ನೇ ತಾರೀಕು ನಡೆಯಿತು. ಪ್ರಜಾ ಪರಿಷತ್ತಿಗೆ ಎಲ್ಲೆಲ್ಲಿಯೂ ಬೆಂಬಲ ದೊರೆತಿದೆ ಜನರು ಒಳ್ಳೆ ಉತ್ಸಾಹದಿಂದ ಮೆರವಣಿಗೆಯಿಂದ ಬಂದು ಪ್ರಜಾ ಪರಿಷತ್ತಿನ ಹುರಿಯಾಳುಗಳಿಗೆ ಮತಹಾಕಿ ಹೋದರು.

ಮುಧೋಳ ಸಂಸ್ಥಾನದಲ್ಲಿ ಹೊಸ ರಾಜ್ಯಘಟನೆಯನ್ನು ಸಿದ್ಧಪಡಿಸಲು ಬಿ. ಎ. ಟಂಕಸಾಲಿ ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನಿಯಮಿಸಲ್ಪಟ್ಟಿದೆ. ಜೂನ ೩೦ ರೊಳಗಾಗಿ ಸಮಿತಿಯವರು ತಮ್ಮ ಸೂಚನೆಗಳನ್ನು ದರಬಾರಕ್ಕೆ ಒಪ್ಪಿಸಬೇಕು. ದರಬಾರದವರು ಜುಲೈ ಕೊನೆಗೆ ತಮ್ಮ ನಿರ್ಣಯ ಸಾರುವರು. ಹೊಸ ಘಟನೆಯ ಅನುಸಾರ ಚುನಾವಣೆಯಲ್ಲಿ ಒಬ್ಬರನ್ನು ರೀಜೆನ್ಸಿ ಕೌನ್ಸಿಲ್ಲಿನಲ್ಲಿ ತೆಗೆದುಕೊಳ್ಳಲಾಗುವದು.

ಕನಕಗಿರಿಯಲ್ಲಿ ಶ್ರೀ ಕನಕಾಚಲಪತಿ ನೃಸಿಂಹ ದೇವರ ಜಾತ್ರೆ ಪ್ರತಿವರ್ಷದಂತೆ ಈಸಲವೂ ಫಾಲ್ಗುಣ ಶುದ್ಧ ೧೫ ಧ್ವಜಾರೋಹಣ ಬಹುಳ ೫ ಶನಿವಾರ ಶ್ರೀ ಕಲ್ಯಾಣೋತ್ಸವ ಬಹುಳ ೭ ಸೋಮವಾರ ರಥೋತ್ಸವ ಪಂಚರಾತ್ರಾಗಮೋಕ್ತ ಪೂಜಾ ಮೊದಲಾದವುಗಳು ನಡೆಯುವವು. ಈ ದೇವಯಜ್ಞ ಮಹೋತ್ಸವಕ್ಕೆ ಸಕಲರು ಬಂದು ಪರಮಾತ್ಮನ ದರ್ಶನ ಪ್ರಸಾದ ಅನುಗ್ರಹ ಪಡೆಯಬೇಕಾಗಿ ಕಾರ್ಯದರ್ಶಿಗಳ ಬಿನ್ನಹ.

ಅಂತರ್ರಾಷ್ಟ್ರೀಯ

(೫ ನೇ ಪುಟದಿಂದ ಮುಂದರಿದುದು)

ದೇಶಕ್ಕೊಂದು ಹೊಸ ರಾಜ್ಯಘಟನೆಯನ್ನು ದಯಪಾಲಿಸಿದ್ದಾನೆ. ಅದರಲ್ಲಿನ ಮುಖ್ಯ ಎರಡು ವಿಷಯಗಳು ಕಣ್ಣು ಸೆಳೆಯುವಂಥವಿವೆ: ಮೊದಲನೆಯದು, ಚಕ್ರವರ್ತಿ ದೇವಾಂಶ ಸಂಭೂತನೆಂಬುವದನ್ನು ಕಿತ್ತುಹಾಕಿ "ರಾಷ್ಟ್ರದ ಐಕ್ಯದ ಹೆಗ್ಗುರುತು" ಎಂದು ಮಾತ್ರ ಬರೆಯಲಾಗಿದೆ. ಅವನಿಗೆ ಪ್ರಜೆಗಳ ಇಚ್ಛೆಯನ್ವಯ ನಡೆಯುವದು, ಮಂತ್ರಿಮಂಡಲದ ಆಜ್ಞೆಗಳಿಗೆ ಮುದ್ರೆಯೊತ್ತುವದು ಹೊರತು ಬೇರೆ ಅಧಿಕಾರವಿಲ್ಲ. ಇನ್ನೊಂದು ವಿಷಯವೆಂದರೆ, ಜಪಾನಿರಾಷ್ಟ್ರ ಯುದ್ಧ ಹೂಡುವ ರಾಷ್ಟ್ರೀಯ ಹಕ್ಕನ್ನು ಬಿಟ್ಟುಕೊಟ್ಟದೆಯೆಂದು ಅದರಲ್ಲಿ ಕಾಣಿಸಲಾಗಿದೆ. ಕಾಯದೆ ಹಕ್ಕೆಲ್ಲ ಶಾಸನ ಸಭೆಗಳಿಗೆ ಬಿಟ್ಟುಕೊಡಲ್ಪಟ್ಟಿದೆ.

ಹಳೆಯ ಘಟನೆಯ ೧೭ ಕಲಮುಗಳಲ್ಲೆಲ್ಲವನ್ನು ಪೂರ್ಣ ಕಿತ್ತುಹಾಕಲಾಗಿದ್ದು ಉಳಿದ ಎಲ್ಲ ತಿದ್ದಿ ಬರೆಯಲಾಗಿದೆ. ಪಾಟ್ಸ್‌ಡ್ಯಾಂ ಆದೇಶವನ್ನು ಅಂಗೀಕರಿಸಿದ ಪರಿಣಾಮವಾಗಿ ಸರಕಾರದ ಸ್ವರೂಪವನ್ನು ನಿರ್ಣಯಿಸುವ ಹಕ್ಕನ್ನು ಪ್ರಜೆಗಳಿಗೇ ಬಿಟ್ಟುಕೊಡಲಾಗಿದೆಯೆಂದು ಹಿರೋಹಿಟೋ ಹೇಳಿದ್ದಾನೆ.

ಹಾಸನ ಜಿಲ್ಹಾ ಸಮ್ಮೇಲನ ತ್ರಿವರ್ಯಮಂ ಶ್ರೀ ಚ. ಪುಲ್ಲಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ಮಾರ್ಚ ೨೯, ೩೦ ಕ್ಕೆ ನಡೆಯುವದು.

ಮೈಸೂರು ಸರಕಾರದವರು ಲಕ್ಕವಳ್ಳಿ ಯೋಜನೆಯನ್ನು ಬೇಗನೆ ಕಾರ್ಯರೂಪದಲ್ಲಿ ತರಲಿರುವರು. ಅಲ್ಲದೆ ಕೆಲ ಕೆಲ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಕೈಕೊಂಡು ಆಹಾರ ಪದಾರ್ಥಗಳನ್ನು ಹೆಚ್ಚು ಬೆಳೆಯಲಿಕ್ಕೆ ಅವಕಾಶ ಕಲಿಸಿ ಕೊಡಬೇಕೆಂದು ಯೋಜಿಸಲಾಗಿದೆ. ಲಕ್ಕವಳ್ಳಿ ಯೋಜನೆಗೆ ೧೦ ಕೋಟಿ ರೂಪಾಯಿ ವೆಚ್ಚದ ಅಂದಾಜ ಮಾಡಲಾಗಿದೆ. ಇದರಿಂದ ೧೫೦ ಸಾವಿರ ಎಕರೆ ಭೂಮಿಗೆ ನೀರುಣಿಸಲಾಗುವದು.

ಮಿರಜ ಮುನಸಿಪಾಲಿಟಿ ಚುನಾವಣೆಯಲ್ಲಿ ಪ್ರಜಾಪರಿಷತ್ತಿನ ೫, ಒಕ್ಕಲಿಗ ಕೂಲಿಕಾರ ಸಂಘ ೫, ಹಿಂದು ಸಭಾ ೩, ಸ್ವತಂತ್ರ ೪ ಹೀಗೆ ೧೭ ಜನ ಆರಿಸಿ ಬಂದಿರುವರು. ಶ್ರೀ ಸ್ವಾಮಿ, ಕುಲಕರ್ಣಿ ಮೀರಾಸಾಹೇಬ ಜಾಫರ, ಮುರಿಗೆಯ್ಯ ಒಂಟಮುರಿ, ಮಾರುತಿ ಕುಂಚಿರೆ, ಶಂಕರರಾವ ಕೋರೆ, ಮಹಾದೇವ ಪವಾರ, ಬಾಬೂ ಹರಗೆ, ಡಾ. ಗೋಖಲೆ, ರಾಮಭಾವೂ ಜಾಧವ, ನರಹರಿ ಕರಮರಕರ, ಭಾವೂಸಾಹೇಬ ಕರಮರಕರ, ನೀಲಕಂಠರಾವ ಮಹಾಬಲ, ಎಸ್. ಬಿ. ಜೋಶಿ, ಬಾಬುರಾವ ಪಟೇಲ ಮತ್ತು ಜೀವನದಾಸ ಶಹಾ ಇವರು ಆರಿಸಿ ಬಂದಿರುವರು.

ಕೋಲಾರ ಚಿನ್ನದ ಗಿರಣಿಯ ೩೦ ಸಾವಿರ ಜನ ಕೆಲಸಗಾರರು ಕಳೆದ ೬೦ ದಿನಗಳಿಂದ ಸಂಪು ನಡೆಸಿದ್ದು ಅವರ ಪರಿಸ್ಥಿತಿ ಬಹಳ ಕಂಗಾಲಾಗಿದೆ. ಈ ಸಂಪಿನಿಂದ ೧ ಲಕ್ಷ ಜನರು ನಿರ್ಗತಿಕರಾಗಿದ್ದಾರೆ. ಅವರಿಗೆ ಸಹಾಯ ಮಾಡಿ ಅವರನ್ನುಳಿಸಿರೀ ಉಳಿಯಿರೆಂದು ಕೇಳಿಕೊಳ್ಳಲಾಗಿದೆ.

ಶಹಾಪುರದಲ್ಲಿಯ ವಸ್ತ್ರಕರು ಕಳೆದ ೭-೮ ವರ್ಷಗಳಿಂದ ನಡೆಸಿಕೊಂಡು ಬಂದು ೧೯೪೦ ರಲ್ಲಿ ಸರಕಾರಕ್ಕೆ ಒಪ್ಪಿಸಿದ ಕನ್ನಡ ಶಾಲೆ ದಿನದಿನಕ್ಕೆ ಬೆಳೆಯುತ್ತಿದ್ದು ೧೭೫ ವಿದ್ಯಾರ್ಥಿಗಳು ಈಗ ಅಲ್ಲಿ ಕಲಿಯುತ್ತಿರುವರು.

ಕೊಲ್ಹಾಪುರದ ಪಂತಪ್ರಧಾನ ಮಿಚೆಲ್‌ರು ಪತ್ರಿಕಾ ಪರಿಷತ್ತನ್ನು ಕೂಡಿಸಿ ತೊರಗಲ ರಾಯಬಾಗಭಾಗದಲ್ಲಿ ಬರಗಾಲ ಪರಿಸ್ಥಿತಿಯನ್ನು ವಿವರಿಸಿದರು. ರಾಯಬಾಗ ಭಾಗದಲ್ಲಿ ಕೃಷ್ಣಾನದಿಗೆ ಪಂಪು ಹಚ್ಚಿ ನದಿಯ ದಂಡೆಯ ಮೇಲೆ ಅನ್ನಧಾನ್ಯ ಬೆಳೆಸುವ ಯೋಜನೆ ಕೈಕೊಳ್ಳಲಾಗುವದೆಂದು ಹೇಳಿದರು. ೭೫ ಪಂಪುಗಳು ಈ ಕಾರ್ಯಕ್ಕಣಿಯಾಗುವವು. ತೊರಗಲ್ಲ ಭಾಗಕ್ಕಾಗಿ ೩೦ ಸಾವಿರ ರೂಪಾಯಿ ತಗಾಯಿ ಕೊಡಲಾಗುವದು ರಾಯಬಾಗಭಾಗಕ್ಕೆ ಈಗಾಗಲೆ ೧ಲಕ್ಷ ರೂಪಾಯಿ ತಗಾಯಿ ಕೊಟ್ಟದ್ದು ಅವಶ್ಯವೆನಿಸಿದರೆ ಇನ್ನೂ ೨॥ ಲಕ್ಷ ರೂಪಾಯಿ ತಗಾಯಿ ಕೊಡಲಾಗುವದೆಂದೂ ಹೇಳಿದರು. ಇನ್ನಿತರ ಉಪಾಯಗಳನ್ನೂ ಕೈಕೊಳ್ಳಲಾವದೆಂದು ಅವರು ಹೇಳಿದರು

ಹಿಂದುಸ್ತಾನ

ಮುಂಬಯಿ

ಹಿಂದು ವಿದ್ಯಾರ್ಥಿ ಸಂಘದ ಕಾರ್ಯದರ್ಶಿಗಳಾದ ವಸಂತರಾವ ಕಾಳೆಯವರು ಬೇರೆ ಕೆಲವು ಸದಸ್ಯರೊಂದಿಗೆ ಹಿಂದುಮಹಾಸಭೆಗೆ ರಾಜೀನಾಮೆ ಕೊಟ್ಟು ಕಾಂಗ್ರೆಸ ಸೇರಿರುವರು. ಹಿಂದೀ ಸ್ವಾತಂತ್ರ್ಯ ಸಂಗ್ರಾಮ ನಡಿಸಿದ ಸಂಸ್ಥೆ ಕಾಂಗ್ರೆಸ್ಸೊಂದೇ ಎಂದು ಮನವರಿಕೆಯಾದ್ದರಿಂದ ಕಾಂಗ್ರೆಸ ಸೇರಿದೆವೆಂದು ಅವರು ಹೇಳಿದರು.

ಗೋವಾ ಕಾಂಗ್ರೆಸ ಕಮೀಟಿಯವರು ಹಿಂದೀ ರಾಷ್ಟ್ರೀಯ ಮಹಾಸಭೆಯು ಚಲೇಜಾವ ಗೊತ್ತುವಳಿಗೆ ಬೆಂಬಲ ಕೊಡುವ ಹಾಗು ಗೋವಾ ದಮನ ಹಾಗು ದೀವದ್ವೀಪಗಳನ್ನು ಬಿಟ್ಟು ಹೊರಟಿದ್ದು ಹೋಗಲು ಪೋರ್ತುಗೀಜರಿಗೆ ಕೇಳಿಕೊಳ್ಳುವ ಗೊತ್ತುವಳಿಯನ್ನು ಸ್ವೀಕರಿಸಿದ್ದಾರೆ. ಇಲ್ಲಿ ಮತ್ತು ಪರದೇಶಗಳಲ್ಲಿರುವ ಗೋವಾನೀ ಜನರು ಹಿಂದೀ ಸ್ವಾತಂತ್ರ್ಯ ಸಂಗ್ರಾಮಕ್ಕೆ ಬೆಂಬಲ ಕೊಡಬೇಕೆಂದೂ ಕೇಳಿಕೊಳ್ಳಲಾಯಿತು.

ಮುಂಬಯಿಯಲ್ಲಿ ೮ ನೇ ತಾರೀಖು ಸಾಯಂಕಾಲ ಪ್ರಿನ್ಸೆಸ ಡಾಕದ ಹತ್ತರ ದೊಡ್ಡದೊಂದು ವಖಾರಕ್ಕೆ ಬೆಂಕಿಹತ್ತಿ ಅದರಲ್ಲಿಯ ಹೇರಳವಾದ ತಂಬಾಕ, ಸಿಗರೇಟ ಹಾಗು ಕಾಗದ ಸುಟ್ಟು ಹೋದವು. ೫೦ ಸಾವಿರ ರೂಪಾಯಿ ಹಾನಿ ಸಂಭವಿಸಿತು.

ಪುಣೆಯ ಮಹಾರಾಷ್ಟ್ರ ಸಾಹಿತ್ಯ ಮಂದಿರದಲ್ಲಿ ೩ ನೇ ತಾರೀಖು ಕರ್ನಾಟಕ ಸಂಘದ ಉದ್ಘಾಟನವಾಯಿತು. ಉದ್ಘಾಟಕರಾದ ದಿವಾಕರ ರಂಗರಾಯರು ಬರಲಿಲ್ಲವಾದ್ದರಿಂದ ಅವರ ಸಂದೇಶ ಓದಿ ತೋರಿಸಲಾಯಿತು. ಪ್ರೊ. ಮುಗಳಿಯವರು ಭಾಷಣ ಮಾಡಿದರು. ಕರ್ನಾಟಕಕ್ಕೆ ಬೇಕಾದ ತೇಜೋವಲಯವೆಂಬ ಬಗ್ಗೆ ಅವರು ಮಾತಾಡಿದರು. ಅಧ್ಯಕ್ಷ ಶ್ರೀ ಡಿ. ಸಿ. ಪಾವಟೆಯವರು ಸಮಾರೋಪ ಮಾಡಿದರು.

ಕರ್ಹಾಡದಲ್ಲಿ ಶಾಹೀರ ನಿಕಮ ಇವರನ್ನು ೧೦ ನೇ ತಾರೀಖು ಮುಂಜಾನೆ ಸಂರಕ್ಷಣ ಕಾಯದೆಯನ್ವಯ ಸೆರೆಹಿಡಿಯಲಾಯಿತು. ಇದರಿಂದ ನಗರದಲ್ಲಿ ಸಂಪೂರ್ಣ ಹರತಾಳವಾಚರಿಸುತ್ತಿರುವರು.

ನಾಮದಾರ ಆಗಾಖಾನರ ವಜ್ರಮಹೋತ್ಸವ ೧೦ ನೇ ತಾರೀಕು ಮುಂಬಯಿಯಲ್ಲಿ ಒಳ್ಳೆ ವಿಜೃಂಭಣೆಯಿಂದ ಜರುಗಿತು. ಬ್ರೆಬರ್ನ್‌ಸ್ಟೇಡಿಯಮದ ಕ್ರೀಡಾಂಗಣದಲ್ಲಿ ಅವರ ವಜ್ರ ತುಲಾಭಾರ ನಡೆಯಿತು. ಈ ಬಗ್ಗೆ ವಿಮಾನದಿಂದ ೬೦ ಲಕ್ಷ ರೂಪಾಯಿ ಬೆಲೆ ಬಾಳುವ ವಜ್ರಗಳು ೧೮ ಉಕ್ಕಿನ ಪೆಟ್ಟಿಗೆಗಳಲ್ಲಿ ಬಂದಿದ್ದವು. ಉತ್ಸವಕ್ಕೆ ೧ ಲಕ್ಷ ಜನ ಸಮ್ಮಿಲಿತರಾಗಿದ್ದರು. ಅವರ ತೂಕ ೨೪೩॥ ಪೌಂಡು ಆಯಿತು. ಆ ವೇಳೆ ಉತ್ಸವ ಕಮೀಟಿ ಅಧ್ಯಕ್ಷರಾದ ಫಜಲಭಾಯರು ಮಾನಪತ್ರವನ್ನೋದಿದರು. ಇಸ್ಲಾಮದ ಉದ್ಧಾರಕ್ಕಾಗಿ ಈ ನಿಧಿಯ ವಿನಿಯೋಗ ಮಾಡಲಾಗುವದು.

ಸುಭಾಷಚಂದ್ರಬೋಸರು ಜೀವಂತ ಇರುವರೆ ಇಲ್ಲವೆ ಸತ್ತಿರುವರೆ ಎಂಬದನ್ನು ತಿಳಿದುಕೊಳ್ಳಲು ಅವರ ಆತ್ಮವನ್ನು ಏಕೆ ಕರೆಯಬಾರದೆಂದು ಶ್ರೀ ವಿ. ಡಿ. ಋಷಿಯವರಿಗೆ ಅನೇಕರು ಕೇಳಿರುವರಂತೆ. ಆ ಸಂಬಂಧದಲ್ಲಿ ಅವರು ಬರೆಯುತ್ತಿದ್ದು . ದ್ವಿಪಕ್ಷೀಯವಾಗಿದೆ ಆಧ್ಯಾತ್ಮವಾದಿಗಳು ಅದನ್ನು ಕರೆಯಬಹುದು ಆದರೆ ಎರಡನೆ ಪಕ್ಷದಿಂದ ಅದಕ್ಕೆ ಉತ್ತರ ದೊರೆಯದೆ ಹೋದರೆ ಪ್ರಗತಿ ಸಾಧ್ಯವಿಲ್ಲ. ನಾನು ಆತ್ಮವನ್ನು ಕರೆದು ನೋಡಿದೆ. ಆದರೆ ಉತ್ತರ ದೊರೆಯಲಿಲ್ಲ ಆದ್ದರಿಂದ ಖಂಡಿತವಾಗಿ ಏನೂ ಹೇಳಲಿಕ್ಕೆ ಬರುವದಿಲ್ಲೆಂದು ಅವರು ಹೇಳಿರುವರು.

ಮದ್ರಾಸ

ವಾಶಿಂಗಟನದಲ್ಲಿರುವ ಸಂಯುಕ್ತ ಆಹಾರ ಮಂಡಳವು ಯಾವ ನಿರ್ಣಯಕ್ಕೆ ಬರದಿದ್ದರೂ ಸಯಾಮದಿಂದ ಅಧಿಕ ಪ್ರಮಾಣದಲ್ಲಿ ಮದ್ರಾಸಕ್ಕೆ ಅಕ್ಕಿ ಬರುವದೆಂದು ಮದ್ರಾಸ ಸರಕಾರ ನಂಬಿದೆ. ಅದೇ ರೀತಿ ಒಣ ಖರ್ಜೂರ ಬಟಾಟೆ ಗೋವಿನ ಜೋಳ ಮೊದಲಾದವುಗಳನ್ನು ತರಿಸುವ ವಿಚಾರವೂ ನಡೆದಿದೆ.

ಮದ್ರಾಸ ಶಾಸನ ಸಭೆಗೆ ಕಾಂಗ್ರೆಸ್ ಪರವಾಗಿ [illegible] ಜನರು ಅವಿರೋಧ ಆರಿಸಿ [illegible] ರುವರು. ಮುಸ್ಲಿಂಲೀಗಿನ [illegible] ಜನ ಅವಿರೋಧ ಆರಿಸಿ ಬಂದಿರುವರು.

ಹೊಸದಿಲ್ಲಿ

ದಕ್ಷಿಣ ಅಫ್ರಿಕಾ ಸರಕಾರದ ವಿರುದ್ಧ ಪ್ರತಿಕಾರೋಪಾಯಗಳನ್ನು ಕೈಕೊಳ್ಳುವ ಸಲುವಾಗಿ ಆ ದೇಶದೊಡನೆ ವ್ಯಾಪಾರ ಸಂಬಂಧ ಕಡಿದುಕೊಳ್ಳಲು ಹಿಂದುಸ್ತಾನ ಸರಕಾರವು ನಿರ್ಧರಿಸಿದೆಂದು ಡಾ. ಖರೆಯವರು ಕೇಂದ್ರ ವಿಧಿಮಂಡಲದಲ್ಲಿ ತಿಳಿಸಿದರು.

ಕೇಂದ್ರ ಸರಕಾರದ ಸುದ್ದಿ ಮತ್ತು ಕಲಾ ಖಾತೆಗೆ ಸಹಾಯ ಧನ ಕೊಡಬಾರದೆಂದು ಶಾಸನ ಸಭೆ ನಿರ್ಣಯಿಸಿದ್ದರಿಂದ ಮೇ ತಿಂಗಳಿಂದ ಸರಕಾರವು ಈ ಖಾತೆಯನ್ನು ರದ್ದುಗೊಳಿಸಲು ನಿರ್ಧರಿಸಿದೆ.

ಕೇಂದ್ರ ವಿಧಿಮಂಡಳದ ಅವಧಿಯನ್ನು ಈ ವರ್ಷದ ಕೂನೆಯ ವರೆಗೆ ಬೆಳಿಸಲಾಗಿದೆ.

ಅ. ಭಾ. ತಂಬಾಕ ಬೆಳೆವವರ ಮೊದಲನೆ ಪರಿಷತ್ತು ಹೊಸದಿಲ್ಲಿಯಲ್ಲಿ ಇದೇ ೨೪ ರಿಂದ ೩೦ ರವರೆಗೆ ಪ್ರೊ. ಎನ್. ಜಿ. ರಂಗಾ ಇವರ ಅಧ್ಯಕ್ಷತೆಯಲ್ಲಿ ನಡೆಯುವದು. ಗುಲಾಬ ಭೀಕ ನಾರಂಗರು ಪರಿಷತ್ತಿನ ಉದ್ಘಾಟನ ಮಾಡುವರು.

ಆಹಾರ ಪದಾರ್ಥಗಳನ್ನು ಇನ್ನುಮುಂದ ಪೋಷ್ಟಿನ ಮೂಲಕ ಹೊರಗೆ ಕಳಿಸಲಾಗದೆಂದು ನಿಷೇಧಿಸಲಾಗಿದೆ. ಅಂಥ ಯಾವದೇ ಪಾರ್ಸಲನ್ನು ಅಂಚೆಖಾತೆಯವರು ಹೊರಗೆ ಕಳಿಸುವದಿಲ್ಲ ಸೇನಾಪತಿಗಳು ಒಂದು ಆಜ್ಞೆ ಹೊರಡಿಸಿ ಯಾವ ಸೈನಿಕರೂ ಆಹಾರ ಪದಾರ್ಥಗಳನ್ನು ಹೊರಗೆ ಕಳಿಸಬಾರದೆಂದು ಸೂಚಿಸಿದ್ದಾರೆ.

ಪತಿಯಾಳಾ ಸಂಸ್ಥಾನದವರು ಪ್ರಜಾಪರಿಷತ್ತನ್ನು ನಿರ್ಬಂಧಿಸಿರುವರಷ್ಟೆ. ಆ ನಿರ್ಬಂಧಕ ಹುಕುಮನ್ನು ಮೀರಿದರೆಂದು ಪ್ರಜಾಪರಿಷತ್ತಿನ ೪೦ ಜನ ಪ್ರಮುಖರನ್ನು ಭಾಲೆಂದಾ ಎಂಬಲ್ಲಿ ಸೆರೆ ಹಿಡಿದಿದ್ದಾರೆ. ಪೋಲೀಸರು ಲಾಠೀ ಪ್ರಯೋಗ ಮಾಡಿ ಜನರನ್ನು ಚದುರಿಸಿದರು. ೧೪೪ ಕಲಮು ಜಾರಿಯಲ್ಲಿದೆ.

ಹಿಂದುಸ್ತಾನದಲ್ಲಿ ಸದ್ಯಕ್ಕೆ ೩೬೧೭೩ ಇಟಾಲಿಯನ್ ಯುದ್ಧ ಕೈದಿಗಳಿದ್ದು ಅವರಿಗಾಗಿ ಒಟ್ಟಾರೆ ೨೮ ಕೋಟಿ ರೂಪಾಯಿ ವೆಚ್ಚವಾಯಿತು. ಮತ್ತು ೧೯೪೫-೪೬ ಕ್ಕೆ ಅದು ೫॥ ಕೋಟಿ ರೂಪಾಯಿ ಆಗುವದು. ಇದೆಲ್ಲ ಹಿಂದುಸ್ತಾನದ ಬೊಕ್ಕಸಕ್ಕೆ ವೆಚ್ಚವಾಗುವದಿಲ್ಲ ಬ್ರಿಟಿಶ್ ಸೈನಿಕರ ಸಲುವಾಗಿ ಈಗ ಹಡಗಗಳನ್ನೆಲ್ಲ ಉಪಯೋಗಿಸುತಿರುವದರಿಂದ ಇಟಾಲಿಯನ್ ಕೈದಿಗಳನ್ನು ಕಳಿಸುವದಕ್ಕೆ ವಿಲಂಬವಾಗುತಿದೆಯಂತೆ.

ಬಂಗಾಲದಲ್ಲಿರುವ ಸೈನಿಕರಿಗಾಗಿ ೧೯೪೪ ಎಪ್ರಿಲದಿಂದ ೧೯೪೫ ಮಾರ್ಚ ಕೊನೆಯ ವರೆಗೆ ೧೩೨೪೯ ದನಗಳನ್ನು ಕೊಲ್ಲಲಾಯಿತು, ೧೯೪೫ ಎಪ್ರಿಲದಿಂದ ಡಿಸೆಂಬರ ವರೆಗೆ ೧೪೮೪೪ ದನಗಳನ್ನು ಕೊಲ್ಲಲಾಯಿತು ಎಂದು ಕೇಂದ್ರ ವಿಧಿ ಮಂಡಳದಲ್ಲಿ ಸಾರಲಾಯಿತು.

ರಾಷ್ಟ್ರಪತಿ ಮೌಲಾನಾ ಅಬುಲ್‌ಕಲಂ ಆಝಾದರು ಮತ್ತೆ ೧೦ ನೇ ತಾರೀಕು ವಾಯಿಸರಾಯರ ಭೆಟ್ಟಿ ತೆಗೆದುಕೊಂಡರು. ಆಹಾರ ಪರಿಸ್ಥಿತಿಯ ಬಗ್ಗೆ ಚರ್ಚೆ ನಡೆಯಿತೆಂದು ತಿಳಿಯುತ್ತದೆ.

ಮುಖ್ಯ ಸೇನಾಪತಿ ಅಚಿನ್‌ಲೆಕ್ಕರು ಒಮ್ಮೆಲೆ ಇಂಗ್ಲಂಡಿಗೆ ಹೋಗಿರುವರು. ಇತ್ತೀಚೆ ಆದ ನಾವಿಕರ ಸಂಪು ಮುಂತಾದ್ದರ ಸಂಬಂಧದಲ್ಲಿ ಭಾರತ ಮಂತ್ರಿಗಳೊಡನೆ ವಿಚಾರ ಮಾಡಲು ಹೋಗಿರುವರೆಂದು ಕೆಲವರು ತರ್ಕಿಸುತ್ತಿದ್ದರೆ ಇನ್ನೂ ಹಲವರು ಭಾವೀಘಟನೆಯಲ್ಲಿ ಸಂರಕ್ಷಣ ಮತ್ತು ಸೈನ್ಯ ವಿಷಯದ. ಕರಾರುಗಳ ಬಗ್ಗೆ ವಿಚಾರ ವಿನಿಮಯ ಮಾಡಲು ಹೋಗಿರುವರೆಂದು ಹೇಳಲಾಗುತ್ತದೆ.

ಮಧ್ಯಪ್ರಾಂತ

ಪ್ರಾಂತಿಕ ಶಾಸನ ಸಭೆಗೆ ನಿಲ್ಲಿಸಲಿರುವ ಕಾಂಗ್ರೆಸ ಹುರಿಯಾಳುಗಳ ಸಂಬಂಧದಲ್ಲಿ ಮತಭೇದವುಂಟಾಗಿ ನಾಗಪುರದ ಜನರಲ್ ಅವಾರಿಯವರು ಉಪೋಷಣ ಪ್ರಾರಂಭಿಸಿದ್ದರಷ್ಟೆ. ಉಪವಾಸವನ್ನು ನಿಲ್ಲಿಸಿ ಸಾಧ್ಯವಾದರೆ ನನ್ನ ಭೆಟ್ಟಿಗೆ ಬನ್ನಿರೆಂದು ಸರದಾರ ವಲ್ಲಭಭಾಯಿವರು ಅವರಿಗೆ ಬರೆದಿದ್ದರು. ತತ್ಪರಿಣಾಮವಾಗಿ ಅವಾರಿಯವರು ೨೧ ದಿನ ಉಪವಾಸ ಮಾಡಿ ೧೦ ನೇ ತಾರೀಕು ಪಾರಣೆ ಮಾಡಿದರು. ಅವರ ತೂಕ ೩೦ ಪೌಂಡು ಕಡಿಮೆಯಾಗಿದೆ.

ಸಂಯುಕ್ತಪ್ರಾಂತ--ಬಿಹಾರ

ಅಲಹಾಬಾದದಲ್ಲಿ ಒಂದು ಲಾರಿಯಲ್ಲಿ ರಾಷ್ಟ್ರೀಯ ಮುಸಲ್ಮಾನರು ಕುಳಿತು ಪೆಟ್ರೋಲ ಪಂಪಿನ ಹತ್ತರ ಪೆಟ್ರೋಲ ತುಂಬಿಸುತಿರುವಾಗ ಮುಸ್ಲಿಂಲೀಗಿನ ಕೆಲವರು ಅವರ ಮೇಲೆ ದಾಳಿ ಮಾಡಿದರು ೧೫ ಜನರಿಗೆ ಗಾಯವಾಗಿದ್ದು ಅವರನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ಇದರಿಂದ ನಗರದಲ್ಲೆಲ್ಲ ಗಲಿಬಿಲಿಯುಂಟಾಗಿ ಆ ಭಾಗದಲ್ಲಿಯ ಅಂಗಡಿಗಳೆಲ್ಲ ಮುಚ್ಚಿದವು.

ಬೇಗುಸರಾಯ ಸಬ್ ಡಿವ್ಹಿಜನ್‌ದ ಶ್ರೀಪುರ ಎಂಬಲ್ಲಿ ಮಹಾತ್ಮಾಗಂಧಿಯವರ ಗುಡಿ ಕಟ್ಟಿಸಿರುತ್ತಾರೆ. ಅಲ್ಲದೆ ಅವರ ಮೂರ್ತಿಯನ್ನು ಅಲ್ಲಿ ಸ್ಥಾಪಿಸಿ ನಿತ್ಯ ಪೂಜಾದಿಗಳು ನಡೆಯುತ್ತವೆ. ಹೀಗೆ ವ್ಯಕ್ತಿಯ ಜೀವನದಲ್ಲಿಯೇ ಗುಡಿ ಕಟ್ಟಿ ಪೂಜೆ ಮಾಡುತಿರುವ ಉದಾಹರಣೆ ಇದೆ ಮೊದಲನೆಯದು.

ಅಯೋಧ್ಯಾ ಪ್ರಾಂತಿಕ ಹಿಂದೂ ಮಹಾಸಭೆಯ ಅಧ್ಯಕ್ಷ ಮಹೇಶ್ವರ ದಯಾಳ ಶೇಠ ಇವರು ಮಹಾಸಭೆಗೆ ರಾಜೀನಾಮೆ ಕೊಟ್ಟಿದ್ದು ಕಾಂಗ್ರೆಸ ಸದಸ್ಯರಾಗಿರುವರೆಂದು ವಿಶ್ವಸನೀಯವಾಗಿ ತಿಳಿಯುತ್ತದೆ. ಅವರು ೨೩ಕ್ಕೆ ಪೂನಾದಿಂದ ಮುಂಬಯಿಗೆ ಬಂದು ಮಹಾತ್ಮಾ ಗಾಂಧಿಯವರನ್ನು ಕಾಣಲಿರುವರು.

ಜಯಪ್ರಕಾಶ ನಾರಾಯಣ ಮತ್ತು ರಾಮ ಮನೋಹರ ಲೋಹಿಯಾ ಇವರ ಬಿಡುಗಡೆ ಮಾಡಲು ಸಂಯುಕ್ತ ಪ್ರಾಂತದ ಸರಕಾರದವರು ವಿರೋಧಿಸುತ್ತಿರುವರು. ರೆಜಿನಾಲ್ಡ ಸೊರೆನ್‌ಸನ್‌ರು ಕಾಮನ್ಸದಲ್ಲಿ ಈ ಬಗ್ಗೆ ಪ್ರಶ್ನೆ ಕೇಳಿದಾಗ ವಿಚಾರ ನಡೆದಿದೆಂದು ಉಪಭಾರತ ಮಂತ್ರಿ ಹೆಂಡರಸನ್‌ರು ಹೇಳಿದರು.

ಬಿಹಾರದ ಗವರ್ನರರು ಕಾಂಗ್ರೆಸ್ ಧುರೀಣರಾದ ಬಾಬೂ ರಾಜೇಂದ್ರ ಪ್ರಸಾದ, ಶ್ರೀ ಶ್ರೀಕೃಷ್ಣ ಸಿಂಹ ಶ್ರೀ ಅನುಗ್ರಹ ನಾರಾಯಣಸಿಂಹ ಇವರನ್ನು ಸರಕಾರ ಭವನಕ್ಕೆ ಕರೆಯಿಸಿಕೊಂಡು ಭಾವೀ ಮಂತ್ರಿಮಂಡಳದ ರಚನೆಯ ಬಗ್ಗೆ ಮಾತುಕತೆ ನಡೆಸಿದರು.

ಬಂಗಾಲ--ಆಸಾಮ

ಬಂಗಾಲದಲ್ಲಿ ಇದೇ ತಾ. ೧೮ ರಿಂದ ಆಹಾರ ಸೀದಾ ಅರ್ಧದಷ್ಟು ಕಡಿಮೆ ಮಾಡಿದ್ದು ಅಂದಿನಿಂದ ಪ್ರತಿಯೊಬ್ಬ ಪ್ರೌಢನಿಗೆ ಒಂದು ವಾರಕ್ಕೆ ೪ ಸೇರು ಧಾನ್ಯದ ಬದಲು ೩ ಸೇರು ೧೦ ಛಟಾಕ ಧಾನ್ಯ ಮಾತ್ರ ಕೊಡಲಾಗುವದು.

ಆಸಾಮ ಶಾಸನ ಸಭೆಗೆ ಕಾಂಗ್ರೆಸ ಹುರಿಯಾಳಾದ ಶ್ರೀ ದೇವೇಶ್ವರ ಶರ್ಮರು ಅವಿರೋಧ ಅಧ್ಯಕ್ಷರಾಗಿ ಆರಿಸಿ ಬಂದಿದ್ದಾರೆ.

ಆಸಾಮ ಸರಕಾರದ ಮೊದಲನೆ ಮುಂಗಡ ಪತ್ರಿಕೆಯನ್ನು ಅರ್ಥಸಚಿವರು ಮಂಡಿಸಿದರು. ಈ ವರ್ಷ ೫೧ ಲಕ್ಷ ರೂಪಾಯಿ ಉಳಿತಾಯವಾಗಿದೆ.

ಯುದ್ಧೋತ್ತರ ಪುನರ್ಘಟನೆ ನಿಧಿಗಾಗಿ ಕೇಂದ್ರ ಸರಕಾರದವರು ಆಸಾಮಕ್ಕೆ ೨॥ ಕೋಟಿ ರೂಪಾಯಿ ಕೊಟ್ಟಿದ್ದಾರೆ. ಮುಖ್ಯಮಂತ್ರಿಗಳು ಆಯಾ ಪಕ್ಷಗಳ ಧುರೀಣರಿಗೆ ಪತ್ರಬರೆದು ಯೋಜನೆಗಳ ಬಗ್ಗೆ ಅಭಿಪ್ರಾಯ ಕೇಳಿರುವರು.

ಪಂಡಿತ ಜವಾಹರಲಾಲ ನೆಹರುರವರು ಕಲಕತ್ತಾ ವಿಶ್ವವಿದ್ಯಾಲಯದ ಪದವೀದಾನ ಭಾಷಣ ಮಾಡಿದರು. ಆ ಕಾಲಕ್ಕೆ ಬಂಗಾಲದ ಗವ್ಹರ್ನರರೊಡನೆ ಅವರ ಮೆರವಣಿಗೆ ನಡೆಯಿತು. ಜವಾಹರಲಾಲರು ೧೧ ನೇ ತಾರೀಕು ಸರಕಾರಿ ಭವನದಲ್ಲಿ ಭೋಜನ ಮಾಡಿದರು.

ಸಿಂಧ--ಪಂಜಾಬ--ಸರಹದ್ದ

ಸಿಂಧದಲ್ಲಿ ಪೋಲೀಸ ಖಾತೆಯಲ್ಲಿಯ ಪೋಲೀಸರು ಆ ಖಾತೆಯಲ್ಲಿಯ ಕಾರಕೂನರ ಸಹಿತವಾಗಿ ಇದೇ ೨೦ ರಿಂದ ಸಂಪು ಹೂಡುವ ಎಚ್ಚರಿಕೆ ಕೊಟ್ಟಿದ್ದಾರೆ. ಸಂಬಳದ ಗ್ರೇಡ ಹೆಚ್ಚಾದನಂತರವೂ ತುಟ್ಟಿ ಭತ್ತೆ ಮತ್ತು ಇನ್ನಿತರ ಭತ್ತೆ ರದ್ದು ಮಾಡಬಾರದಾಗಿ ಅವರ ಬೇಡಿಕೆ. ಅವರೀಬೇಡಿಕೆಗೆ ಪೋಲೀಸ ಇನಸ್ಪೆಕ್ಟರ ಜನರಲ್‌ರ ಮನ್ನಣೆಯಿದ್ದು ಸರಕಾರಕ್ಕೆ ಅದರಂತೆ ತಿಳಿಸಿದ್ದಾರೆ.

ಸಿಂಧ ಸರಕಾರದ ಮುಂಗಡ-ಪತ್ರಿಕೆಯನ್ನು ಶಾಸನ ಸಭೆಯಲ್ಲಿ ಆರ್ಥಿಕ ಮಂತ್ರಿಗಳು ಮಂಡಿಸಿರುವರು. ಅದರಲ್ಲಿ ೨೧೩೧೬೦೦೦ ರೂಪಾಯಿ ಉಳಿತಾಯ ಕಾಣಿಸಲಾಗಿದೆ. ೧೭೫ ಲಕ್ಷ ರೂ. ಭೂಕಂದಾಯ ತುಂಬಿಕೊಳ್ಳುವ ನಿಧಿಗೂ ೩೫ ಲಕ್ಷ ರೂ. ಯುದ್ಧೋತ್ತರ ಯೋಜನೆಗೂ ವರ್ಗಾಯಿಸಲಾಗುವದು. ಕೊನೆಗೆ ೩೧೬೦೦೦ ರೂ. ಉಳಿಯುವವು.

ಸಿಂಧದಲ್ಲಿ ಪೆಟ್ರೋಲದ ಮೇಲಿನ ಮಾರಾಟ ಕರವನ್ನು ಒಂದಾಣೆಯಿಂದ ಎರಡಾಣೆಗೇರಿಸಲಾಗಿನೆಂದು ಮುಖ್ಯಮಂತ್ರಿಗಳು ಸಾರಿದರು.

ಸಿಂಧ ಸರಕಾರದ ೧೯೪೬-೪೭ ನೇ ಇಸ್ವಿಯ ಉತ್ಪನ್ನ ೮೦೩೯೦೦೦ ರೂಪಾಯಿ ಇದ್ದು ಅದರಲ್ಲಿಯ ೮೦೦೧೩೦೦೦ ರೂ. ವೆಚ್ಚ ಹಿಡಿಯಲಾಗಿದೆ.

ಸಕ್ಕರ ಜಿಲ್ಹೆಯ ಒಂದು ಹಳ್ಳಿಯಲ್ಲಿ ದರೋಡೆ ಆರೋಪವಿಂದ ಇಬ್ಬರು ಪೋಲೀಸರ ಬಂಧನವಾಗಿದೆ.

ಸಿಂಧ ಶಾಸನ ಸಭೆಯ ಅಧ್ಯಕ್ಷ ಸ್ಥಳಕ್ಕೆ ಮುಸ್ಲಿಂಲೀಗಿನವರು ಸಯ್ಯದ ಮಿರಾನಶಹಾರವರನ್ನು ನಿಲ್ಲಿಸಲು ನಿರ್ಧರಿಸಿದ್ದಾರೆ. ಲೀಗಿನ ಇನ್ನೊಬ್ಬ ಸದಸ್ಯರಾದ ಶ್ರೀ ಗಜದಾರರು ಅವರನ್ನು ವಿರೋಧಿಸಿರುವರು. ಇದರಿಂದ ಲೀಗಿನವರಲ್ಲಿ ಕ್ಷೋಭೆಯುಂಟಾಗಿದೆ. ಲೀಗ ಕಾರ್ಯದರ್ಶಿ ನವಾಬಜಾದಾ ಲಿಯಾಕತ ಅಲ್ಲೀಖಾನರು ಗಜದಾರರಿಗೆ ಹೀಗೆ ಲೀಗ ಹುರಿಯಾಳನ್ನು ವಿರೋಧಿಸಿದ್ದಾದರೆ ನಿಮ್ಮ ಮೇಲೆ ಶಿಸ್ತುಭಂಗಿನ ಉಪಾಯ ಕೈಕೊಳ್ಳಲಾಗುವದೆಂದು ತಿಳಿಸಿದ್ದಾರೆ.

ಪಂಜಾಬ ಶಾಸನ ಸಭೆಯ ಆಯವ್ಯಯ ಅಧಿವೇಶನವನ್ನು ೧೯ ನೇ ತಾರೀಕಿಗೆ ಕರೆಯಬೇಕೆಂದು ಮುಸ್ಲಿಂ ಲೀಗ ಧುರೀಣರಾದ ನವಾಬ ಮಮದೋತರು ಕೇಳಿಕೊಂಡಿದ್ದಾರೆ.

ಪಂಜಾಬದ ಸಮ್ಮಿಶ್ರ ಮಂತ್ರಿಮಂಡಳದಲ್ಲಿ ನಾಲ್ಕು ಜನರನ್ನು ಈಗ ಆರಿಸಲಾಗಿದೆ. [illegible] ಖಿಜರ ಹಯಾತಖಾನರು ಮುಖ್ಯ ಮಂತ್ರಿಗಳು, ನವಾಬ ಸರ್ ಮುಜಫರ ಅಲ್ಲಿ, ಸರದಾರ ಬಲದೇವಸಿಂಗ ಮತ್ತು ಲಾಲಾ ಭೀಮಸೇನರು ಉಳಿದ ಮಂತ್ರಿಗಳು. ಇನ್ನಿಬ್ಬರು ಮಂತ್ರಿಗಳ ಹೆಸರನ್ನು ಬೇಗನೆ ಪ್ರಸಿದ್ಧಿಸಲಾಗುವದು.

ಸೈನಿಕರ ಗಲಭೆ ಹಾಗು ಹಿಂ. ರಾ. ಸೈನಿಕರ ಶಿಕ್ಷೆಯ ಸಂಬಂಧದಲ್ಲಿ ಸಭೆ ಸೇರಿಸಲು ಹಾಗು ಮೆರವಣಿಗೆ ಪ್ರತಿಬಂಧಿಸಲು ಹೊರಡಿಸಿದ ಹುಕುಮಿನ ಬಗ್ಗೆ ಏನು ಮಾಡಬೇಕೆಂದು ಬಲುಚಿಸ್ತಾನ ಅಂಜುಮಾನ ಈ ವತನದ ಅಧ್ಯಕ್ಷ ಖಾನ ಅಬ್ದುಸ ಸಮದಖಾನರು ಮೌಲಾನಾ ಅಜದ ಮತ್ತು ಖಾನ-ಅಬ್ದುಲ ಗಫರಖಾನರಿಗೆ ಕೇಳಿರುವರು.

ಲಾಹೋರಿನಲ್ಲಿ ೯ ನೇ ತಾರೀಕು ಸಮ್ಮಿಶ್ರಪಕ್ಷದ ರಚನೆಯ ನಿಷೇಧಾರ್ಥ ಮುಸಲ್ಮಾನ ವಿದ್ಯಾರ್ಥಿಗಳು ಅಣಕ ಸ್ಮಶಾನಯಾತ್ರೆ ಹೊರಡಿಸಿದ್ದರು. ಅದು ಸನಾತನ ಧರ್ಮ ಕಾಲೇಜಿನ ಹತ್ತರ ಹೋದಾಗ ಕಾಲೇಜ ವಿದ್ಯಾರ್ಥಿಗಳಲ್ಲಿ ಮತ್ತು ಮೆರವಣಿಗರಲ್ಲಿ ಬಡೆದಾಟವಾಯಿತು. ಪೋಲೀಸರು ಗೋಳೀಬಾರ ಮಾಡಿದರು. ಅನೇಕರಿಗೆ [illegible]

೧೯೪೩ ರಲ್ಲಿ ಆಯ. ಸಿ. ಎಸ್. ಕ್ಕೆ ರಾಜೀನಾಮೆ ಕೊಟ್ಟು ಹೋದ ಅಮೃತಸರದ ಹಿಂದಿನ ಡೆಪ್ಯುಟಿ ಕಮೀಶನರರಾದ ಈ. ಪಿ. ಮೂನರು ಇಂಗ್ಲಂಡದಿಂದ ಲಾಹೋರ ಸರಾಫ ಸಂಘದ ಕಾರ್ಯದರ್ಶಿಗಳಿಗೆ ಬರೆದ ಪತ್ರದಲ್ಲಿ ೧೯೪೬ ನೇ ಇಸ್ವಿಯು ಮಹತ್ವದ್ದಾಗುವದೆಂದೂ ಹಿಂದುಸ್ತಾನಕ್ಕೆ ಆದರ ಗುರಿಯಾದ ಸ್ವಾತಂತ್ರ್ಯ ದೊರೆಯುವದೆಂದೂ ಕಾಣಿಸಿದ್ದಾರೆ.

ಅಝಾದ ಸೈನ್ಯದವರ ವಿರುದ್ಧ ಸೈನ್ಯ ಖಾತೆಯ ಕೃಷ್ಣ ಕಾರಸ್ಥಾನ: ಲೆ. ಕ. ಚತರ್ಜಿಯವರನ್ನು ಬಂಧಿಸಡಲು ಕೇಳಿಕೆ!

ಶರಚ್ಚಂದ್ರ ಬಾಂಬು—ಕಾರ್ಯಕಾರಿ ಮಂಡಳಕ್ಕೆ ಸಂಬಳ ಕೊಡಲು ನಿರಾಕರಣೆ—ಸರಕಾರಕ್ಕೆ ಪ್ರಚಂಡ ಸೋಲುಗಳು

ಕೇಂದ್ರ ಶಾಸನ ಸಭೆಯಲ್ಲಿ ಮುಂಗಡ ಪತ್ರಿಕೆಯ ಬೇಡಿಕೆಗಳನ್ನು ಮಂಡಿಸುವದು ಈ ವಾರದಿಯಲ್ಲಿ ಪ್ರಾರಂಭವಾದೊಡನೆ ಎಂದಿನಂತೆ ಕಡಿತ ಸೂಚನೆಗಳ ಸುರಿಮಳೆ—ಸರಕಾರಕ್ಕೆ ಸೋಲುಗಳು ಬೆನ್ನು ಬಿದ್ದವು.

ಮೊದಲನೆ ಕಡಿತ ಸೂಚನೆಯನ್ನು ಮಂಡಿಸಿ ಗೆದ್ದ ಶ್ರೇಯಸ್ಸು ಸರದಾರ ಮಂಗಲಸಿಂಗರಿಗೆ ಸೇರಿತು. ಅಝಾದ ಹಿಂದ ಸೈನ್ಯಾಧಿಕಾರಿಗಳ ವಿಚಾರಣೆಯನ್ನು ಮಂಜೂರು ಮಾಡಿದ್ದಕ್ಕೆ ಸರಕಾರವನ್ನು ಖಂಡಿಸಲು ಈ ಕಡಿತ ತರಲಾಗಿತ್ತು. ಸಿಂಗಾಪುರ ಪತನದ ಕಾರಣಗಳ ವರದಿ ಪ್ರಸಿದ್ಧವಾಗುವ ವರೆಗೆ ವಿಚಾರಣೆಯನ್ನು ಮುಂದೆ ಹಾಕಬೇಕಾಗಿತ್ತೆಂದು ಮಂಗಲಸಿಂಗರ ಅಭಿಪ್ರಾಯವಾಗಿತ್ತು. ಅದು ೫೮ ವಿರುದ್ಧ ೩೪ ಮತಗಳಿಂದ ಅಂಗೀಕೃತವಾಗಿ ಸರಕಾರ ಸೋತಿತು.

ಎರಡನೆ ಕಡಿತ ಕೂಲಿಕಾರ ನಾಮಕರಣ ಸದಸ್ಯ ಗುರುಸ್ವಾಮಿಯವರಿಂದ ಮಂಡಿಸಲ್ಪಟ್ಟಿತ್ತು. ಹಿಂದುಸ್ತಾನ ಸರಕಾರದವರು ಕೂಲಿಕಾರರನ್ನು ದೊಡ್ಡ ಸಂಖ್ಯೆಯಲ್ಲಿ ನೇಮಿಸಿಕೊಳ್ಳುವವರಿದ್ದು ತಮ್ಮ ಕೆಲಸಗಾರರಿಗೆ ನಿರುದ್ಯೋಗ ವಿಮೆ, ಸಾಮಾಜಿಕ ಭದ್ರತೆಗಳನ್ನು ಒದಗಿಸಿ ಇತರರಿಗೆ ಮೇಲ್ಪಂಕ್ತಿಯಾಗಬೇಕಿತ್ತು. ಆದರೆ ತಮ್ಮ ಕೆಲಸಗಾರರಿಗೆ ಸರಕಾರ ಅಂಥ ಸವಲತ್ತು ಕೊಡಲು ತಪ್ಪಿದೆಯೆಂದು ಗುರುಸ್ವಾಮಿಯವರು ಹೇಳಿದರು. ಕೂಲಿಕಾರ ಮಂತ್ರಿ ಅಂಬೇಡಕರರು, ಸರಕಾರದವರು ತಮ್ಮ ಕೂಲಿಕಾರರನ್ನು ವಿಶಿಷ್ಟ ದರ್ಜೆಯವರಾಗಿ ಮಾಡಲಿಚ್ಛಿಸುವದಿಲ್ಲೆಂದು ಉತ್ತರವಿತ್ತರು. ಕಡಿತ, ಮತಗಣನೆಯಿಲ್ಲದೆ ಅಂಗೀಕೃತವಾಯಿತು.

ವಿಮಾನ ಸಾರಿಗೆಯ ಹಿಂದೀಕರಣ

ನಾಗರಿಕ ವಿಮಾನ ಸಾರಿಗೆಯನ್ನು ಹಿಂದೀ ಬಂಡವಲು ಮತ್ತು ಹಿಂದೀ ವ್ಯವಸ್ಥಾಪನದಲ್ಲಿ ಬೆಳೆಸಿಕೊಂಡು ಹೋಗಲು ಸರಕಾರ ತಪ್ಪಿದ್ದನ್ನು ಖಂಡಿಸಲು ಶಶಾಂಕ ಸನ್ಯಾಲರು ಮಂಡಿಸಿದ ಕಡಿತ ಸೂಚನೆಯನ್ನು ವಿರೋಧಿಸಲು ಸರಕಾರದೊಡನೆ ಯುರೋಪಿಯನ್ನರೂ ಸೇರಿಕೊಂಡರ. ಕಡಿತ ಮತಗಣನೆಯಿಲ್ಲದೆ ಅಂಗೀಕರಿಸಲ್ಪಟ್ಟಿತು. ಅಹಮದ ಜಾಫರ, ಶರಚ್ಚಂದ್ರ ಬೋಸರು ಅದಕ್ಕೆ ಬೆಂಬಲವಿತ್ತರು. ನಾಗರಿಕ ವಿಮಾನ ಸಾರಿಗೆ ಕಂಪನಿಗಳು ನಾಲ್ಕು ಇದ್ದು ಅದರಲ್ಲಿ ಎರಡು ಮಾತ್ರ ಹಿಂದೀಯವಿರುವವು. ಕಂಪನಿಗಳಲ್ಲಿ ಆಡಳಿತ ಸ್ಥಾನಗಳಿಗೆ ಯುರೋಪಿಯನ್ನರನ್ನೆ ನೇಮಿಸಲು ಒತ್ತಾಯಗೊಳಿಸಲಾಗುತ್ತಿದೆ. ವಿಮಾನ ಲಾಯಸೆನ್ಸಿಂಗ ಮಂಡಲದಲ್ಲಿ ಯುರೋಪಿಯನ್ನರೇ ಹೆಚ್ಚಾಗಿದ್ದು ಅದು ಇನ್ನೊಂದು ರೇಲ್ವೆ ಮಂಡಲವಾದೀತೆಂಬ ಭೀತಿಯನ್ನು ವ್ಯಕ್ತಗೊಳಿಸಲಾಯಿತು. ಅಂಚೆ ತಂತಿಖಾತೆಯ ಕಾರ್ಯದರ್ಶಿ ಬೇವೂರರು ಉತ್ತರವಿತ್ತು ಯುರೋಪಿಯನ್ನರನ್ನು ನೇಮಿಸಿಕೊಳ್ಳಬೇಕೆಂಬ ಒತ್ತಾಯವಿಲ್ಲವೆಂದು ಸ್ಪಷ್ಟಗೊಳಿಸಿದ್ದಲ್ಲದೆ ಟೆಟನಲ ಏರವೇಸ ಕಂಪನಿಯ ಪಾಲುಗಾರರು ೧೩೬೦ ಜನರಲ್ಲಿ ೧೧೬೫ ಜನ ಹಿಂದೀಯರಿರುವರೆಂದು ಹೇಳಿದರು.

ಸುದ್ದಿ ಖಾತೆಗೆ ಕತ್ತರಿ

"ಕಕ್ಷಣ ಪರಿಣಾಮವನ್ನು ತೋರಿಸಿದ ಕಡಿತವೆಂದರೆ ಸುದ್ದಿ ಮತ್ತು ಆಕಾಶವಾಣಿ ಖಾತೆಗೆ ಸರಕಾರದವರು ಮುಂದೊಡ್ಡಿದ ೧೩೬ ಲಕ್ಷದ ಬೇಡಿಕೆಯಲ್ಲಿ ೯೩.೩೪ ಲಕ್ಷ ರೂಪಾಯಿಯನ್ನು ಕಡಿಮೆ ಮಾಡಬೇಕೆಂದು ಶ್ರೀ ಅನಂತಶಯನಂ ಅಯ್ಯಂಗಾರರು (ಕಾಂ) ತಂದ ಸೂಚನೆ. ಸಂಶೋಧನ, ಸುದ್ದಿ ಚಿತ್ರಪಟ, ಪ್ರಚಾರ ಖಾತೆ, ಸುದ್ದಿ ಮತ್ತು ಆಕಾಶವಾಣಿ ಖಾತೆಯ ಕಲಾ ವಿಭಾಗ, ಇವುಗಳನ್ನು ರದ್ದುಗೊಳಿಸಬೇಕೆಂದು ಅಯ್ಯಂಗಾರರು ಆ ಖಾತೆಗಳ ಬೇಡಿಕೆಯನ್ನು ನಿರಾಕರಿಸುವ ಗೊತ್ತುವಳಿ ತಂದಿದ್ದರು. ಶ್ರೀ ಅಯ್ಯಂಗಾರರು ಈ ಖಾತೆಯು ಬೆಳೆಯುತ್ತಿರುವ ವೆಚ್ಚವನ್ನೂ ಅದರ ಕೆಲ ವೇಳೆ ಅಶ್ಲೀಲವೆನಿಸುವ ಚಟುವಟಿಕೆಗಳನ್ನೂ ಟೀಕಿಸಿದರು. ಸುದ್ದಿ ಖಾತೆಯ ಕಲಾ ವಿಭಾಗವನ್ನು ವಿದೇಶಗಳಲ್ಲಿರುವ ಸೈನಿಕರ ಮನೋರಂಜನೆಗಾಗಿ ನರ್ತಕಿಯರನ್ನು ನಿಯ್ಯುಕ್ತ ಮಾಡಲು ಉಪಯೋಗಿಸಲಾಗುತ್ತದೆಂದು ಅಯ್ಯಂಗಾರರು ನುಡಿದು "ಗಂಗಾದೀನ"ವೆಂಬ ಹಿಂದೀಯರಿಗೆ ಅವಮಾನಕರವಾದ ಚಿತ್ರವನ್ನು ಗ್ರೀಸದಲ್ಲಿ ಪ್ರದರ್ಶಿಸಿದ್ದರಿಂದ ಅಲ್ಲಿದ್ದ ಹಿಂದೀ ಸೈನಿಕರಲ್ಲಿ ದ್ವೇಷವುಂಟಾಗಿ ಹಿಂದೀ ಸೈನಿಕರಲ್ಲಿ ಮತ್ತು ಪೋಲೀಸ ಸಾರ್ಜಂಟರಲ್ಲಿ ಬಡಿದಾಟವಾದುದರಿಂದ ಸಾರ್ಜಂಟನೊಬ್ಬನು ಸತ್ತು ಹಿಂದೀ ಸೈನಿಕರಿಗೆ ಕಠಿಣತರ ಶಿಕ್ಷೆಯಾದುದನ್ನು ಅವರು ಉಲ್ಲೇಖಿಸಿದರು. ಹಿಂದುಸ್ತಾನದ ಬಗ್ಗೆ ವಿಕೃತ ಸುದ್ದಿ, ಪುಸ್ತಕಗಳನ್ನು ಪೂರೈಸುತ್ತಿರುವ ಸರಕಾರದ ನೀತಿಯನ್ನು ಹಲ ಸದಸ್ಯರು ಖಂಡಿಸಿದರು. ಸುದ್ದಿ ಮಂತ್ರಿ ಹೈದರಿಯವರು ಸೂಚನೆಯನ್ನು ವಿರೋಧಿಸಿ ಪ್ರಚಾರ ಖಾತೆಯಿಂದ ಬರಗಾಲದಲ್ಲಿ ಬಹಳ ಉಪಯೋಗವಾಗಬಹುದಾದುದರಿಂದ ಅದರ ಬೇಡಿಕೆ ನಿರಾಕರಿಸಬಾರದೆಂದರು. ಆದರೂ ಕಡಿತದ ಸೂಚನೆ ೬೧ ವಿರುದ್ಧ ೪೦ ಮತಗಳಿಂದ ಸ್ವೀಕೃತವಾಯಿತು. ಪರಿಣಾಮವಾಗಿ ಸಂಬಂಧಿಸಿದ ಖಾತೆಗಳನ್ನು ಸರಕಾರ ಮೇ ೧ ರಿಂದ ಮುಚ್ಚುವ ನಿರ್ಧಾರ ಮಾಡಬೇಕಾಯಿತು.

ಮುಂದೆ ಪ್ರೊ. ರಂಗಾ ಅವರು, ಆಹಾರ ಸಮಸ್ಯೆಯನ್ನು ತೃಪ್ತಿಕರವಾಗಿ ಸಾಗಿಸಿಕೊಂಡು ಹೋಗಲು ಸರಕಾರ ತಪ್ಪಿದ್ದಕ್ಕೆ ಮಂಡಿಸಿದ ಕಡಿತದ ಸೂಚನೆಯೂ ಅಂಗೀಕೃತವಾಯಿತು. ಒಕ್ಕಲತನದ ಉತ್ಪಾದನೆಗೆ ಯೋಗ್ಯ ಬೆಲೆ ದೊರಕುವಂತೆ ಏರ್ಪಡಿಸಿ ರೈತರಿಗೆ ಹೆಚ್ಚು ಬೆಳೆಯುವ ಉತ್ಸುಕತೆಯನ್ನು ಉಂಟುಮಾಡಿಕೊಡಬೇಕೆಂದು ಅವರ ಅಭಿಪ್ರಾಯವಾಗಿತ್ತು.

ಕ್ಷೋಭಜನಕ ಗೋಪ್ಯಸ್ಫೋಟ

ಆದರೆ ಎಲ್ಲಕ್ಕಿಂತ ಕ್ಷೋಭಜನಕ, ಅದರೂ ಸ್ವಾರಸ್ಯವಾದ ಚರ್ಚೆ ವಡಿಲಾಲ ಲಲ್ಲುಭಾಯಿಯವರು (ಕಾಂ) ಮಂಡಿಸಿದ್ದ ಕಡಿತದ ಸೂಚನೆಯ ಮೇಲೆ (ತಾ. ೧೨-೩೪) ಆಯಿತು. ಕೇಂದ್ರ ಸರಕಾರದ ಆಡಳಿತೆಯಲ್ಲಿರುವ ಭಾಗಗಳಲ್ಲಿ ನಡೆದಿರುವ ಅವ್ಯವಸ್ಥಿತ ಆಡಳಿತೆ ಮತ್ತು ಸರಕಾರದ ಯೋಜನೆ ಮತ್ತು ಅಭಿವೃದ್ಧಿ ಧೋರಣ ಇವುಗಳ ಸಂಬಂಧದಲ್ಲಿ ನಿಷೇಧ ಸೂಚಿಸಲು ಆ ಕಡಿತವನ್ನು ಮಂಡಿಸಲಾಗಿತ್ತು. ದಿಲ್ಲಿಯಲ್ಲಿಯ ವೆಚ್ಚವನ್ನು ಠಾಕೂರ ಭಾರ್ಗವದಾಸರು ಟೀಕಿಸಿ ದಿಲ್ಲಿ, ಅಂಬಾಲಾ, ಮಿರತ, ಆಗ್ರಾ ಜಿಲ್ಹೆಗಳನ್ನು ಸೇರಿಸಿ ಪ್ರತ್ಯೇಕ ಪ್ರಾಂತ ರಚಿಸಬೇಕೆಂದು ಪ್ರತಿಪಾದಿಸಿದರು. ವಿದೇಶದಿಂದ ದಿನಬಳಿಕೆಯ ಸರಕುಗಳನ್ನು ತರಿಸುವ ಧೋರಣೆಯನ್ನೂ ಖಂಡಿಸಲಾಯಿತು. ಸರಕಾರದ ಲಂಚಗುಳಿತನವನ್ನೂ ಖಂಡಿಸಲಾಯಿತು. ಅಜೀಜುಲ ಹಕ್ಕರೂ ಅವರ ಶಾಖೆಯವರೂ ದೇಶದಲ್ಲಿ ದಿನಬಳಕೆಯ ಉತ್ಪಾದನೆಯೆಷ್ಟಾಗುವದೆಂಬದನ್ನು ತಿಳಿದುಕೊಳ್ಳಲು ಸರಕಾರ ಯತ್ನಿಸಿದಾಗ ಹಿಂದೀ ವ್ಯಾಪಾರಿ-ಕಾರಖಾನೆದಾರರು ಸಹಕರಿಸಲು ನಿರಾಕರಿಸಿದ್ದರಿಂದ ವಿದೇಶೀ ಸಾಮಗ್ರಿಗಳನ್ನು ತರಿಸಲಾಯಿತೆಂದು ತಪ್ಪಿಸಿಕೊಳ್ಳಲೆಳಸಿದರು.

ಆದರೆ ಶರಚ್ಚಂದ್ರ ಬೋಸರು ಸರಕಾರದ ಪೋಲೀಸ ಆಡಳಿತೆಯನ್ನು ಬಯಲಿಗೆಳೆಯುವ ಕೆಲ ಗೋಪ್ಯ ಪತ್ರಗಳನ್ನು ಸಭೆಯಲ್ಲಿ ಓದಿ ದೊಡ್ಡ ಬಾಂಬನ್ನೇ ಸರಕಾರಿ ಸದಸ್ಯರ ಮೇಲೆ ಒಗೆದರು. ರಾಜಕೀಯ ಕೈದಿಗಳಾದ ಜಯಪ್ರಕಾಶ ಮೊದಲಾದವರ ಮೇಲೆ ನಡೆಸಿರುವ ಹಿಂಸೆಯನ್ನು ಉಲ್ಲೇಖಿಸಿ, ಅದು ಸೈನ್ಯಖಾತೆಗೂ ಹಬ್ಬಿದೆಯೆಂದು ಹೇಳಿ ಫೆ ೩ ಕ್ಕೆ ಗುಪ್ತ ಪೋಲೀಸ ಡಾಯರೆಕ್ಟರರು ಬರೆದ ಪತ್ರದಲ್ಲಿ ರಾಜಕೀಯ ಕೆಲಸದಲ್ಲಿ ಪ್ರತ್ಯಕ್ಷ ಭಾಗ ವಹಿಸಿದವರನ್ನೂ ಅವರೊಡನೆ ನಿಕಟ ಸಂಬಂಧವಿಟ್ಟುಕೊಂಡವರನ್ನೂ ಸೈನ್ಯಕ್ಕೆ ಸೇರಿಸಿಕೊಳ್ಳದೆ ಅರ್ಜಿ ನಿರಾಕರಿಸಬೇಕೆಂದು ಬರೆಯಲಾಗಿದೆಯೆಂದು ಶರಚ್ಚಂದ್ರರು ಹೇಳಿದರು. ಬ್ರಹ್ಮದೇಶದಲ್ಲಿರುವ ಅಝಾದ ಹಿಂದ ಸೇನೆಯ ಸೈನಿಕರನ್ನು ಬಿಡುಗಡೆ ಮಾಡಿಸಲು ಪ್ರಯತ್ನಿಸಲಾಗುವದೆಂದು ಕಾರ್ಯಕಾರೀ ಮಂಡಳದವರು ಹೇಳುತ್ತಿದ್ದಾರೆ. ಆದರೆ ನನಗೆ ದೊರೆತಿರುವ ಪತ್ರಗಳಿಂದ ವಸ್ತುಸ್ಥಿತಿ ತದ್ವಿರುದ್ಧವಿದೆಯೆಂದು ಮನದಟ್ಟಾಗುತ್ತದೆಯೆಂದು ಹೇಳಿ ಆ ಪತ್ರಗಳನ್ನು ಶರಚ್ಚಂದ್ರರು ಸಭೆಯಲ್ಲಿ ಓದಿ ತೋರಿಸಿದರು. ಅವರಲ್ಲೊಂದು ಕಲಕತ್ತೆಯಲ್ಲಿಯ ಸೇನಾಧಿಕಾರಿಯೊಬ್ಬನು ದಿಲ್ಲಿಯ ಸನ್ನಿಧಿಕೇಂದ್ರದ ಸೇನಾಪತಿಗೆ ಫೆ. ೫ ಕ್ಕೆ ಬರೆದಿದ್ದು ಅದರಲ್ಲಿ ಅಝಾದ ಹಿಂದ ಸೇನೆಯ ವಿಮೋಚಿತ ಪ್ರದೇಶಗಳ ಗವರ್ನರರಾಗಿದ್ದ ಲೆ. ಕ. ಚಟರ್ಜಿಯವರನ್ನು ಬ್ರಹ್ಮದೇಶದಿಂದ ಬಿಡುಗಡೆ ಮಾಡಿದೊಡನೆ ಅವರನ್ನು ಅಲ್ಲಿಯೆ ಅಥವಾ ಅದಾಗ್ಯ ಎಲ್ಲವಲ್ಲಿ ಹಿಂದುಸ್ತಾನದಲ್ಲಿ, ಹಿಡಿದು ಎರಡು ಮೂರು ತಿಂಗಳು ಸ್ಥಾನಬದ್ಧತೆಯಲ್ಲಿಡಬೇಕೆಂದು ಸೇನಾಪತಿಗಳಿಗೆ ಕೇಳಿಕೊಳ್ಳಲಾಗಿದೆ. ಲೆ. ಕ. ಚತರ್ಜಿಯವರು ಬಂಗಾಲದಲ್ಲಿ ಪ್ರಭಾವಶಾಲಿ ವ್ಯಕ್ತಿಯಿದ್ದು ಅವರಿಗೆ ಸುಭಾಸರಷ್ಟೆ ಗೌರವವುಂಟೆಂದೂ ಅವರು ಬಂಗಾಲಕ್ಕೆ ಮರಳಿದರೆ ಕ್ಷೋಭೆಯುಂಟಾಗಬಹುದೆಂದೂ ಆದುದರಿಂದ ಅಝಾದ ಸೇನೆಯ ಜನಪ್ರಿಯತೆ ತಣ್ಣಗಾಗುವವರೆಗೆ ಚತರ್ಜಿಯವರನ್ನು ಚುನಾವಣೆ ಮುಗಿದನಂತರ ಒಂದು ತಿಂಗಳವರೆಗಾದರೂ ಬಂಧಿಸಿಡಬೇಕೆಂದೂ ಅದರಲ್ಲಿ ಬರೆಯಲಾಗಿದೆ. ಇನ್ನೊಂದು ಪತ್ರದಲ್ಲಿ ಸನ್ನಿಧಿಕೇಂದ್ರದವರು ಆಗ್ನೇಯ ಏಶಿಯಾ ಕೇಂದ್ರಕ್ಕೆ ಬರೆದುದು. ಅದರಲ್ಲಿ, ಶತ್ರುಗಳೊಡನೆ ಸಹಕರಿಸಿದವರೆಂದು ಗೊತ್ತಾದ ವ್ಯಕ್ತಿಗಳು ಸದ್ಯಕ್ಕೆ ಹಿಂದುಸ್ತಾನಕ್ಕೆ ಬಾರದಂತೆ ತಡೆಯಬೇಕೆಂದು ಕೇಳಿಕೊಳ್ಳಲಾಗಿದ್ದು ಅಂಥ ವ್ಯಕ್ತಿಗಳ ಯಾದಿಯೊಂದನ್ನು ಅದಕ್ಕೆ ಪುರವಣಿಯಾಗಿಡಲಾಗಿತ್ತು.

ಆ ಹಿಂ. ಸೈನಿಕರು ಹಿಂಸಾಚಾರಿಗಳಾಗಿದ್ದರೆ ಮಾತ್ರ ವಿಚಾರಣೆಗೆ ಗುರಿಪಡಿಸಲಾಗುವದೆಂದು ಬಾಯಲ್ಲಿ ಹೇಳಿ ಒಳಗೊಳಗೆ ಈ ಪತ್ರಗಳಲ್ಲಿ ಹೇಳಿದ ಕೃಷ್ಣಕಾರಸ್ಥಾನ ರಚಿಸುವ ಸರಕಾರ ನಡೆಸಲು ಒಂದು ಪೈ ಕೂಡ ಕೊಡಬಾರದೆಂದು ಶರಚ್ಚಂದ್ರರು ಹೇಳಿದರು ಶರಚ್ಚಂದ್ರರು ಹೊರಗೆಡಹಿದ ಪತ್ರಗಳ ಪರಿಣಾಮ ಎಷ್ಟು ಆಗಿತ್ತೆಂದರೆ ರೇಲ್ವೆ ಮಂತ್ರಿ ಎಡ್ವರ್ಡ ಬೆಂಥಾಲರು ಉತ್ತರಿಸಲೆದ್ದು ಬೇರೇನೂ ಹೇಳಲಾರದೆ ಅಝಾದ ಸೈನಿಕರನ್ನು ಶತ್ರುಗಳೊಡನೆ ಸೇರಿದ್ದಕ್ಕೆ ಬಯ್ದುಬಿಟ್ಟು ತಾಳದೆ "ಯುದ್ಧಗೆದ್ದವರು ಸರಕಾರದವರೋ ಕಾಂಗ್ರೆಸಿನವರೋ?" ಎಂದು ಗರ್ಜಿಸಿಬಿಟ್ಟರು. ಕಡಿತದ ಸೂಚನೆ ಸ್ವೀಕೃತವಾಯಿತು.

ತಾ. ೧೪ ಕ್ಕೆ ಶಾಸನ ಸಭೆಯು ಮುಂದೆ ಕಾರ್ಯಕಾರಿ ಮಂಡಲದ ವೆಚ್ಚದ ಬಗ್ಗೆ ೪ ಲಕ್ಷದ ಬೇಡಿಕೆಯನ್ನು ಮಂಡಿಸಿದಾಗ ಶರಚ್ಚಂದ್ರರು ಹೇಳಿದ "ಒಂದು ಪೈಕೂಡ ಕೊಡಬಾರದು" ಎಂಬ ಗದರಿಕೆಯನ್ನು ಸತ್ಯವಾಗಿ ಮಾಡಲು ಸಭೆ ಸಂಪೂರ್ಣವಾಗಿ ನಿರಾಕರಿಸಿಬಿಟ್ಟಿತು. ಲೀಗ ಪಕ್ಷದವರು ತಟಸ್ಥ ಉಳಿದಿದ್ದರು.

ವಿಧಿ ಮಂಡಲದಲ್ಲಿ ಮುಂಗಡ ಪತ್ರಿಕೆ

ಸಂರಕ್ಷಣ ವೆಚ್ಚದ ಮೇಲೆ ಟೀಕೆ

ಕೇಂದ್ರವಿಧಿ ಮಂಡಲದಲ್ಲಿ ತಾ ೬ ಕ್ಕೆ ಮುಂಗಡ ಪತ್ರಿಕೆಯ ಸಾಮಾನ್ಯ ಚರ್ಚೆ ನಡೆಯಿತು. ಪಂಡಿತ ಹೃದಯನಾಥ ಕುಂಝ್ರುರು ಅವರು ಸರ್ ಆರ್ಚಿಬಾಲ್ಡ ರೌಲಂಡ್ಸರ ಕಳಕಳಿಯನ್ನು ಪ್ರಶಂಸಿಸಿದರೂ ಸಂರಕ್ಷಣ ವೆಚ್ಚದ ಅಂಕೆಯ ಕಡೆಗೆ ಸಂಶಯದೃಷ್ಟಿಯನ್ನು ಬೀರಿ ಹಿಂದೀ ಸೇನೆಯ ಹಿಂದೀಕರಣ—ಮುಖ್ಯವಾಗಿ ಮೊಟ್ಟ ಮೊದಲು ಕೆಳಗಿನ ದರ್ಜೆಯ ಅಧಿಕಾರಿ ವರ್ಗದ ಹಿಂದೀಕರಣವನ್ನು ತ್ವರಿತದಿಂದ ಮಾಡುವ ಅವಶ್ಯಕತೆಯನ್ನೊತ್ತಿ ಹೇಳಿದರು. ಶಾಂತಿದಾಸ ಅಸ್ಕರನ್ನರು ಸ್ಟರ್ಲಿಂಗ ಶಿಲ್ಕನ್ನು ತೀರಿಸುವ ಪ್ರಶ್ನೆಯನ್ನು ಒಡನೆ ನಿರ್ಧರಿಸಬೇಕೆಂದು ಒತ್ತಾಯಗೊಳಿಸಿದ್ದಲ್ಲದೆ ಚಿನ್ನದ ಮೇಲೆ ಹೇರುವ ಸುಂಕವನ್ನು ವಿರೋಧಿಸಿ ಶ್ರೀಮಂತರಿಗಿಂತ ಬಡವರಿಗೆ ಅದು ಹೆಚ್ಚು ನಷ್ಟಕ್ಕೀಡುಮಾಡುವದೆಂದು ಹೇಳಿದರು. ಶ್ರೀ ತಿರುಮಲರಾಯರು, ಯುದ್ಧ ಮುಗಿದಿದ್ದರೂ ಇಷ್ಟು ಹೆಚ್ಚು ಸಂರಕ್ಷಣ ವೆಚ್ಚ ಬೇಕಾಗಿರುವದು ವಸಾಹತು ಸಾಮ್ರಾಜ್ಯದಲ್ಲೆಲ್ಲ—ಇಂಡೋನೇಶಿಯಾ ಪಾಲಿಸ್ತಾನ, ಹಿಂದುಸ್ತಾನಗಳಲ್ಲಿ—ಕಾಣಬರುತ್ತಿರುವ "ಶಾಂತಿ ಸುವ್ಯವಸ್ಥೆ"ಗಳ ಒಂದು ಅಂಗವಾಗಿದೆ. ಎಂದು ಟೀಕಿಸಿದರು. ಔದ್ಯೋಗಿಕ ಬೆಳವಣಿಗೆಗೆ ಮುಂಗಡ ಪತ್ರ ೯೦೦ ಕೋಟಿ ರೂಪಾಯಿ ತೆಗೆದಿಟ್ಟಿದ್ದರೂ ಅದರ ವಿವರಗಳು ತಿಳಿದಿಲ್ಲ. ಪ್ರೊ. ಸಿ. ಎನ್. ವಕೀಲರು ಯೋಜನಾಖಾತೆಗೆ ರಾಜೀನಾಮೆ ಕೊಟ್ಟು ಹೊರಬಿದ್ದುದರಿಂದ ಸರಕಾರದ ಯೋಜನೆಗಳಲ್ಲಿ ಪರಸ್ಪರ ಹೊಂದಿಕೆಯಿಲ್ಲವೆಂದು ಸಿದ್ಧವಾಗುತ್ತದೆ. ಎಂದೂ ತಿರುಮಲರಾಯರು ಹೇಳಿದರು.

ಮುಖ್ಯ ಸೇನಾಪತಿ ಸರ್ ಕ್ಲಾಡ್ ಅಚಿನಲೆಕ್ಕರು ಸಂರಕ್ಷಣ ವೆಚ್ಚದ ಬಗ್ಗೆ ಎದ್ದ ಕೆಲ ಆಕ್ಷೇಪಗಳಿಗೆ ಉತ್ತರವಿತ್ತರು. ಹಿಂದೀ ಸೇನೆಯ ಘಟನೆಯನ್ನು ಕುರಿತು ಸಲಹೆ ಕೊಡಲು ಒಂದು ಸಮಿತಿಯನ್ನು ತಾವು ನೇಮಿಸಿರುವದಾಗಿ ಅವರು ಹೇಳಿದ್ದಲ್ಲದೆ ಹಿಂದೀ ಸೈನ್ಯದ ಪ್ರಶ್ನೆಯನ್ನು ಹಿಂದೀ ದೃಷ್ಟಿಕೋನದಿಂದಲೇ ನೋಡಲು ಪ್ರಯತ್ನಿಸುವದಾಗಿ ಆಶ್ವಾಸನವಿತ್ತರು. ಆದರೂ ಮಿಲಿಟರಿ ದೃಷ್ಟಿಕೋನವೂ ಒಂದು ಇದೆಯಲ್ಲ, ಎಂದವರು ಸೈನ್ಯಖಾತೆ ನಿರುತ್ಪಾದಕ ಖಾತೆಯಾಗಿದ್ದು ಅದಕ್ಕೆ ಹಣ ಕೊಡಲು ಹಣಕಾಸಿನ ಖಾತೆಯಾವಾಗಲೂ ಆರೆಮನಸ್ಸೇ ಮಾಡುತ್ತಿದೆ. ಶಾಂತಿಯು "ವಿಮೆ"ಯನ್ನು ಹೊರತು ಸೈನ್ಯಖಾತೆ ಏನನ್ನೂ ಸಂಪಾದಿಸುತ್ತಿಲ್ಲ. ಈ ಶಾಂತಿಗಾಗಿ ಎಷ್ಟು ಹಣ ವೆಚ್ಚಮಾಡಬೇಕೆಂದು ಸರಕಾರವೂ ಜನಪ್ರತಿನಿಧಿಗಳೂ ನಿರ್ಣಯಿಸಲಿ, ಎಂದು ಹೇಳಿ ಸೈನ್ಯದ ಘಟನೆಯ ಪ್ರಶ್ನೆಯನ್ನು ಮುಂಬರುವ ಘಟನಾತ್ಮಕ ಬದಲಾವಣೆಗಳ ವರೆಗೆ ಮುಂದೆ ತಳ್ಳಬೇಕೆಂದು ಪ್ರಾರ್ಥಿಸಿದರು.

ಚರ್ಚೆಗೆ ಹಣಕಾಸಿನ ಕಾರ್ಯದರ್ಶಿ ಸಿರಿಲ ಜೋನ್ಸರು ಉತ್ತರ ಕೊಟ್ಟರು.

ಶಹಾನವಾಜ—ಸಹಗಲರು ಮುಂಬಯಿಯಲ್ಲಿ

ಮೇಜರ ಜನರಲ್ ಶಹಾನವಾಜ ಮತ್ತು ಸಹಗಲರು ವಿಮಾನ ಮೂಲಕ ಮುಂಬಯಿಗೆ ೧೨ ನೇ ತಾರೀಕಿಗೆ ಬಂದಿರುವರು. ಮಹಾತ್ಮಾಗಾಂಧಿಯವರೊಡನೆ ಅವರು ೯೦ ನಿಮಿಷ ಚರ್ಚೆ ನಡೆಸಿದರು. ಬಿರ್ಲಾಭವನದಿಂದ ಹಿಂತಿರುಗಿದ ಬಳಿಕ ಅವರು ಕಾಂಗ್ರೆಸ ಅಧ್ಯಕ್ಷರಾದ ಮೌಲಾನಾ ಅಬುಲ್‌ಕಲಂ ಅಝಾದರೊಡನೆ ಮಾತಾಡಿದರು. ಕಾಂಗ್ರೆಸ್ಸಿನ ನೇತೃತ್ವದಲ್ಲಿ ಅಹಿಂಸಾತ್ಮಕವಾಗಿ ದೇಶಸ್ವಾತಂತ್ರ್ಯ ಸಂಗ್ರಾಮ ಹೋರಾಡಲು ಅವರು ಸಿದ್ಧರಿರುವರೊ ಎಂಬುದೆ ಚರ್ಚೆಯ ಮಹತ್ವದ ವಿಷಯವಾಗಿದೆ. ಅವರು ಅವಕ್ಕೊಪ್ಪಿದ್ದಾರೆ ಜನತೆಗೆ ಆ ರೀತಿ ಒತ್ತಿ ಹೇಳಲು ಅವರನ್ನು ಕೇಳಿಕೊಳ್ಳಲಾಗುವದು.

'ನೀವು ಏನೇ ಹೇಳಿರಿ. ಸುಭಾಷಚಂದ್ರಬೋಸರು ಸತ್ತಿರುವರೆಂಬದನ್ನು ನಾನು ನಂಬುವದಿಲ್ಲ. ಅವರಿನ್ನೂ ಬದುಕಿರುವರ." ಎಂದು ಮಹಾತ್ಮಾ ಗಾಂಧಿಯವರು ಶಹಾನವಾಜ, ಸಹಗಲರಿಗೆ ೧೨ನೇ ತಾರೀಕು ರಾತ್ರಿ ಹೇಳಿದರೆಂದು ತಿಳಿಯುತ್ತದೆ.



ದ. ಕನ್ನಡದಿಂದ ಮದ್ರಾಸ ಶಾಸನ ಸಭೆಗೆ ಅವಿರೋಧ ಆರಿಸಿ ಬಂದ ಕಾಂಗ್ರೆಸ್‌ಸದಸ್ಯ ಡಾ. ಮಲ್ಯರು

ದಕ್ಷಿಣ ಕನ್ನಡ

ಕದ್ರಿ ವಿದ್ಯಾಬೋಧಿನಿ ಹಾಯರ ಎಲಿಮೆಂಟರಿ ಶಾಲೆಯ ವಿದ್ಯಾರ್ಥಿ ಸಂಘದ ೩ನೆ ವಾರ್ಷಿಕೋತ್ಸವ ತಾ. ೩ಕ್ಕೆ ವಕೀಲ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು.

ಕರ್ನಾಟಕ ಏಕೀಕರಣ ಸಂಘದ ಒಂದು ಸ್ಥಾನಿಕ ಉಪಸಮಿತಿಯನ್ನು ಕಾರ್ಕಳದಲ್ಲಿ ಶ್ರೀ ಪಿ. ವಿ. ಉಪಾಧ್ಯಾಯ ವಕೀಲರ ಆಧ್ಯಕ್ಷತೆಯಲ್ಲಿ ಸ್ಥಾಪಿಸಲಾಗಿದೆ.

ದಕ್ಷಿಣ ಕರ್ನಾಟಕದಲ್ಲಿ ಸಂಸ್ಕೃತ ಪ್ರಚಾರ ನಡೆಸುವ ಸಲುವಾಗಿ ಶಿಕ್ಷಣವೀಯುವ ವ್ಯವಸ್ಥೆಯನ್ನು ದಕ್ಷಿಣ ಕನ್ನಡದ ಸಂಸ್ಕೃತ ಮಹಾಸಭಾ ಪುತ್ತೂರು ಇವರು ಇದೇ ಮೇ ತಿಂಗಳಲ್ಲಿ ಉಡುಪಿಯಲ್ಲಿ ಮಾಡುವವರಿದ್ದು ಸಂಸ್ಕೃತ ಪ್ರಚಾರಕ್ಕಾಗಿ ದುಡಿಯಬಯಸುವ ಶಿರೋಮಣಿ ಸಂಸ್ಕೃತ ವಿದ್ವಾಂಸರು ಮಹಾಸಭೆಯ ಕಾರ್‍ಯದರ್ಶಿಯೊಡನೆ ಪತ್ರವ್ಯವಹಾರ ಮಾಡಬಹುದು.

ದ. ಕನ್ನಡ ಜಿಲ್ಲಾ ವಿದ್ಯಾರ್ಥಿ ಕಾಂಗ್ರೆಸ್ಸಿನ ಕಾರ್‍ಯಕಾರಿ ಸಮಿತಿ ಸಭೆ ತಾ. ೭ಕ್ಕೆ ಜ. ಕೆ. ಪಿ. ಉಮರ ಅವರ ಅಧ್ಯಕ್ಷತೆಯಲ್ಲಿ ಜರಗಿ ಈ ವಿದ್ಯಾರ್ಥಿ ಕಾಂಗ್ರೆಸ್ಸನ್ನು ಕರ್ನಾಟಕ ಪ್ರಾಂತಿಕ ವಿದ್ಯಾರ್ಥಿ ಕಾಂಗ್ರೆಸ್ಸಿನಲ್ಲಿ ಸೇರಿಸಬೇಕೆಂದು ನಿರ್ಣಯಿಸಲ್ಪಟ್ಟಿತು. ಅವಿರೋಧವಾಗಿ ಆರಿಸಿಬಂದ ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸ್ ಹುರಿಯಾಳುಗಳನ್ನು ಅಭಿನಂದಿಸಲಾಯಿತು. ಕರ್ನಾಟಕ ವಿದ್ಯಾರ್ಥಿ ಕಾಂಗ್ರೆಸ್ಸಿಗೆ ದ. ಕ. ವಿದ್ಯಾರ್ಥಿ ಕಾಂಗ್ರೆಸ್ಸಿನಿಂದ ಶ್ರೀ ಕೆ. ಆರ್. ಭಂಡಾರಕಾರ ಮತ್ತು ಶ್ರೀಮತಿ ನಂದಿನಿ ಅವರನ್ನು ಪ್ರತಿನಿಧಿಗಳಾಗಿ ಆರಿಸಲಾಗಿದೆ.

ತಾ. ೨೩—೩—೪೬ಕ್ಕೆ ರಾತ್ರಿ ಮಂಗಳೂರ ತಾಲೂಕ ಉಚ್ಚಿಲ ಬೋವಿ ಶಾಲೆಯಲ್ಲಿ ವಿಶೇಷ ಯಕ್ಷಗಾನ ಸಭೆ ಜರುಗಲಿದೆಯೆಂದು ಬೋವಿ ವಿದ್ಯಾಸಂಘದ ಕಾರ್‍ಯದರ್ಶಿಗಳು ತಿಳಿಸುತ್ತಾರೆ. ದ. ಕನ್ನಡದ ಪ್ರಸಿದ್ಧ ಅರ್ಥಧಾರಿಗಳಾದ ಶ್ರೀ ಪುರಂದರಪ್ಪ ರೈ, ಈಶ್ವರಪ್ಪಯ್ಯ, ಕೆ. ಬಾಲಕೃಷ್ಣರಾವ್, ನಾರಾಯಣ ಕಿಲ್ಲೆ, ರಾಮಕೃಷ್ಣ ಶಾಸ್ತ್ರಿ ಮೊದಲಾದವರು ಭಾಗವಹಿಸುವರು.


ಮಂಗಳೂರಿನಲ್ಲಿ ಈಗ ಪ್ರದರ್ಶನಗಳನ್ನು ನಡೆಸಿರುವ ಗ್ರ್ಯಾಂಡವೇ ಸರ್ಕಸಿನವರು ಮಂಗಳೂರಲ್ಲಿ ಒಂದು ಸಾರ್ವಜನಿಕ ವ್ಯಾಯಾಮ ಕ್ಷೇತ್ರವನ್ನು ಸ್ಥಾಪಿಸುವದಕ್ಕಾಗಿ ಮಂಗಳೂರ ನಗರ ಸಭೆಯ ವಶಕ್ಕೆ ೧೦೦೦ ರೂಪಾಯಿಗಳನ್ನು ಒಪ್ಪಿಸಿದ್ದಾರೆ.

ಮಂಗಳೂರಲ್ಲಿ ಅನೇಕ ದಿನಗಳಿಂದ ನಡೆದಿರುವ ನೇಯ್ಗೆ ಕೂಲಿಕಾರರ ಸಂಪಿಗೆ ಬೆಂಬಲ ಕೊಡಲು ತಾ. ೭ಕ್ಕೆ ಮಂಗಳೂರು ಮೈದಾನದಲ್ಲಿ ಶ್ರೀ ಎಸ್. ಎಸ್. ಹೊಳ್ಳರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಕೂಲಿಕಾರರು ಹೆಚ್ಚಿನ ಬೋನಸ್ಸಿಗಾಗಿ ಸಂಪು ಹೂಡಿದ್ದಾರೆ. ಕಲೆಕ್ಟರ ರಾಮದಾಸರು ಕೊಟ್ಟ ತೀರ್ಪನ್ನು ಒಡೆಯರು ಪೂರೈಸಲೊಪ್ಪದ್ದೇ ಸಂಪಿನ ಕಾರಣ.

ಮಂಗಳೂರಿನ ನೇಯ್ಗೆ ಕೆಲಸಗಾರರ ಸಂಪಿನ ಅಂಗವಾಗಿ ನೇಯ್ಗೆ ಕಾರಖಾನೆಗಳ ಮುಂದೆ ಕೂಲಿಕಾರರು ನಡೆಸಿರುವ ಪಿಕೆಟಿಂಗದ ಸಂಬಂಧದಲ್ಲಿ ಪಿಕೆಟಿಂಗಿನಿಂದ ಸಾರ್ವಜನಿಕ ವ್ಯವಹಾರಗಳಿಗೆ ಅಡಿಯಾಗುತ್ತದೇದು ರಾಘವನೆಂಬೊಬ್ಬ ಹುಡುಗನನ್ನು ಪೋಲೀಸರು ಬಂಧಿಸಿ ವಿಚಾರಣೆಗೆ ಗುರಿಪಡಿಸಿದರು. ಅವನಿಗೆ ೨೦೦ ರೂ. ದಂಡವಾಗಿದೆ.

ಉಡುಪಿಯ ಪೇಜಾವರ ಮಠದ ಹಿಂದಿನ ಏಜಂಟರು ಮತ್ತು ಮಠದ ಮೂವರು ನೌಕರರ ಮೇಲೆ ಮಠದ ಸೊತ್ತಿನ ದುರುಪಯೋಗದ ಆರೋಪ ಹೊರಿಸಿ ಕುಂದಾಪುರ ಪ್ರಥಮ ನ್ಯಾಯಸ್ಥಾನದಲ್ಲಿ ಪೋಲೀಸರು ಹೂಡಿದ ಪ್ರಕರಣಗಳನ್ನು ಅವರು ನಾಲ್ವರಿಗೂ ವಿವಿಧ ಅವಧಿಯ ಶಿಕ್ಷೆ ಮತ್ತು ದಂಡ ಕೂಡ ಆಗಿತ್ತು. ಆರೋಪಿಗಳು ಮಂಗಳೂರು ಸೆಶನ್ಸದಲ್ಲಿ ಅಪೀಲು ಮಾಡಿದ್ದು ಅದು ಈಗ ಕಿತ್ತಿಹಾಕಲ್ಪಟ್ಟಿದೆ, ಮೂಲ ನ್ಯಾಯಸ್ಥಾನದ ತೀರ್ಪು ಊರ್ಜಿತವಾಗಿವೆಯೆಂದು ತಿಳಿಯುತ್ತದೆ.

ಬೆಂಗಳೂರು ದಂಡಿನ ಪ್ರದೇಶವನ್ನು ಮೈಸೂರು ಸಂಸ್ಥಾನಕ್ಕೆ ತಿರುಗಿ ಕೊಡಬೇಕೆಂಬ ಸೂಚನೆಯನ್ನು ಕೇಂದ್ರ ಸರಕಾರದ ಮುಂದೆ ಮೈಸೂರು ಸರಕಾರ ಪುನಃ ಮಂಡಿಸಿದೆಯೆಂದೂ ಇದು ಕೇಂದ್ರದ ತೀವ್ರ ಪರಿಶೀಲನೆಯಲ್ಲಿದೆಯೆಂದೂ ತಿಳಿಯುತ್ತದೆ.



ಮುಂಬಯಿ ಶೇರಪೇಟೆ

ತಾ. ೧೩-೩-೪೬

ಶೇರಪೇಟೆಯಲ್ಲಿ ಉತ್ಸುಕತೆಯ ವಾತಾವರಣವೇ ಈ ವಾರವೂ ಕಂಡುಬಂತು. ಕಳೆದ ವಾರಕ್ಕಿಂತ ಈ ವಾರ ಬಹಳ ಮಟ್ಟಿಗೆ ಎಲ್ಲ ಪಾಲುಗಳೂ ಮುಂದೊತ್ತಿದವು. ಆದರೂ ತಾತಾ ಸ್ಟೀಲ ಡೆಫರ್ಡುಗಳ ಮುಂದೋಟ ಮತ್ತು ಪ್ರಚಂಡವಾಗಿತ್ತು. ಕಳೆದ ಗುರುವಾರ ೨೯೦೭ರಲ್ಲಿದ್ದ ಅದು ನೂರು ರೂಪಾಯಿಗಿಂತಲೂ ಮಿಕ್ಕಿದ ಲಾಭಪಡೆದು ೩೦೧೭-೮-೦ ಕ್ಕೇರಿದೆ. ಡಾಯಿಂಗಕ್ಕೆ ಅಷ್ಟು ಮಟ್ಟಿನ ಬೆಂಬಲವಿಲ್ಲದಿದ್ದರೂ ೨೪೬೫ ರಿಂದ ೨೪೯೭-೮-೦ ಗೇರಿ ೨೪೮೫ ರಲ್ಲಿದೆ. ಸ್ವದೇಶಿ ೭೩೧ ರಿಂದ ೭೪೪-೦-೦ಕ್ಕೆ, ಸೆಂಚೂರಿ ೧೦೧೦-೦-೦ರಿಂದ ೧೦೩೦ ಕ್ಕೆ, ಸೆಂಟ್ರಲ ಇಂಡಿಯಾ ೪೮೯-೦-೦ರಿಂದ ೪೮೭-೦-೦ ಕ್ಕೆ ಬೇಲಾಪೂರ ೨೫೪-೮-೦ ರಿಂದ ೨೬೫-೦-೦ ಕ್ಕೆ ಅಸೋಸಿಯೇಟೆಡ್ ಸಿಮೆಂಟ್ಸ ೨೬೪-೦-೦ ರಲ್ಲಿ ಯಥಾಸ್ಥಿತಿ ಇವೆ. ಯುದ್ಧೋತ್ತರ ಔದ್ಯೋಗಿಕ ಉನ್ನತಿ, ವಿಪುಲವಾದ ಹಣದ ಪೇಟೆಯ ಆಸೆ ಪೇಟೆಯಲ್ಲಿ ವಿಶೇಷ ಆಶಾದಾಯಕ ವಾತಾವರಣವನ್ನು ಉತ್ಪಾದನೆ ಮಾಡಿವೆ. ಸೆಂಟ್ರಲ ಬ್ಯಾಂಕ ಪಾಲು ೧೩೧-೦-೦ ರಿಂದ ೧೩೫ಕ್ಕೆ, ಇಂಪೀರಿಯಲ ಬ್ಯಾಂಕ ಎಫ್. ಪಿ. ೨೪೫೫-೦-೦ ರಿಂದ ೨೪೬೦-೦-೦ ಕ್ಕೇರಿದ್ದರೆ ರಿಝರ್ವ ಬ್ಯಾಂಕ ಅಷ್ಟೊಂದು ಪುಷ್ಟಿಯಿಲ್ಲದೆ ೧೫೯-೮-೦ ರಿಂದ ೧೫೮-೮-೦ ಕ್ಕಿಳಿಯಿತು.

ಜಿ. ಪಿ. ನೋಟು ೧೦೩-೧೫-೦ ರಲ್ಲಿ ಯಥಾಸ್ಥಿತಿ. ೧೯೪೭-೫೦ ರ ೩॥ ದರದ ಸಾಲ ೧೦೩-೬-೦ ರಿಂದ ೧೦೩-೭-೦.

ಚಿನ್ನ ಬೆಳ್ಳಿ

ಬುಲಿಯನ್ ಎಕ್ಸಚೇಂಜದ ವಿರುದ್ಧ ವಾಯಿದೆ ವ್ಯಾಪಾರದಲ್ಲಿ ಸುಂಕ ಆಕರಣೆಯ ಸದಸ್ಯರೊಬ್ಬರು ಹಾಯಕೋರ್ಟಿನಲ್ಲಿ ಕಟ್ಟಳೆ ಹೂಡಿರುವದರಿಂದ ಚಿನ್ನದ ವಾಯಿದೆ ವ್ಯಾಪಾರ ನಿಂತುಹೋಗಿದೆ. ತಯಾರಿ ಚಿನ್ನ ರೂ. ೯೨-೦-೦ ರಲ್ಲಿದೆ. ಸಾವರೀನ ಬೆಲೆ ಅಧಿಕೃತವಾಗಿದೊರೆಯುವದಿಲ್ಲ. ಬೆಳ್ಳಿ ರೂ. ೧೫೧-೦-೦.

ಅರಳೆ

ಅರಳೆಯ ದರಗಳಲ್ಲಿ ಬದಲಾವಣೆ ವಿಶೇಷವಿಲ್ಲ. ಮಾರ್ಚ ಆಯ. ಸಿ. ಸಿ. ಹತ್ತಿ ೪೭೦-೦-೦ ರೂಪಾಯಿ. ಮೇ ವಾಯಿದೆ ರೂ. ೪೭೩-೧೨-೦ ಜುಲೈ ೪೮೩-೦-೦ ಸೆಪ್ಟೆಂಬರ ೪೮೮-೧೨-೦ ವಿದೇಶಿ ಹತ್ತಿಯ ದರ ಹಿಂದೀ ಹತ್ತಿಗಿಂತ ಹೆಚ್ಚಿಗಿದ್ದು ಒಳ್ಳೆಯ ಹತ್ತಿಯ ಅಭಾವವಿರುವದರಿಂದ ಹತ್ತಿಯ ಸ್ಥಿತಿ ಆಶಾದಾಯಕವಿದೆ. ವಿದೇಶಿಗಳಿಂದ ಸ್ವಲ್ಪ ಉತ್ತಮ ಹತ್ತಿಯನ್ನು ತರಿಸುವ ಏರ್ಪಾಡು ನಡೆಯುತ್ತಿದೆ.

ಎಣ್ಣೆಕಾಳು

ಶೇಂಗಾ	ರೂ.	೧೭೨—೮—೦
ಅಗಸಿ	,,	೨೨-೧೨—೦
ಅಗಸಿಎಣ್ಣೆ	,,	೧೩—೨—೦

ಶಿವಮೊಗ್ಗೆ

ದೇಶಾವರ ಹಸನ್ ಅಡಿಕೆ (ಮಣ) ರೂ.	೨೨—೨೬
ಕಡಿ ಹಸನ್	೨೬॥
ತೊರಸಾಲು	೨೦-೨೨
ಅಸ್ನಾವರಂ	೨೨-೨೩
ಕೊಪ್ಪ ಶೃಂಗೇರಿ	೨೨-೨೪
ರಾಜ ಆಲವು	೨೩-೨೪॥
ರಾಶಿ ಬೆಟ್ಟೆ	೧೨-೧೩
ನಯ ಬೆಟ್ಟೆ	೧೩-೧೪
ವಂತಿ	೧೪-೧೪॥
ಸುಲಿ	೨೨-೨೪

ಸಾಂಗಲಿ ಪೇಟೆ

ಬೆಲ್ಲ ಬಂಗಾಲಿಮಣ ರೂ.		೧೪—೧೬
ಅರಿಸಿಣ ಹೇರು	,,	೬೫—೭೮
ಶೇಂಗಾ (ಖಂಡಿ)	,,	೯೪—೯೬
ಮೆಣಸಿನಕಾಯಿ	,,	೧೪೦—೧೭೫
ಹತ್ತೀಕಾಳು ರೂಪಾಯಿಗೆ		೯-೧೦ ಪೌಂ.
ದೇಶಿ ತಂಬಾಕು (ಹೇರು)		೧೦೦—೧೯೫
ಹತ್ತಿ ರೂಪಾಯಿಗೆ		೨। ಸೇರು

ಹುಬ್ಬಳ್ಳಿ ಪೇಟೆ

ಜಯವಂತಿ ಹತ್ತಿ (ಕುಂದಗೋಳ)	೩೩೫-೩೭೮
,, (ಎರೆ)	೩೧೫-೪೨೫
,, (ಬಂಕಾಪುರ)	೩೨೫-೩೩೦
ಅಫ್ಲಂಡ ಹೊಸವು	೩೦೦-೩೦


ಬೆಂಗಳೂರು--ಮೈಸೂರು

ಮೈಸೂರು ನಗರದ ಸರಕಾರಿ ಉದ್ಯಾನಗಳಲ್ಲೆಲ್ಲ ಕಾಯಿಪಲ್ಲೆ ಬೆಳೆಯಿಸುವ ಏರ್ಪಾಡು ಪ್ರಾರಂಭವಾಗಿದೆ. ಆಹಾರ ಬಿಕ್ಕಟ್ಟನ್ನು ಎದುರಿಸುವ ಪತ್ರದ ಅಂಗವಾಗಿ ಸರಕಾರ ಈ ಕ್ರಮ ಕೈಕೊಂಡಿದೆ.

ಕಾಂಗ್ರೆಸಿಗರು ರಾಜೀನಾಮೆ ಕೊಟ್ಟಿದ್ದರಿಂದ ತೆರವಾಗಿದ್ದ ಬೆಂಗಳೂರು ನಗರ ಸಭೆಯ ಸ್ಥಾನಗಳಲ್ಲಿ ೭ ಸ್ಥಳಗಳಿಗಾದ ಉಪಚುನಾವಣೆಯಲ್ಲಿ ೪ ಸ್ಥಾನಗಳು ಕಾಂಗ್ರೆಸ್ ಹುರಿಯಾಳುಗಳಿಗೆ ದೊರೆತಿವೆ. ಇನ್ನು ನಾಲ್ಕು ಸ್ಥಾನಗಳಿಗೆ ಪ್ರತಿಸ್ಪರ್ಧಿಯಿಲ್ಲದೆ ಆಯ್ಕೆಯಾಯಿತು. ಅವರಲ್ಲಿ ೩ ಜನ ಕಾಂಗ್ರೆಸಿಗರಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ವಾಯಿಸ ಚಾನ್ಸಲರರಾದ ಸಿಂಗಾರವೇಲು ಮುದಲಿಯಾರರು ನಿವೃತ್ತಿಪೂರ್ವ ರಜೆಯನ್ನು ತೆಗೆದುಕೊಳ್ಳಲಿರುವರೆಂದೂ ಅವರ ಸ್ಥಾನದಲ್ಲಿ ಈಗ ಶಿಕ್ಷಣ ಶಾಖೆಯ ಡೈರೆಕ್ಟರರಾಗಿರುವ ಶ್ರೀ ಸುಲ್ತಾನ ಮೊಹಿಯುದ್ದೀನರನ್ನು ನೇಮಿಸಿರುವರೆಂದೂ ಊಹಿಸಲಾಗಿದೆ

ಬೆಂಗಳೂರು ನಗರದ ಹಾಟೆಲ ಕೆಲಸಗಾರರ ಸಂಘವನ್ನು ಮೈಸೂರು ಕೂಲಿಕಾರ ಕಾಯದೆಯ ಪ್ರಕಾರ ನೊಂದಣಿ ಮಾಡಲು ಅವಕಾಶವಿದೆಯೆಂದು ಆ ಸಂಘದ ಕಾರ್ಯದರ್ಶಿಗಳಿಗೆ ಸರಕಾರದ ಕಾರ್ಯದರ್ಶಿಗಳು ತಿಳಿಸಿರುವದರಿಂದ ಸಂಘದವರು ಅದನ್ನು ನೊಂದು ಮಾಡಿಸುವ ಸಿದ್ಧತೆ ಮಾಡಿದ್ದಾರೆ.



ದ. ಕನ್ನಡದಿಂದ ಮದ್ರಾಸ ಶಾಸನ ಸಭೆಗೆ ಅವಿರೋಧ ಆರಿಸಿ ಬಂದ ಕಾಂಗ್ರೆಸ್ ಸದಸ್ಯ ಶ್ರೀ ಪಾಯಸ (ಕ್ರಿಶ್ಚನ್ ಸ್ಥಾನ)

ಮೈಸೂರು ಸಂಸ್ಥಾನದಲ್ಲಿ ಹಿಂದುಳಿದ ವರ್ಗಗಳ ಸರ್ವತೋಮುಖ ಅಭಿವೃದ್ಧಿಯ ಸಲುವಾಗಿ ೫ ವರ್ಷಗಳ ಯೋಜನೆಯೊಂದನ್ನು ಸಿದ್ಧಗೊಳಿಸಲು ಉಪಸಮಿತಿ ರಚಿಸಲು ಮೈಸೂರು ಕೇಂದ್ರ ಹಿಂದುಳಿದ ವರ್ಗಗಳ ಸಮಿತಿಯಲ್ಲಿ ನಿರ್ಣಯವಾಗಿವೆ. ಹಿಂದುಳಿದ ವರ್ಗಗಳ ಏಳಿಗೆಗಾಗಿ ಪ್ರತಿವರ್ಷವೂ ಕೊಡುತ್ತಿರುವ ೨ ಲಕ್ಷ ರೂಪಾಯಿಗಳನ್ನು ೩ ಲಕ್ಷಕ್ಕೇರಿಸಬೇಕೆಂದೂ ಸರಕಾರಕ್ಕೆ ಪ್ರಾರ್ಥಿಸಲಾಯಿತು.

ಮೈಸೂರು ಸರಕಾರದ ಪ್ರತಿನಿಧಿಗಳಿಗೂ ಹಿಂದುಸ್ತಾನ ಸರಕಾರದ ಮಿಲಿಟರಿ ಪೂರೈಕೆ ಸಮಿತಿಯ ಪ್ರತಿನಿಧಿಗಳಿಗೂ ಆದ ಮಾತುಕತೆ, ಪರಿಷತ್ತುಗಳ ಫಲವಾಗಿ ಮೈಸೂರು ಸರಕಾರದವರು ಸಂಸ್ಥಾನದಲ್ಲಿ ಆಹಾರ ಬೆಳೆಯನ್ನು ಶೀಘ್ರವಾಗಿ ಹೆಚ್ಚಿಸುವ ಮತ್ತು ಪೂರೈಕೆಯನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಟ್ರ್ಯಾಕ್ಟರುಗಳಿಂದ ಹಿಡಿದು ಜೀವಧಾತು ಮಾತ್ರೆಗಳವರೆಗೆ ಅನೇಕ ಯಂತ್ರ, ವಸ್ತು, ಸಾಮುಗ್ರಿಗಳಿಗೆ ಮೈಸೂರು ಸರಕಾರದವರು ಕೇಂದ್ರ ಸರಕಾರಕ್ಕೆ ಆರ್ಡರು ಕೊಟ್ಟಿದ್ದಾರೆ. ಆಹಾರ ವಸ್ತುಗಳ ಸಾರಿಗೆಗಾಗಿ ಮಿಲಿಟರಿ ವಾಹನಗಳನ್ನು ಸಹಾಯಕ್ಕೆ ತರಿಸಲಾಗುವದೆಂದೂ ತಜ್ಞರ ಸಹಾಯವನ್ನು ದೊರಕಿಸಲಾಗುವದೆಂದೂ ತಿಳಿಯುತ್ತದೆ.

ಪ್ರಾಥಮಿಕ ವಿದ್ಯಾಭ್ಯಾಸ ಖಾತೆಯ ಡೆಪ್ಯುಟಿ ಡೈರೆಕ್ಟರರಾದ ಡಾ. ಕೆ. ಎಸ್. ಕಿಣಿಯವರು ಇದೇ ಜುಲೈ ತಿಂಗಳಲ್ಲಿ ಮೈಸೂರು ಸರಕಾರದ ಸೇವೆಯಿಂದ ನಿವೃತ್ತರಾಗುವರು.

ಆಹಾರಾಭಾವದ ನಿಮಿತ್ತ ಈ ಸಲ ಜೂನ ತಿಂಗಳಲ್ಲಿ ಕುದುರೆ ಜೂಜನ್ನು ಬೆಂಗಳೂರಲ್ಲಿ ನಡೆಸಬೇಕೇ ಬೇಡವೇ ಎಂಬ ಚರ್ಚೆ ಮೈಸೂರು ಸರಕಾರ ಮತ್ತು ಬ್ರಿಟಿಶ ರೆಸಿಡೆಂಟರಲ್ಲಿ ನಡೆದು ಜೂಜು ನಡೆಸಬಾರದೆಂದು ನಿಶ್ಚಯವಾಯಿತು.

ಕೋಲಾರದ ಚಿನ್ನದ ಗಣಿಗಳಲ್ಲಿ ನಡೆದಿರುವ ಸಂಪಿನ ಪರಿಣಾಮವಾಗಿ ಗಣಿ ಕಂಪನಿಗಳಿಗೆ ಆದ ಹಾನಿಯನ್ನು ತುಂಬಲು ೮ ಲಕ್ಷ ರೂಪಾಯಿಯನ್ನಾದರೂ ಕೊಡಿಸಬೇಕೆಂದು ಕಂಪನಿಯವರು ಮೈಸೂರು ಸರಕಾರಕ್ಕೆ ವಿನಂತಿ ಮಾಡಿಕೊಂಡಿದ್ದಾರೆಂದೂ ಇದು ಮೊನ್ನೆ ಸರಕಾರದ ಚಿನ್ನದ ಸುಂಕ ಪರಿಶೀಲನಾ ಸಮಿತಿಯ ಸಭೆಯ ಮುಂದೆ ಬಂತೆಂದೂ ತಿಳಿಯುತ್ತದೆ. ಗಣಿ ಕಂಪನಿಯ ಪರವಾಗಿ ಇಂಗ್ಲಂಡಿನಿಂದ ಬಂದಿರುವ ಮಿ. ಟೇಲರರವರು ಮೇಲಿನ ಸಭೆಯಲ್ಲಿ ಉಪಸ್ಥಿತರಾಗಿದ್ದರು. ಗಣಿಯ ಸಂಪನ್ನು ಮುಕ್ತಾಯಗೊಳಿಸಲು ಕಂಪನಿಯವರು ಅವಶ್ಯವಾಗಿ ಪ್ರಯತ್ನಿಸಬೇಕೆಂದು ಮತ್ತು ಕೂಲಿಕಾರರಿಗೆ ಸವಲತ್ತು ಕೊಡಬೇಕೆಂದು ಸಮಿತಿ ಸದಸ್ಯರೆಲ್ಲ ಒತ್ತಾಯಗೊಳಿಸಿದರೆಂದೂ ಹೇಳಲಾಗಿದೆ. ಗಣಿ ಕಂಪನಿಯವರು ಕೂಲಿಕಾರರಿಗೆ ಹೊಸ ಸವಲತ್ತುಗಳನ್ನು ಕೊಡುವ ಪ್ರಕಟನೆ ಬೇಗನೆ ತೆಗೆಯುವವರಿದ್ದಾರೆಂದು ತಿಳಿಯುತ್ತದೆ.

ಮೇಘಜನ್ಮ*

[ಲೇಖಕ:— ಶ್ರೀವತ್ಸ, ಕಲಬುರ್ಗಿ]

ಉರ್ವಶಿಯು ವೀಣೆಯನ್ನು ಸರಿಮಾಡಲು ಪ್ರಯಾಸ ಪಟ್ಟಳು. "ಇರಲಿ ಬಿಡು ದೇವಾಂಗನಾ! ಯಾವದು ವಿಕೃತವಾಗಿದೆಯೋ ಅದು ವಿಕೃತವಾಗಿಯೇ ಉಳಿಯಲಿ" ನಿಟ್ಟುಸಿರು ಬಿಡುತ್ತ ದೇವರಾಜನು ನುಡಿದನು. ಅವನ ನಿಟ್ಟುಸಿರು ಇಂದ್ರಾಣಿಯನ್ನು ಕಲ್ಮೂರ್ತಿಯನ್ನಾಗಿ ಮಾಡಿತು. ಅಮೃತದ ಬಟ್ಟಲು ಕೈಯಲ್ಲಿ ಹಾಗೇ ಉಳಿಯಿತು.

ಉರ್ವಶಿಯು ಮದಿರೆ ತುಂಬಿದ ದೃಷ್ಟಿಯನ್ನು ಇಂದ್ರನ ಕಡೆಗೆ ಬೀರಿ, "ಯಾಕೆ ಮಹಾರಾಜ! ತಮ್ಮ ವಿಶಾಲ ಹೃದಯದಲ್ಲಿ ಇಂಥ ಕೀಳುವಿಚಾರ ಮಾಡಬಹುದೆ?" ಎಂದಳು. "ವಿಚಾರ! ವಿಚಾರವಿಲ್ಲ. ನನಗೆ ಎಂದೂ ಮರೆಯದಂಥ ವಿಷಾದವಾಗಿದೆ. ನಾನು ಯುವಕನಾಗಿದ್ದಾಗ, ಯೌವನದ ಉನ್ಮಾದವು ಸಂಕೋಚದ ಬಂಧನವನ್ನೇ ಹರಿದೊಗೆಯಿತು— ಮಾಯಾಶಕ್ತಿಯು, ದೇವಶಕ್ತಿಗಳ ಪರೀಕ್ಷೆಗಾಗಿ 'ತ್ರಿಲೋಕಸುಂದರಿಯನ್ನು ನಿರ್ಮಾಣ ಮಾಡಿದನು. ಸಾಧುಗಳು ತಪಸ್ಸನ್ನು ಕಳೆಗಣಿಸಿ ಪ್ರೇಮಭಿಕ್ಷೆಯನ್ನು ಯಾಚಿಸಿದರು — ನಾನು ಅವಳನ್ನು ಹಿಂಬಾಲಿಸಿದೆ. ಅವಳು ಕೌಮಾರ್ಯವನ್ನು ಉಳಿಸಿಕೊಳ್ಳಲು ಬಹುದೂರ ಧಾವಿಸಿದಳು, ತೃಷಿತ ಪಕ್ಷಿಯಂತೆ ಹಿಂದೆ ಹಿಂದೆ ನಾನು.

"ಒಂದು ದಿನ ಅವಳು ಅಮರಾವತಿಯ ಸುವರ್ಣ ಉದ್ಯಾನದಲ್ಲಿ ಪುಷ್ಪಗಳನ್ನು ಹೆಣೆಯುತ್ತಾ ಕುಳಿತುದನ್ನು ಕಂಡೆ. ಕೂಗಿ ಕರೆದೆ— "ಮಧು, ಬಾರೆ" ಎಂದು. ಮುಗುಳು ನಗೆ ನಗುತ್ತ ಕುಡಿನೋಟವನ್ನು ಬೀರಿದಳು—ಕೋಮಲವಾದ ಅಧರಗಳು ಕಮಲದ ಎಸಳಿನಂತೆ ಅದುರಿದವು—ಅವಳು ಏನೋ ಹೇಳಿದಂತಿದೆ— "ಇಲ್ಲ!"

"ಮಾತಾಡಿಸಬೇಕೆಂದು ಸಾಹಸ ಮಾಡುವ ಪೂರ್ವದಲ್ಲಿಯೇ ಅವಳು ಅದೃಶ್ಯಳಾಗಿದ್ದಳು. ನಾನು ಅಸಮಾಧಾನದ ಕಡಲಿನಲ್ಲಿ ಮುಳುಗಿದೆ. ಮಾಯಾಮಯ ಮಧುವಿನ ಮೇಲೆ ಇಷ್ಟೇಕೆ ಮೋಹ ? ಸಾಧ್ವಿ ಇಂದ್ರಾಣಿಯ ಸ್ನೇಹವನ್ನೇಕೆ ಬಯಸುವದಿಲ್ಲ? ಎಂದು ಯೋಚಿಸುತ್ತ ಚಂದ್ರಧವಳ ಪುಷ್ಪಾಸನದಲ್ಲಿ ವಿರಮಿಸಿದ್ದೆನು. ಒಂದುದಿನ ಪ್ರಭಾತ ಸಮಯ, ಭ್ರಮರವು ಝೇಂಕರಿಸುತ್ತ ಅರಳಿದ ಮೊಗ್ಗನ್ನು ಚುಂಬಿಸಿತು ಮರುಳೆ ? ಮಧುವಿನ ಮೇಲಣ ವ್ಯಾಮೋಹಕ್ಕೆ 'ಪ್ರೇಮ'ವೆಂದು, ಕಿವಿಯೊಳಗೆ ಉಸುರಿದಂತಾಯಿತು.——ಅಂದಿನಿಂದ ಮೃತ್ಯುಲೋಕದ ಪ್ರೇಮಶಬ್ದದ ಆವಿರ್ಭವ ಸ್ವರ್ಗದಲ್ಲಿಯೂ ಜನಿಸಿತು. ಪ್ರೇಮಶಬ್ದ ಎಷ್ಟು ರಸಭರಿತವಾಗಿದೆ!

"ಪೃಥ್ವೀವಾಸಿಗಳು ಪ್ರೇಮದಿಂದ ಸಫಲತೆಯನು ಪಡೆಯುವರೆಂದು ಕೇಳಿದ್ದೇವೆ. ಇದರಿಂದ ಮಾಯಾಮಯ ಮಧುವನ್ನು ಪಡೆಯುವ ಅಭಿಲಾಷೆ ಕೊಂಚ ಆಶಾದಾಯಕವೆನಿಸಿತು.

"ಹಾ, ಒಂದು ಸಲ ಈ ಬಲಿಷ್ಠ ತೋಳ್ನುಗಳಿಂದ ಬಂಧಿಸಬೇಕೆಂದು ಸಾಹಸ ಮಾಡಿದೆ. ಈ ಬಲಿಷ್ಠ ತೆಕ್ಕೆಯಲ್ಲಿ ಬಂಧಿತವಾದಾಗ ಯಾರು ತಾನೇ ಅಭಿಮಾನಪಡಲಿಕ್ಕಿಲ್ಲ. ಇರಲಿ, ಮಧು ಈ ಮಮತಾಪೂರ್ಣ ನಯನಗಳ ಒಡಪನ್ನು ಹೇಗೆ ತಿಳಿದಾಳು——ಅಂದಿನಿಂದ ಅವಳನ್ನು ಕಾಣುವ ಸುಯೋಗ ಸಂಧಿಸಲಿಲ್ಲ. ಅವಳು ಸ್ವಾಭಿಮಾನಿಯಂತೆ ಕಾಣುತ್ತಾಳೆ.

"ನನ್ನ ಆಶಾಶಿಖಿಗಳು ಸಹಸ್ರಾರು ನಾಲಿಗೆಗಳನ್ನು ಚಾಚಿದವು. ಹೃದಯವು ಜ್ವಾಲಾಮುಖಿ ಪರ್ವತವನ್ನು ಧಾರಣ ಮಾಡಿಕೊಂಡಿತು.——

"ಪತಿಪತ್ನಿಯರ ಅಗಲುವಿಕೆಗೆ 'ವಿಯೋಗ'ವೆಂದು ಮತ್ತು ನನ್ನ ಕರುಣಾಮಯ ದೆಸೆಗೆ 'ವಿರಹ'ವೆಂದೂ ಸಂಧ್ಯಾಸೂರ್ಯನ ರಶ್ಮಿಯು ಕಮಲದ ಅಂತಿಮ ಸ್ಪರ್ಶ ಮಾಡುತ್ತ ಈ ಸಂದೇಶವನ್ನಿತ್ತಿತು. ಅಂದಿನಿಂದ ನಭವಾಸಿಗಳೂ ಪ್ರೇಮದ ಕಹಿಫಲ, ವಿರಹವೆಂದು ತಿಳಿದರು.—ಎಷ್ಟು ಕಠೋರವಾಗಿದೆ. ಈ ಶಬ್ದ—ಮಾನವನ ಹೃದಯವನ್ನು ಚೂರು ಚೂರು ಮಾಡುವಂಥದು.

"ಈ ಆಘಾತದಿಂದ ಅಂತಃಸ್ಥಲವು ಒಡೆದು ಜೋಡಿಸಲು ಬಾರದಾಗಿದೆ. ಆಕೋ ನೋಡು ಉರ್ವಶಿ! ಪೂರ್ವ ದಿಕ್ಕಿನಿಂದ ನೀಲ ಮೇಘಗಳು ನುಗ್ಗಿಕೊಂಡು ಬರುತ್ತಲಿವೆ—ಇವು ನನ್ನ ಹೃದಯದಿಂದ ಹಾರಿದ ಕಣಗಳೇ ! ಪಾಪ, ಮದಗಜಗಳಂತೆ. ಅನವರತ ಅಶ್ರುಗಳನ್ನು ಎದುರಿಸುತ್ತ ಚಲಿಸುತ್ತಿವೆ. ಆದರೂ ಶಾಂತಿಶೂನ್ಯ ಮಾಯಾಮಯಿ ಮಧು ಪೃಥ್ವಿಯಲ್ಲಿದ್ದಾಳೆಂದು ಹೇಳುತ್ತಾರೆ. ಆದಕಾರಣ ಇವು ಆಕಾಶವನ್ನು ಸುತ್ತಿಕೊಂಡು ಪೃಥ್ವಿಯ ಮೇಲೆ ಬೀಳುತ್ತವೆ. ಒಂದು ಕಾಲಕ್ಕಾದರೂ ಅವಳ ಪಾಷಾಣ ಹೃದಯವು ಕರಗಿ ನೀರಾಗಬಹುದು, ಅಥವಾ ಪ್ರೇಮಶ್ರುತಿಯೂ ನಾದ ಮಾಡಬಹುದು, ಮತ್ತಾರಿಗೆ ಗೊತ್ತು, ಸಂಗಮವಾದರೂ ಆಗಬಹುದು. ಪೃಥ್ವಿಯಿಂದ ಮತ್ತೊಮ್ಮೆ ಪ್ರೇಮಪ್ರಾಪ್ತಿಯ ಶಬ್ದವು ಸ್ವರ್ಗಕ್ಕೆ ಬರಬಹುದು. ಇಲ್ಲ—ಆ ಶಬ್ದಕ್ಕೆ 'ಸಂಯೋಗ' ಹೇಳುತ್ತಾರೆ.

"ಹಾ....ಇಂದ್ರಾಣಿ; ಸಂಯೋಗ ಶಬ್ದವು ಅಂದವಾಗಿಲ್ಲವೇ?—ಮಾತಾಡೆ ?"


ಉರ್ವಶಿಯ ವೀಣೆಯು ಅನಾಯಾಸವಾಗಿ ನಾದ ಮಾಡಿತು. ನರ್ತಕಿಯರ ವೃಂದವು ಹರ್ಷದಲ್ಲಿ ಮುಳುಗಿತು. ಇಂದ್ರಾಣಿಯ ಕೈಯಲ್ಲಿದ್ದ ಅಮೃತದ ಬಟ್ಟಲು ಭೂಮಿಗೆ ಉರುಳಿತು ಅವಳ ವಿಶಾಲ ನಯನಗಳಲ್ಲಿ ಮಾತ್ಸರ್ಯಬಿಂದು ಕಾಣಿಸಿದವು-—

"ದೇವಾ, ತಾವು ಮೇಘಗಳಿಗೆ ಜನ್ಮವಿತ್ತ ಕಾರಣ ಇದುವೇ"? ಎಂದು ಕೂಡಲೆ ಪ್ರಶ್ನೆ ಹಾಕಿದಳು. ಉರ್ವಶಿ. ಉರ್ವಶಿಯ ಮುಗ್ಧ ಜಿಜ್ಞಾಸೆಗೆ ನಗು ಬಂದಿತು ಅವನಿಗೆ. ಮೋಡಗಳು ಭಯಂಕರ ಗುಡುಗಲು ಪ್ರಾರಂಭಿಸಿದವು. ಇಂದ್ರನ ರಾಜಸಭೆಗೆ ಶಾಂತಿಯನ್ನುಂಟುಮಾಡಲು ಮಧು ಬರಲಿಲ್ಲ. ಸಂಯೋಗ ಶಬ್ದ ಅಪೂರ್ಣವಾಗಿಯೇ ಉಳಿಯಿತು.

* ಹಿಂದೀ ಕತೆಯಿಂದ

ಏ. ಆಯ. ಸಿ. ಸಿ ಯಲ್ಲಿ ಸಂಶೋಧನಾತ್ಮಕ ಗ್ರಂಥಾಲಯ

ಸಾಮಾಜಿಕ ಆರ್ಥಿಕ ಹಾಗು ರಾಜಕೀಯ ಸಮಸ್ಯೆಗಳ ಅಭ್ಯಾಸಕ್ಕಾಗಿ ಏ. ಆಯ. ಸಿ. ಸಿ. ಕಚೇರಿಯಲ್ಲಿ ಸಂಶೋಧನಾತ್ಮಕ ಗ್ರಂಥಾಲಯವೊಂದನ್ನು ಕಟ್ಟಲು ಪ್ರಯತ್ನಿಸುವದಾಗಿ ಆಚಾರ್ಯ ಕೃಪಲಾಣಿಯವರು ಸಾರಿರುವರು. ಆದುದರಿಂದ ಎಲ್ಲ ಗ್ರಂಥಕರ್ತರು ಮತ್ತು ಪ್ರಕಾಶಕರು ತಮ್ಮ ಪ್ರಕಟನೆಗಳನ್ನು ಏ. ಆಯ. ಸಿ. ಸಿ. ಕಚೇರಿಗೆ ಪುಕ್ಕಟೆ ಕಳಿಸಬೇಕಾಗಿ ಬಿನ್ನವಿಸಿದ್ದಾರೆ.



ಜ್ಯೋತಿಷಿ:- ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯ ಕಥನ ಕಾರ್ಯಾಲಯ, ಹುಬ್ಬಳ್ಳಿ

ಮಾರ್ಚ ೧೮ ರಿಂದ ೨೪ ರ ವರೆಗೆ

ಮೇಷ

ನಿಮ್ಮ ಪ್ರಕೃತಿ ಅನುಕೂಲ, ಆದರೆ ಹೆಂಡತಿ ಮಕ್ಕಳು ಮತ್ತು ಮನೆ ಮಂದಿಗಳ ಪ್ರಕೃತಿ ಕೆಡುವ ಅಂಜಿಕೆ. ಎಲ್ಲ ವಿಷಯಗಳಲ್ಲಿ ಮನಸ್ಸಿನಲ್ಲಿ ಗೊಂದಲ. ಸಹಾಯಕರ್ತರಿಗೂ ಅಡಚಣಿ. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಮತ್ತು ಲಾಭ ಉತ್ತಮ. ಆದರೆ ವೆಚ್ಚ ಮಾತ್ರ ಒಂದೊಂದು ಸಲ ಹೆಚ್ಚಾಗಿ. ಅದರಲ್ಲಿಯ ಉದ್ದೇಶ ಅಪೂರ್ಣ ಉಳಿಯುವ ಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಇತರ ಸರಕಾರಿ ಕೆಲಸಗಳಲ್ಲಿ ಯಶ ತೋರಿದರೆ ನಿಮ್ಮಿಂದ ಮಿತ್ರರ ಮೇಲೆ ಕೆಲವೊಂದು ತೊಂದರೆ ಬರುವ ಅಂಜಿಕೆ. ಪತ್ರವ್ಯವಹಾರಕ್ಕಿಂತ ಪ್ರವಾಸ ಭೆಟ್ಟಿ ಅನುಕೂಲ. ಅಶ್ವಿನಿಯ ೪ ನೇ ಮತ್ತು ಭರಣಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೨೦, ೨೧, ೨೨ ಅನುಕೂಲ.

ವೃಷಭ

ಪ್ರಕೃತಿ ಮತ್ತು ಸ್ತ್ರೀಸುಖ ಅನುಕೂಲ. ಮಕ್ಕಳಲ್ಲಿ ಉತ್ಸಾಹಜನಕ ಸಂಗತಿಗಳು. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಮತ್ತು ಲಾಭ ಉತ್ತಮ ದೊರೆತರೂ ಮನಸ್ಸಿನಲ್ಲಿ ಒಂದು ಬಗೆಯ ಚಿಂತೆ ಮತ್ತು ಭಯ ಎನಿಸುತ್ತಿರುವ ವಾತಾವರಣ. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಶ್ರಮದಿಂದ ಸಿಕ್ಕುತ್ತಿರುವ ಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಮಿತ್ರರಲ್ಲಿ ವಿರೋಧ. ಆದರೆ ಶತ್ರುಗಳಲ್ಲಿ ಮನಮಿಲನ. ಪ್ರವಾಸ ತೊಂದರೆಯದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರವೂ ಅನುಕೂಲ. ಕೃತ್ತಿಕೆಯ ೪ ನೇ ಮತ್ತು ರೋಹಿಣಿಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದ ಯಶಸ್ಸು. ತಾ. ೧೮, ೧೯, ೨೩ ಅನುಕೂಲ.

ಮಿಥುನ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಅನುಕೂಲ. ಪ್ರಿಯ ಜನರಲ್ಲಿ ಸಹವಾಸ. ಅಪೇಕ್ಷೆಯಲ್ಲಿ ಇಲ್ಲದೆ ಮನೆಯಲ್ಲಿ ಮಂಗಳಕಾರ್ಯ. ಉದ್ಯೋಗದಲ್ಲಿ ಪ್ರಗತಿ, ಪ್ರತಿಷ್ಠೆ ಮತ್ತು ಲಾಭವೂ ಉತ್ತಮ. ಸ್ತ್ರೀ ವರ್ಗದಲ್ಲಿ ವಿಶೇಷ ಆದರ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ವಿಜಯ. ಮಿತ್ರಸುಖ ಉತ್ತಮ. ಸ್ಥಾನದಲ್ಲಿ ಕೆಲ ಮಟ್ಟಿಗೆ ಅನುಕೂಲ ಸಂಗತಿಗಳು. ಪ್ರವಾಸಾದಿ ಕೆಲಸಗಳು ಒಟ್ಟಿನಲ್ಲಿ ಅನುಕೂಲ. ಮೃಗದ ೪ ನೇ ಮತ್ತು ಆರಿದ್ರಾದ ಮೊದಲನೆ ಮೂರು ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೦, ೨೧, ೨೨ ಅನುಕೂಲ.

ಕರ್ಕ

ಪ್ರಕೃತಿ ಅನುಕೂಲ. ಆದರೆ ಸ್ತ್ರೀಸುಖದಲ್ಲಿ ಮನಸ್ಸಿನ ವಿರುದ್ಧ ವ್ಯತ್ಯಯದ ಪ್ರಸಂಗ. ಇತರ ವಿಷಯಗಳಲ್ಲಿ ಪ್ರಾಪಂಚಿಕ ಸಮಾಧಾನ ಸಾಧಾರಣ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭವೂ ಉತ್ತಮ. ಆದರೆ ಪ್ರತಿಷ್ಠೆಯ ಗಡಿಬಿಡಿ ಕೆಟ್ಟದ್ದು. ಮಿತ್ರಸುಖ ಉತ್ತಮ. ಹೊಸ ಮಾಡಿಕೊಂಡ ಮಿತ್ರರಲ್ಲಿ ಕೆಲ ಜನರಲ್ಲಿ ಪ್ರಮಾದ ಮಾಡುವ ಅಂಜಿಕೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಹಿಮ್ಮೆಟ್ಟುವದು. ಪ್ರವಾಸ ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಪುಷ್ಯದ ೪ ನೇ ಮತ್ತು ಆಶ್ಲೇಷದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೮, ೧೯, ೨೦ ಅನುಕೂಲ.

ಸಿಂಹ

ಪ್ರಕೃತಿ ಸ್ವಲ್ಪ ಕೆಡುವ ಅಂಜಿಕೆ. ಹೆಂಡತಿ ಮಕ್ಕಳ ಮೇಲಿನ ಪ್ರೇಮ ಮತಭೇದ. ಜನರಿಗೆ ಪ್ರಿಯ. ಆದರೆ ನಿಮಗೆ ಬಹಳ ಅಪ್ರಿಯರಾದ ಜನರೊಡನೆ ಸಹವಾಸ. ಉದ್ಯೋಗದಲ್ಲಿ ಪ್ರಗತಿ ಉತ್ತಮ. ಆದರೆ ಪ್ರತಿಷ್ಠೆ ಮತ್ತು ಲಾಭವೂ ಮನಸ್ಸಿನಂತೆ. ಆದರೆ ಕಿರಿಕಿರಿ ತೊಂದರೆಯಿಂದ ಶಾಸ್ತ್ರ ದೊಡ್ಡವರಿಗಿಂತ ಸಣ್ಣ ದರ್ಜೆಯ ಮಿತ್ರರಿಂದ ಹೆಚ್ಚು ಸುಖ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಅನಪೇಕ್ಷಿತ ಲಾಭದ ಸಂಭವ. ಪ್ರವಾಸ ಮತ್ತು ಭೆಟ್ಟಿ ಪತ್ರವ್ಯವಹಾರಕ್ಕಿಂತ ಬಹಳ ಉತ್ತಮ. ಮಘಾದ ೪ ನೇ ಮತ್ತು ಪೂರ್ವಾದ ಮೊದಲನೆ ಮೂರು ಚರಣಗಳಿಗೆ ತೊಂದರೆ ಕಡಿಮೆ. ತಾ. ೧೮, ೧೯, ೨೦, ೨೧ ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಮತ್ತು ಪ್ರತಿಯೊಂದು ಕೆಲಸದಲ್ಲಿ ಅಲ್ಪಾಯಾಸದಿಂದ ಯಶಸ್ಸು. ಮಿತ್ರಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಡಂಬಡಿಕೆಯಾಗುವ ಸಂಭವ. ಪ್ರವಾಸಾದಿ ಕೆಲಸಗಳು ಹಿತಕರ. ಉತ್ತರಾದ ೪ ನೇ ಮತ್ತು ಹಸ್ತಾದ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೇ ಯಶಸ್ಸು. ತಾ. ೧೮, ೧೯, ೨೦, ೨೧ ಅನುಕೂಲ.

ತುಲಾ

ಪ್ರಕೃತಿಗೆ ಕಿರುಕುಳ ಕ್ಲೇಶ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಮಧ್ಯಮ. ಮಾನ್ಯ ಪೂಜ್ಯ ವ್ಯಕ್ತಿಗಳಲ್ಲಿ ಒಬ್ಬರು ನಿಮ್ಮ ವಿರುದ್ಧ ಲೋಕಮತ ಕಲುಷಿತ ಮಾಡುವಂತೆ ಪ್ರಚಾರ. ಉದ್ಯೋಗದಲ್ಲಿ ಪ್ರಗತಿ ಕಡಿಮೆ. ಪ್ರತಿಷ್ಠೆ ಕಡಿಮೆಯಾಗುವದು ಮತ್ತು ಲಾಭದಲ್ಲಿ ಮಾಂದ್ಯದ ಚಿನ್ಹಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸ್ವಲ್ಪ ಅನುಕೂಲತೆಯು ಉಳಿಯುವದು. ಆದರೆ ಶತ್ರುಗಳು ಜುಲುಮೆಯಿಂದ ಮತ್ತು ಜಬರದಸ್ತಿಯಿಂದ ತೊಂದರೆ ಕೊಡುವ ಸಂಭವ. ಮಿತ್ರರಲ್ಲಿ ವಿರೋಧ ದೃಷ್ಟಿ. ಕ್ಷೋಭದ ಸ್ವಲ್ಪ ಅನುಭವ. ಪ್ರವಾಸಾದಿ ಕೆಲಸ ತೊಂದರೆಯದು. ಚಿತ್ತಾದ ೪ನೇ ಮತ್ತು ಸ್ವಾತಿಯ ಮೊದಲನೆ ೩ ಚರಣಗಳಿಗೆ ತೊಂದರೆಯದು. ತಾ. ೨೦, ೨೧, ೨೨ ಅನುಕೂಲ.

ವೃಶ್ಚಿಕ

ಪ್ರಕೃತಿಯಲ್ಲಿ ಒಂದು ಬಗೆಯ ಅಸಮಾಧಾನ. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ವಿಪರೀತ. ಆದರೆ ಸ್ತ್ರೀಸುಖ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಪ್ರತಿಷ್ಠೆಯನ್ನುಳಿಸಿಕೊಳ್ಳುವದಕ್ಕಾಗಿ ಬಹಳ ತೊಂದರೆ. ಶುಭ ಕೃತ್ಯಗಳಲ್ಲಿ ಮಾತ್ರ ಬಹಳ ವೆಚ್ಚ. ವಾದದಲ್ಲಿ ಇಲ್ಲವೆ ಸ್ಪರ್ಧೆಯಲ್ಲಿ ಉಭಯ ಪಕ್ಷಗಳ ಸಮಾನ ಸ್ಥಿತಿ. ಪ್ರವಾಸಾದಿ ಕೆಲಸ ಹಿತಕರ. ಅನುರಾಧೆಯ ೪ನೆ ಮತ್ತು ಜ್ಯೇಷ್ಠಾದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೮, ೧೯, ೨೩, ೨೪ ಅನುಕೂಲ.

ಧನು

ಪ್ರಕೃತಿ ಉತ್ತಮ. ಆದರೆ ಹೆಂಡತಿಗೂ ಆಗಾಗ ತೊಂದರೆ ಪ್ರಮಾಣದಲ್ಲಿ ವಾಗ್ವಾದದ ಪ್ರಸಂಗ. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ಬಹಳ. ಆದರೆ ಮಕ್ಕಳಲ್ಲಿ ಇಬ್ಬರ ವಿಶೇಷ ಉನ್ನತಿ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಪ್ರತಿಷ್ಠೆಗಿಂತ ಹೆಚ್ಚು ಅನುಕೂಲ. ಸಾರ್ವಜನಿಕ ಹಿತದ ಕೆಲಸಗಳಲ್ಲಿ ಮುಖಂಡತ್ವ ಇಲ್ಲವೆ ಅಧಿಕಾರ ಬರುವ ಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸಾಮಾನ್ಯ ಅನುಕೂಲತೆ. ಪ್ರವಾಸಾದಿ ಕೆಲಸ ಬಹಳ ಮೂಲಾದ ೪ನೆ ಮತ್ತು ಪೂರ್ವಾಷಾಢದ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೮, ೧೯, ೨೦, ೨೧ ಅನುಕೂಲ.

ಮಕರ

ಪ್ರಕೃತಿ ಅನುಕೂಲ. ಆದರೆ ಪ್ರಾಪಂಚಿಕ ಸುಖ ಸಾಧಾರಣವೆ. ಮಕ್ಕಳಲ್ಲಿ ಒಬ್ಬರ ವಿಶೇಷ ಉನ್ನತಿ. ಆದರೆ ದವಾಖಾನೆಯ ಖರ್ಚಿನಲ್ಲಿ ಒಬ್ಬ ಪ್ರಿಯ ಮನುಷ್ಯರ ಅವಕಾಶ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಅನುಕೂಲ. ಆದರೆ ಲಾಭದ ವಿಷಯ ಮಾತ್ರ ಕಠಿಣ. ಮಿತ್ರರಲ್ಲಿ ವಿರೋಧ. ದೊಡ್ಡ ಕೆಲಸವನ್ನೆಳಸಿಕೊಳ್ಳುವದಕ್ಕಾಗಿ ಬಹಳ ವೆಚ್ಚ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಯಶಸ್ಸು. ಪ್ರವಾಸಾದಿ ಕೆಲಸ ಸಾಧಾರಣ ಅನುಕೂಲ. ಉತ್ತರಾಷಾಢಾದ ೪ನೆ ಮತ್ತು ಶ್ರವಣಾದ ಮೊದಲನೆ ೩ ಚರಣಗಳಿಗೆ ಬಹಳ ತೊಂದರೆ. ತಾ. ೧೮, ೧೯, ೨೦, ೨೧ ಅನುಕೂಲ.

ಕುಂಭ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ. ಶತ್ರು, ಇಲ್ಲವೆ ವಿರೋಧಿಗಳಲ್ಲಿ ಒಬ್ಬರ ನಾಶದ ಸಂಭವ. ವಾದದಲ್ಲಿ ಇಲ್ಲವೆ ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪ್ರವಾಸ ಕೆಲಸದ ಸಾಧಾರಣ ಅನುಕೂಲ. ಧನಿಷ್ಠಾದ ೪ನೆ ಮತ್ತು ಶತತಾರೆಯ ಮೊದಲನೆ ೩ ಚರಣಗಳಿಗೆ ತೊಂದರೆಯಿಂದಲೆ ಯಶಸ್ಸು. ತಾ. ೨೦, ೨೧, ೨೨ ಅನುಕೂಲ.

ಮೀನ

ಪ್ರಕೃತಿಗೆ ಕಿರುಕುಳ ಕ್ಲೇಶ. ಕುಟುಂಬದಲ್ಲಿ ಎಲ್ಲ ಬಗೆಯಿಂದ ಕುಶಲವಿಲ್ಲ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಸಾಧಾರಣವೆ. ಆದರೆ ಒಂದು ಮಹತ್ವದ ಕೆಲಸದಲ್ಲಿ ಒಳ್ಳೆ ಯಶಸ್ಸು. ಬಹಳ ಧಾರ್ಮಿಕ ಕೃತ್ಯಗಳು. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಬಹಳ ಅನುಕೂಲ. ಉತ್ತರಾ ಭಾದ್ರಪದೆಯ ೪ನೆ ಮತ್ತು ರೇವತಿಯ ಮೊದಲನೆ ೩ ಚರಣಗಳಿಗೆ ತೊಂದರೆ ಕಡಿಮೆ. ತಾ. ೧೮, ೧೯, ೨೩, ೨೪ ಅನುಕೂಲ.

ಹರಟೆ

ಮದುವೆಗೆ ಮುಂಚೆ....?

ನಿರೀಕ್ಷಿಸಿದವರು: ಬಿ. ಜಿ. ತಾಪಸ ಬೆಂಗಳೂರ

ನಾವು ವಾಸಿಸುತ್ತಿರುವ ಈ ಜಗತ್ತು ಒಂದು ವಿಚಿತ್ರ ಪ್ರದೇಶ. ಇಲ್ಲಿ ಹುಟ್ಟಿ ಬಂದ ಮೇಲೆ ಮದುವೆಯೆಂಬ ಒಂದು ಅತ್ಯುಚ್ಚ ತರಗತಿಯ ಸಂಸ್ಕಾರವು ಪ್ರತಿಯೊಬ್ಬನ ಬಾಳಿನಲ್ಲಿ ಬರುವ ಒಡೆಯಲಾರದ ಸೂಕ್ಷ್ಮ ಒಗಟು. "ಕಂಡದ್ದೊಕ್ಕಿಂತ ಕಾಣದೊಡೆಯದು ಸೊಬಗೆಂಬ" ಉಕ್ತಿಯಂತೆ ವಿವಾಹವು ನಮ್ಮ ಜೀವನದಲ್ಲಿ ಘಟಿಸುವ ಗಹನವಾದ ತೊಡಕು. ಹುಡುಗ ಹುಡುಗಿಯರು ಬಾಲ್ಯಾವಸ್ಥೆಯನ್ನು ದಾಟಿದ ಮೇಲೆ ಹಿರಿಯರಿಗೆ ಇದೊಂದು ತಲೆಬೇನೆ. ಈ ಸಮಸ್ಯೆಯನ್ನು ನಾನು ನಿರೀಕ್ಷಿಸಿದಾಗ ವಿಚಾರಗಳ ತೆರೆಗಳು ಮನಸ್ಸಿನಲ್ಲಿ "ನಾ ಮುಂದೆ, ನೀ ಮುಂದೆ" ಎಂದು ಗುಡುಗುತ್ತವೆ. ಆ ಗುಡುಗಿನ ಸಿಡಿಲನ್ನೇ ಇಲ್ಲಿ ಕೆಳಗೆ ವಿವರಿಸಿದ್ದೇನೆ.

೧) ನಾನು ಮದುವೆಯಾಗಲೋ ?

೨) ಯಾರನ್ನು ಮದುವೆಯಾಗಲಿ ?

೩) ನಾನು ಯಾವಾಗ ಮದುವೆಗೆ ಅರ್ಹನು ?

ಒಂದು ಸುಂದರವಾದ ಬೀದಿಯಲ್ಲಿ ೧೬ ವರ್ಷದ ಯುವತಿ ಯುವಕರ ಕಡೆಗೆ ನೋಟ ಬೀರುತ್ತ ಹೋಗುತ್ತಾಳೆಂದು ಕಲ್ಪಿಸುವಾ. ಏನು ಹೇಳಲಿ ಅವಳ ಅಂದಚೆಂದ! ಕಪ್ಪಾಗಿ ಹೊಳೆಯುವ ಎರಡು ಕಣ್ಣು, ಬಿಳಿ ಕೆಂಪು ಮಿಶ್ರವಾದ ಕಪೋಲ, ಹಣೆಮೇಲೆ ಹಾರಾಡುವ ಮುಂಗುರುಳುಗೂದಲು, ಎರಡು ತುಟಿಗಳಂತೂ ಚೆಂಬಣ್ಣ. ವಜ್ರದ ಮೂಗುತಿಯಿಂದೊಡಗೂಡಿ ಹೊಳೆಯುವ ಸುಂದರವಾದ ಮೂಗು. ದುಂಡಾಗಿ ಕಮಲದಂತೆ ಅರಳಿರುವ ಮುಖ. ಅಚ್ಚಗಪ್ಪಾದ ಜಡೆಯಲ್ಲಿ ಸುಗಂಧ ಬೀರುವ ಒಂದು ಗುಲಾಬಿಹೂ. ದೇಹ ಸೌಂದರ್ಯಕ್ಕೆ ಸರಿಯಾಗಿ ಉಟ್ಟ ರೇಶಿಮೆ ಸೀರೆ. ಅದಕ್ಕಂದವಾದ ಕೆಂಪು ಮಲ್ಲಿನ ಝುಂಪರು. ಹೆಜ್ಜೆ ಹೆಜ್ಜೆಗೂ ನಿನಾದಗೆಯ್ಯುವ ಅವಳ ಪೈಜಣ. ಈ ಪ್ರೇಮರಾಶಿಗೆ ಮಾರುಹೋಗದ ಗಂಡಸಾರು ? ಅವಳೇಕೆ ನನ್ನನ್ನು ಪ್ರೀತಿಸಬಾರದೆನ್ನುವಿರಲ್ಲದೆ ? ಆದರೆ ನನ್ನದು ಸ್ವಲ್ಪ ದೂರದೃಷ್ಟಿ. ಅದಕ್ಕೆ ತಟ್ಟನೆ ಕೆಳಗಿನ ಗೀತಗಳು ನೆನಪಿಗೆ ಬಂದವು.

"ಯಾರ ಮಗಳವ್ವ ನೀ ಎನಿಸಿ ನೋಟದ ಗೊಂಬೆ
ಸುರುಳಿಗೂದಲ ಮಲ್ಲಿಗೆ! ನನ್ನ ಗೆಳತಿ॥
ಸುಗುಣ ಸಿಂಗಾರ ಮಗಳವ್ವ॥"

"ಕಮಲದ ಹೂ ನಿನ್ನ ಕಾಣದೆ ಇರಲಾರೆ!
ಮಲ್ಲಿಗಿ ಮಾಯ ಬಿಡಲಾರೆ! ಕೇದಿಗೆ!
ಗರಿ ನಿನ್ನ ನಗಲಿ ಇರಲಾರೆ!! " ....ಜನಪದಸಾಹಿತ್ಯ

ಇದೇ ರೀತಿ ಕಾಲಿಗೆ ಪೈಜಾಮು ಚಪ್ಪಲಿ ಹಾಕಿಕೊಂಡು ಟ್ವೀಡ್‌ಕೋಟು ಧರಿಸಿ, ಕ್ರಾಪನ್ನು ತಿದ್ದಿಕೊಂಡು ೨೫ ವರ್ಷದ ತರುಣನು ವಿಹಂಗಮದೃಷ್ಟಿ ಬೀರುತ್ತ, ಸೀಳನ್ನು ಹೊಡೆಯುತ್ತ ಸಾಗಿದಾಗ ಒಮ್ಮೆ ಯಾವರೂ ಓರೆಗಣ್ಣಿನಿಂದ ನೋಡದ ಯುವತಿ ಯಾರು ? ಸಿಟ್ಟಿನಿಂದ ವಿವರದಿಟ್ಟಿಸಿ ನೋಡದವಳಾರು ? ಅದಕ್ಕೆ ನಮ್ಮ ಕರ್ನಾಟಕ ಕವಿವರ್ಯರೊಬ್ಬರು ಹೀಗೆ ಹೇಳಿದ್ದಾರೆ.

" ಯಾರದ್ದು ಇದ ಚೆಲುವ
ತನ್ನಷ್ಟಕ ತಾನೇ ನೋಡಿ ನಲಿವ ॥ "

ದ. ರಾ ಬೇಂದ್ರೆ.

ಈ ಬಗೆಯ ಅಸಕ್ತ ಪ್ರೇಮ ಪ್ರಣಯಗಳು ಮದುವೆಗೆ ಹೆಗ್ಗುರುತಲ್ಲ. ನಮ್ಮ ನಾಡಿನಲ್ಲಿ ಎಲ್ಲ ಕಡೆ ಕಾಣುವದೇನು? ಬಾಳಿನ ಹೊಣೆಯನ್ನು ಅರ್ಥಮಾಡಿಕೊಳ್ಳದ ಪಟ್ಟಣವಾಸದ ಕಾಲೇಜ ಹುಡಗ ಹುಡುಗಿಯರ ಹುಚ್ಚಾಟ. ಒಂದು ಕಡೆಯಲ್ಲಿ ಹಣಗಳ ಕಟ್ಟಿರುವನ್ನು ಕಾಣದೇ ಗಂಡ ಹೆಂಡತಿಯರನ್ನಾಗಿ ಮಾಡುವ ವಳ್ಳಿಗಳು. ವಿ... ಇನ್ನೊಂದು ಕಡೆಯಲ್ಲಿ ಈ ಎರಡೂ ವಿಧದಿಂದ ನಾಡಿಗೆ ತಗಲಿದ ಅನರ್ಥ ಮಾತ್ರ ಒಂದೇ ರೀತಿಯದು. ಗಂಡಹೆಂಡತಿ—ಎರಡು ಗಾಲಿಬಂಡಿ ಮೇಲೆ ಬಾಳಿನ ವ್ಯಕ್ತಿತ್ವ ಮರೆತವರೆಷ್ಟು ಜನ ಬೇಕು? ಮದುವೆಯಾಗಿ ನರಳುವದಕ್ಕಿಂತ ಒಂಟಿಯಾಗಿರುವದು ಲೇಸೆಂದು ಉದ್ಗಾರ ತೆಗೆದವರೆಷ್ಟು? ವಿವಾಹಕಾರ್ಯ ಮುಗಿದ ನಂತರ ಚಿಂತಿಸದವರಿಲ್ಲವೆ?

ಇಂದು ನಾವು ಸಮಾಜಕ್ಕೆ ಕನ್ನಡಿ ಹಿಡಿದಲ್ಲಿ ಕಾಣುವ ನೋಟ ಕನಿಕರವಾದದ್ದು— ಕರುಳನ್ನು ಕಿತ್ತುಕೊಳ್ಳುವದು. ಭಾರತದ ಕೀರ್ತಿಧ್ವಜವನ್ನು ಉನ್ನತವಾಗಿ ಹಾರಿಸಿದ ವೀರ ನಾರಿಯರು ನಮಗೆ ಮರೆಯಾಗಿದ್ದಾರೆ. ಆದರೆ ಅವರ ಜೊತೆಯಲ್ಲಿ ಅವರ ವೀರ ಮಾತುಗಳು, ಆದರ್ಶ ಜೀವನ ನಮಗೆ ಮರೆಯಾಗಿವೆ. ಅವರ ಉಜ್ವಲ ಇತಿಹಾಸವು ನಮ್ಮ ಲಕ್ಷಕ್ಕೆ ಬರದೆ ಕಟ್ಟುಕಥೆಗಳಂತೆ ಕಾಣುತ್ತಿವೆ. ಹಿಂದೂಧರ್ಮದ ಅದರ ಗ್ರಂಥಗಳಾದ ಉಪನಿಷತ್ತುಗಳಲ್ಲಿ "ಮಾತೃದೇವೋಭವ" ಎಂಬ ಮಂತ್ರವು ಮಾತು ಬರಿ ಮಾತಿನಲ್ಲಿ ರೂಢವಾಗಿದೆ. ಕೃತಿಯಲ್ಲಿ ಪರ... ಇಂದಿನ ಹೆಂಡತಿಯು ನಾಳಿನ ಜನಾಂಗದ ತಾಯಿಯೆಂಬುದು ನಮ್ಮ ಗಮನದಲ್ಲಿಲ್ಲ. ಸ್ತ್ರೀ ಎಂಬ ಅವಳೊಂದು ವಸ್ತು. ಇಂದಿನ ಸ್ಥಿತಿಯಲ್ಲಿ ಎಂದರೆ ಮನ ಸಂತೋಷಕ್ಕೆ ಸೇವೆಗೆ, ಸ್ವೇಚ್ಛೋಪಭೋಗಕ್ಕೆ ಸೃಜಿಸಲ್ಪಟ್ಟ ದಾಸಿ. ಸಮಾಜದಲ್ಲಿ ಗಂಡಸಿಗೆ ಸ್ವೇಚ್ಛಾಚಾರದ ಸ್ವಾರ್ಥಪರತೆಗೆ ಉಪಭೋಗಗಳಿಗೆ ಬೇರೆಯಾಗಿ ನೂರಾರು ಶಾಸನಗಳು ಬೇರೆ. ಪರಂಪರಾಗತವಾಗಿ ಬಂದ ಈ ರೂಢಿ ಸನ್ಯಕ್ಕೆ ಧರ್ಮದ ಪೋಷಾಕಿನಲ್ಲಿ ಮರೆಯಾಗಿದೆ. ಆದರೆ ಇದೇ ಘಟನೆಯಿಂದ ಒದಗುವ ಹಾನಿ ತುಂಬಿ ಬರಲಾರದಷ್ಟು ಪ್ರಬಲವಾಗಿವೆ. ದೇಶದಾದ್ಯಂತ ಶಾಂತಿಹೀನ ದುರ್ಬಲ ಜನಾಂಗ ಹಸಿದಿವೆ. "ಅನ್ನ ಅನ್ನ ಬಟ್ಟೆ ಬಟ್ಟೆ" ಎಂದು ದಿಕ್ಕೆಟ್ಟು ಧ್ವನಿಗೆಟ್ಟು ಕೂಗುವ ಆರ್ತನಾದವು ಭಾರತದ ದಶದಿಕ್ಕುಗಳಲ್ಲಿ ಧ್ವನಿಗೊಳ್ಳುತ್ತಿವೆ. ಕೋಟ್ಯಂತರ ಮಂದಿ ಕೂಲಿಜೀವನದಿಂದ ಬದುಕಲಾರದೆ ಸಾವು... ಮಧ್ಯದಲ್ಲಿ ಕೊರಗುವ ಜೀವಂತ ಶವಗಳ ಕೃತ್ರಿಮ ಸೃಷ್ಟಿ ದಿನದಿನಕ್ಕೆ ದೀರ್ಘವಾಗುತ್ತಿದೆ. ಪತ್ನಿ ಪುತ್ರರಿಗೆ ಅಧಾರಸ್ತಂಭವಾದ ಗಂಡನ ಪೋಷಣೆ ಮಾಡಲಾರದ ಬೊಂಬೆಯಾಗಿ— ಇಷ್ಟವಿಲ್ಲದೆ, ಇಂದಿರಲಿ ಮಕ್ಕಳನ್ನು ಯಂತ್ರಗಳಂತೆ ಹಡೆದು ಹಡೆದು ನರಳುತ್ತಿರುವ ಹೆಣ್ಣುಗಳು ತಮ್ಮ ಸಂತಾನವು ಕಣ್ಣೆದುರಿನಲ್ಲಿಯೇ ಬೀದಿಯ ಭಿಕಾರಿಗಳಾಗಿ ಗೋಳಿಡುವ ಹೃದಯದ್ರಾವಕ ದೃಷ್ಟಿಯು ಜನಾಂಗದ ರಕ್ತಕಾಂತಿಯನ್ನೇ ಅವ್ಯಕ್ತವಾಗಿ ಹೀರುವದನ್ನು ಕಂಡುಕೊಳ್ಳುವ ಸಹ ನಮಗೆ ಮತಿಯಿಲ್ಲದಂತಾಗಿದೆ. ದೇಶಗಳು ಬಡವಾಗಲು ಕಾರಣವು ಈ ಪ್ರಶ್ನೆಯಲ್ಲಿ ಅಡಕವಾಗಿದೆ.

ಈ ದುರ್ಘಟನೆಯನ್ನು ಕಂಡು ಮಹಾತ್ಮರು ಬ್ರಹ್ಮಚಾರಿಯಾಗಿರುವದು ದೇಶದ ಕಲ್ಯಾಣಕ್ಕೆ ಒಳ್ಳೆಯದೆಂದು ಘೋಷಿಸಿದರು. ಆಂಗ್ಲ ನಾಟಕ ಚಕ್ರವರ್ತಿ ಷೇಕ್ಸಪಿಯರ, ಗ್ರೀಕ ತತ್ವಜ್ಞಾನಿ ಸಾಕ್ರೆಟಿಸ; ದಾಸವರ್ಯ ಪುರಂದರರು ಮದುವೆಯಾದರು ಚಿಂತೆ ಮದುವೆಯಾಗದಿದ್ದರು ಚಿಂತೆಯೆಂದು ಉಪದೇಶವಿತ್ತರು. ಆಂಗ್ಲ ಸಾಹಿತಿಯೊಬ್ಬನು (If we believe that there is divine ... behind our mortal ... to which we are ... daily ... we can not say that marriage is simply a human ... act) ಹೇಳಿದ್ದರಿಂದ ನಾವು ಈ ... ಯಲ್ಲಿ ಎಲ್ಲಕ್ಕೂ ಮಿಗಿಲಾದ ದಿವ್ಯಶಕ್ತಿಯಿದೆ ಎಂದು ನಂಬಿದಲ್ಲಿ ನಾವು ಮದುವೆಯು ಹೆಣ್ಣು ಗಂಡುಗಳ ಜೋಡಣೆಯೆಂದು ತಿಳಿಯಬಾರದು. ಅದರಿಂದ ನನಗೆ ಈ ವಿವಾಹ ವಿಚಾರಕ್ಕೆ ಯಾವಾಗ ಎಂದು, ಹೇಗೆ ಅರ್ಹನಾಗಬೇಕೆಂಬುದು ಇನ್ನೂ ತಿಳಿಯದಂತಾಗಿದೆ.

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ ರಾಷ್ಟ್ರೀಯ ಸಾಹಿತ್ಯ ಪ್ರಕಾಶನ ಟ್ರಸ್ಟಿನ ಪರವಾಗಿ ಹ. ರಾ. ಮೋಹರೆಯವರಿಂದ ಮುದ್ರಿತ ಪ್ರಕಟವಾಯಿತು.